ಅಧ್ಯಾಯ – ೧೦

# ನ್ಯಾಯಾಡಳಿತ

**ಭ**ರತ ಖಂಡದಲ್ಲಿ ಪ್ರಾಚೀನ ಕಾಲದಿಂದಲೂ ನ್ಯಾಯ, ನೀತಿ, ಧರ್ಮ ಮುಂತಾದ ಉನ್ನತ ಸಾಮಾಜಿಕ ಮೌಲ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು. "ದುಷ್ಟ ಶಿಕ್ಷೆ ಶಿಷ್ಟ ರಕ್ಷೆ" ಪ್ರಾಚೀನ ರಾಜಧರ್ಮದ ಮೂಲಮಂತ್ರವಾಗಿದ್ದಿತು. ಮನು, ಯಾಜ್ಞವಲ್ಕ್ಯ, ಕೌಟಲ್ಯ, ವಿಜ್ಞಾನೇಶ್ವರ ಮುಂತಾದವರ ನೀತಿ ಸಂಹಿತೆಗಳು ಹಾಗೂ ಸ್ಮೃತಿ ದರ್ಶನಗಳಲ್ಲಿ ಮಾಡಿರುವ ಉಲ್ಲೇಖಗಳನ್ವಯ ರಾಜರು ನ್ಯಾಯದಾನ ಮಾಡುತ್ತಿದ್ದರು. ಪ್ರಾಚೀನ ಕರ್ನಾಟಕದಲ್ಲಿಯೂ ಸಹ ನ್ಯಾಯ ತೀರ್ಮಾನವು ರಾಜಾಶ್ರಯದ ಗ್ರಾಮಸಭೆ, ಮಹಾಜನ ಅಗ್ರಹಾರ ಮುಂತಾದ ಸಂಸ್ಥೆಗಳಿಂದ ನೆರವೇರುತ್ತಿತ್ತು. ಗಂಗ ಕದಂಬಾದಿ ರಾಜಮನೆತನದಿಂದ ಇತ್ತೀಚಿನ ಮೈಸೂರು ಒಡೆಯರ ಆಳ್ವಿಕೆ ಅವಧಿಯವರೆಗೆ ರಾಜನೇ ರಾಜ್ಯದ ಮುಖ್ಯ ನ್ಯಾಯಾಧೀಶನಾಗಿದ್ದ ನ್ಯಾಯಾಡಳಿತ ವ್ಯವಸ್ಥೆ ಅಸ್ತಿತ್ವದಲ್ಲಿತ್ತು.

## ಇತಿಹಾಸ ಕಾಲದ ನ್ಯಾಯ ವ್ಯವಸ್ಥೆ

೧೯೯೭ರವರೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ, ಉಡುಪಿ ಜಿಲ್ಲೆಯಲ್ಲಿಯೂ ಸಹ ಟಿಪ್ಪುಸುಲ್ತಾನ್ ಕಾಲದವರೆಗೂ ಅನೇಕ ರಾಜವಂಶಗಳು ಆಳ್ವಿಕೆ ನಡೆಸಿದ್ದರೂ ಸನಾತನ ಧರ್ಮಕ್ಕನುಸಾರವಾದ ನ್ಯಾಯ ವಿತರಣಾ ಪದ್ಧತಿಯು ಅಸ್ತಿತ್ವದಲ್ಲಿತ್ತು. ತುಳುನಾಡಿನ ಭಾಗವಾಗಿರುವ ಉಡುಪಿಯಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಅಳುಪ ರಾಜವಂಶವು ಆಳ್ವಿಕೆ ನಡೆಸುತ್ತಿತ್ತು. ಅವರ ಆಡಳಿತಾವಧಿಯಲ್ಲಿ ಪ್ರಚಲಿತವಾಗಿದ್ದ ನ್ಯಾಯಾಡಳಿತ ವ್ಯವಸ್ಥೆಯ ಬಗ್ಗೆ ಅನೇಕ ಶಾಸನಗಳಲ್ಲಿ ಲಭ್ಯವಾದ ಮಾಹಿತಿಯಂತೆ ರಾಜಾಡಳಿತದ ವಿರುದ್ಧ ನಿಲ್ಲುವ ರಾಜದ್ರೋಹಿಗಳು, ಕಳ್ಳತನ ಮುಂತಾದ ಅಪರಾಧಗಳಿಗೆ ನೀಡುತ್ತಿದ್ದ ಶಿಕ್ಷೆಯ ತೀವ್ರತೆಯು ಸಂದರ್ಭಾನುಸಾರ ಬದಲಾಗುತ್ತಿತ್ತು. ಸರಳ ಶಿಕ್ಷೆಯಿಂದ ಹಿಡಿದು ಜಾತಿ ಬಹಿಷ್ಕಾರ, ರಾಜ್ಯದಿಂದ ಗಡೀಪಾರು ಮುಂತಾದ ತೀವ್ರತರದ ಶಿಕ್ಷೆಗಳನ್ನು ನೀಡುವ ಪದ್ಧತಿ ಇತ್ತು. ಮಧ್ಯಯುಗದ ಆಳುಪರ ಆಡಳಿತಾವಧಿಯಲ್ಲಿ ರಾಜ್ಯಾಡಳಿತದ ಅನುಕೂಲಕ್ಕಾಗಿ ಜಿಲ್ಲಾ ಪ್ರದೇಶವನ್ನು ರಾಜ್ಯ, ವಿಷಯ, ನಾಡು ಮುಂತಾದ ಘಟಕಗಳನ್ನಾಗಿ ವಿಂಗಡಿಸಲಾಗಿತ್ತು. ಇಂತಹ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಅಲ್ಲಿನ ಸಾಮಂತರು, ಪಾಳೇಗಾರರು, ತುಂಡರಸರುಗಳ ಜೊತೆಗೆ ಪ್ರಾಂತಾಧಿಕಾರಿಗಳು ರಾಜನ ಪರವಾಗಿ ನ್ಯಾಯದಾನ ಮಾಡುತ್ತಿದ್ದರು. ಆಗ ರಾಜನೇ ರಾಜ್ಯದ ಅತ್ಯುಚ್ಚ ನ್ಯಾಯಾಧಿಪತಿಯಾಗಿದ್ದನು.

ಉಡುಪಿ ಜಿಲ್ಲೆಯಲ್ಲಿ ದೊರೆತಿರುವ ಪ್ರಾಚೀನ ಶಿಲಾಶಾಸನಗಳಲ್ಲಿ ಆಗಿನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನ್ಯಾಯಾಡಳಿತ ವ್ಯವಸ್ಥೆಯ ಬಗ್ಗೆ ಅನೇಕ ಉಲ್ಲೇಖಗಳಿವೆ. ಉಡುಪಿ ತಾಲೂಕಿನ ವಡ್ಡರ್ಸೆಯಲ್ಲಿ ದೊರೆತಿರುವ ಕ್ರಿ.ಶ. ಏಳನೇ ಶತಮಾನದ ಶಾಸನದಲ್ಲಿ ಗುಂಡಣ್ಣನೆಂಬ ಪ್ರಾಂತಾಧಿಕಾರಿಯು ಆಳುಪ ಅರಸು ಕಂದವರ್ಮನ ನ್ಯಾಯಾಂಗ ನೀತಿ ಸಂಹಿತೆ ಪ್ರಕಾರ ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದ ಬಗ್ಗೆ ಉಲ್ಲೇಖವಿದೆ. ಕ್ರಿ.ಶ.೧೨೦೪ರ ಶಾಸನವೊಂದರಲ್ಲಿ ದಾನದತ್ತಿಗಳ ಬಗ್ಗೆ ಅಗೌರವ ತೋರಿಸಿದಲ್ಲಿ ನೀಡುತ್ತಿದ್ದ ಶಿಕ್ಷೆಯ ಬಗ್ಗೆ ಉಲ್ಲೇಖವಿದೆ. "ನಾಲ್ಕು ಜಾತಿಯೊಳು ಬ್ರಾಹ್ಮಣ ಮಾಡಿದೊಡೆ ನಾಲ್ಕು ಜಾತಿಯಂ ಪೊರಗು; ಸೆಟ್ಟಿ ಮಾಡಿದೊಡೆ ಸರ್ವಸ್ವ ಬಳಂಜದಿಂ ಪೊರಗು; ಒಕ್ಕಲು ಮಕ್ಕಳು ಮಾಡಿದೊಡೆ ತಲೆ ಸಾವಿರ ಹೊನ್ನುದಂಡ" ಎಂದು ವಿವರಣೆ ಇದೆ. " ಇಂತಿ ಇವೆಲ್ಲವಂ ವಿಚಾರಿಸಿ ರಕ್ಷಿಸದಿದ್ದೊಡೆ ಅರಸಿಂಗೆ ಗಂಗೆ ರಾಮೇಶ್ವರದಲು ಸಾವಿರ ಕಪಿಲೆ ಸಾವಿರ ಬ್ರಾಹ್ಮಣರಂ ಕೊಂದ ಪಾಪವಹುದು" ಎಂದು ಹೇಳುತ್ತದೆ. ಹೀಗೆ ಗುರುತರ ಅಪರಾಧಿಗಳಿಗೆ ಜಾತಿಯಿಂದ ಬಹಿಷ್ಕಾರದ ಶಿಕ್ಷೆ ನೀಡಲಾಗುತ್ತಿತ್ತು. ಹೀಗೆ ಬಹಿಷ್ಕರಿಸಲ್ಪಟ್ಟ ಅಪರಾಧಿಗಳನ್ನು "ಹೊರಹಿನವರು" ಎಂದು ಗುರ್ತಿಸಲಾಗುತ್ತಿತ್ತು. ಸಾಮಾನ್ಯ ಅಪರಾಧಿಗಳಿಗೆ ದಂಡರೂಪವಾಗಿ (ಹೊನ್ನು) ಹಣ ಸಂದಾಯ ಮಾಡಬೇಕಾದ ಶಿಕ್ಷೆ ವಿಧಿಸಲಾಗುತ್ತಿತ್ತು ಹಾಗೂ ಶಾಸನದಲ್ಲಿ ಉಲ್ಲೇಖಿಸಲಾದಂತೆ ರಾಜನೂ ಸಹ ತನ್ನ ಕರ್ತವ್ಯದಲ್ಲಿ ಲೋಪ ಮಾಡಬಾರದೆಂದು ಎಚ್ಚರಿಕೆ ನೀಡಲಾಗಿತ್ತು. ೧೩೨೫ರ ಕಾಪು ಗ್ರಾಮದ ಶಾಸನ, ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ಶಾಸನ, ಉದ್ಯಾವರದ ವಿನಾಯಕ ದೇವರ ಧರ್ಮಶಾಸನ ಮುಂತಾದವುಗಳಲ್ಲಿ ದಾನಗಳನ್ನು ಅಗೌರವಿಸಿದವರಿಗೆ ವಿಧಿಸಲಾದ ಶಿಕ್ಷೆಯ ಬಗ್ಗೆ ಉಲ್ಲೇಖಿಸಲಾಗಿದೆ.

ರಾಜ್ಯದ ಅಧಿಕಾರಿಗಳ ನಡುವೆ, ತುಂಡರಸರು ಮತ್ತು ಅಧಿಕಾರಿಗಳ ನಡುವೆ, ವರ್ತಕರು ಮತ್ತು ಜನಸಾಮಾನ್ಯರ ನಡುವೆ ವಿವಾದಗಳಾದಾಗ, ಆ ಪ್ರಾಂತದ ಪ್ರಭಾವೀ ಗಣ್ಯವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳ ಮಧ್ಯಸ್ಥಿಕೆಯಲ್ಲಿ ಉಭಯತ್ರರಿಗೂ ಸಮ್ಮತವಾಗುವಂತೆ ನಿಷ್ಪಕ್ಷಪಾತ ತೀರ್ಮಾನ ನೀಡಲಾಗುತ್ತಿತ್ತು. ೧೪೭೬ರ ಬಾರಕೂರಿನ ಶಾಸನದಲ್ಲಿ ಬಾರಕೂರಿನ ರಾಜ್ಯಪಾಲ ಅಣ್ಣಪ್ಪ ಒಡೆಯನು ಶಿವಳ್ಳಿಯನ್ನು ಆಕ್ರಮಿಸಿ ಗ್ರಾಮವನ್ನು ಸುಟ್ಟಾಗ ಬಾರಕೂರಿನ ವರ್ತಕರು, ಹಾಗೂ ಪ್ರಜಾ ಸಂಘಗಳ ಮಧ್ಯಸ್ಥಿಕೆಯಲ್ಲಿ ಗ್ರಾಮಕ್ಕಾದ ನಷ್ಟ ಪರಿಹರಿಸಲು ಕ್ರಮ ಕೈಗೊಂಡ ಬಗ್ಗೆ ವಿವರಗಳು ದೊರಕಿವೆ. ೧೪೯೯ರ ಕೊಡಿಯಾಲಬೈಲು ಶಾಸನದಲ್ಲಿ ಮಂಗಳೂರಿನ ರಾಜ್ಯಪಾಲನು ಐದು ಮಸೀದಿಗಳನ್ನು ನಾಶಗೊಳಿಸಿದ ಸುದ್ದಿ ತಿಳಿದ ಅರಸನು ವಿಚಾರಣೆ ನಡೆಸಲು ಬೈಚಪ್ಪ ಡಣಾಯಕನನ್ನು ನೇಮಿಸಿ ಹಂಜಮಾನದವರಿಗೆ ಆದ ಅನ್ಯಾಯವನ್ನು ಸರಿಪಡಿಸಲು, ಮಸೀದಿಗಳನ್ನು ಪುನರ್ನಿರ್ಮಿಸಿದ್ದಲ್ಲದೆ ನೊಂದವರಿಗೆ ದಾನ ಧರ್ಮಾದಿಗಳನ್ನು ಮಾಡಿದ ಬಗ್ಗೆ ವಿವರಗಳಿವೆ.

ಕ್ರಿ.ಶ. ೧೪೬೮ರಲ್ಲಿ ಮಂಗಳೂರಿನ ರಾಜ್ಯಪಾಲ ವಿಠರಸನು ಬಂಗವಾಡಿಯ ದೊರೆ ಕಾಮಿರಾಯನ ಕೊಡಿಯಾಲ ಮತ್ತು ನೀರುವಾರ ಗ್ರಾಮಗಳನ್ನು ಸುಟ್ಟ ನಂತರ ಪರಿಹಾರವಾಗಿ ಉಜಿರೆ ಎಂಬ (ಈಗಿನ ಬೆಳ್ತಂಗಡಿ ತಾಲೂಕಿನ ಉಜ್ರೆ) ಗ್ರಾಮವನ್ನು ಬಿಟ್ಟು ಕೊಟ್ಟ ಬಗ್ಗೆ ೧೪೮೯ರ ಉಜ್ರೆ ಶಾಸನದಲ್ಲಿ ವಿವರಗಳಿವೆ. ಆದರೆ ಉಡುಪಿ ಜಿಲ್ಲೆಯ ಯಾವುದೇ ಭಾಗದ ಶಾಸನಗಳಲ್ಲಿಯೂ ಸಹ ಮರಣದಂಡನೆಯ ಬಗ್ಗೆ ಪ್ರಸ್ತಾಪವಿಲ್ಲ. ಕೊಲೆ ಮುಂತಾದ ತೀವ್ರತರದ ಅಪರಾಧಗಳಿಗೂ ಸಹ ಸರಳ ಶಿಕ್ಷೆ ನೀಡುತ್ತಿದ್ದುದು ಕಂಡುಬಂದಿದೆ. ಉದಾಹರಣೆಗೆ ಮಲೆಯ ದಂಡನಾಯಕ ಬಾರ್ಕೂರನ್ನು ಆಳುತ್ತಿದ್ದಾಗ ಒಬ್ಬ ಬ್ರಾಹ್ಮಣನ ಸಾವಿಗೆ ಕಾರಣವಾದ ಗೋವಿಂದ ಮತ್ತು ಕೃಷ್ಣ ಎಂಬಿಬ್ಬರಿಗೆ ದಂಡನಾಯಕನು ದೇವಾಲಯಕ್ಕೆ ದಾನ ನೀಡಬೇಕೆಂದು ತೀರ್ಪು ನೀಡಿದುದು ೧೩೪೨ರ ಬಾರ್ಕೂರಿನ ಶಾಸನದಿಂದ ತಿಳಿದುಬರುತ್ತದೆ. ಹಾಗೆಯೇ ಬಸರೂರಿನ ತಿರುಮ ಹಡವಳ ಮತ್ತು ಬೊಮ್ಮಸೆಟ್ಟಿ ಎಂಬುವರ ಸಾವಿಗೆ ಕಾರಣವಾದವರಿಗೆ ಅಲ್ಲಿನ ಪಡುವಕೇರಿ ಸೆಟ್ಟಿಕಾರ ಸಂಘವು ವಿಚಾರಣೆ ನಡೆಸಿ ಅಪರಾಧಿಗಳು ನಖರೇಶ್ವರ ಮಹಾದೇವರಿಗೆ ಧನಕನಕಾದಿ ದಾನಗಳನ್ನು ನೀಡಬೇಕೆಂದು ತೀರ್ಪು ನೀಡಿದ ವಿಷಯ ೧೪೪೪ರ ಬಸರೂರಿನ ಶಾಸನದಲ್ಲಿ ಕಂಡುಬರುತ್ತದೆ. ಹೀಗೆ ಅಪರಾಧಿಗಳಿಗೆ ಹಣದ ರೂಪದಲ್ಲಿ ದಂಡ ಪಾವತಿ, ಬಹಿಷ್ಕಾರ, ಗಡೀಪಾರು ಮುಂತಾದ ಶಿಕ್ಷೆ ನೀಡುತ್ತಿದ್ದ ವ್ಯವಸ್ಥೆ ಉಡುಪಿ ಜಿಲ್ಲೆಯ ಎಲ್ಲಾ ಪ್ರಾಂತಗಳಲ್ಲಿತ್ತು.

ಆಳುಪರ ನಂತರ ವಿಜಯನಗರ ಆಳ್ವಿಕೆಯ ಅವಧಿಯಲ್ಲಿ ವೇದಮೂಲದ ಚಾತುರ್ವರ್ಣ್ಯ ಸಾಮಾಜಿಕ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು. ರಾಜನು ಧರ್ಮಶಾಸ್ತ್ರಗಳ ಪ್ರಕಾರ ನ್ಯಾಯ, ನೀತಿ, ಧರ್ಮಾಚರಣೆಗಳಿಗನುಗುಣವಾಗಿ ಆಡಳಿತ ನಡೆಸುತ್ತಿದ್ದನು. ಅದರಂತೆ ಜಿಲ್ಲೆಯ ಎಲ್ಲಾ ಪ್ರಾಂತಗಳಲ್ಲಿನ ಗ್ರಾಮಗಳ ಬ್ರಾಹ್ಮಣರ ಅಗ್ರಹಾರಗಳಿಗೆ ಉನ್ನತ ಸ್ಥಾನ ನೀಡಲಾಗಿತ್ತು. ಕ್ರಿ.ಶ.ಎಂಟನೇ ಶತಮಾನದ ಉಡುಪಿಯ ಶಿವಳ್ಳಿ ಶಾಸನದಲ್ಲಿ ಶಿವಳ್ಳಿಯ ಬ್ರಾಹ್ಮಣರೇ ನ್ಯಾಯಾಡಳಿತ ವ್ಯವಸ್ಥೆಯ ಉನ್ನತಾಧಿಕಾರಿಗಳಾಗಿದ್ದ ಬಗ್ಗೆ ಉಲ್ಲೇಖವಿದೆ. ಹಾಗೆಯೇ ಉದ್ಯಾವರದ ಕ್ರಿ.ಶ.ಎಂಟನೇ ಶತಮಾನದ ಶಾಸನವು, ಶಿವಳ್ಳಿ ವಾರಾಣಾಸಿ ಹಾಗೂ ಬನವಾಸಿ ಕೇಂದ್ರಗಳನ್ನು ನಾಶಮಾಡುವ ಪ್ರಯತ್ನವು ಪಂಚ ಮಹಾಪಾತಕಗಳಿಗೆ ಸಮ ಎಂದು ಹೇಳಿದೆ. ಹೀಗೆ ಪ್ರತಿಯೊಂದು ಪ್ರಾಂತದಿಂದ ಹಿಡಿದು ಆಡಳಿತದ ಅತಿ ಚಿಕ್ಕ ಘಟಕಗಳಾದ ಗ್ರಾಮಗಳವರೆಗೆ ಎಲ್ಲ ಕಡೆ ಧರ್ಮಶಾಸ್ತ್ರಗಳನ್ನು ಆಧಾರವಾಗಿರಿಸಿ ರೂಪಿಸಿದ ನೀತಿಸಂಹಿತೆ ಹಾಗೂ ನಿಯಾಮಾವಳಿಗಳಂತೆ ಆಡಳಿತ ನಡೆಯುತ್ತಿತ್ತು. ಇದರಿಂದ ಆಗಿನ ಜನರ ಧರ್ಮಭಿರುಚಿ ಹಾಗೂ ದೈವಭಕ್ತಿಯ ಪರಿಚಯವಾಗುತ್ತದೆ. ಇದಲ್ಲದೇ ಪ್ರತಿ ಜಾತಿ ಸಮುದಾಯದಲ್ಲೂ ಅದರದೇ ಆದ ಕಾನೂನು–ಕಟ್ಟಳೆಗಳ ನೆರವಿನಿಂದ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಶ್ರಮಿಸಲಾಗುತ್ತಿತ್ತು.

ರಾಜ್ಯದ ಅತಿ ಚಿಕ್ಕ ಘಟಕಗಳಾದ ಗ್ರಾಮಗಳಲ್ಲೂ ನ್ಯಾಯಪಾಲನೆಯ ಬಗ್ಗೆ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಗ್ರಾಮಗಳ ಮಟ್ಟದಲ್ಲಿ ಶಾಂತಿ ನೆಲೆಸಿದರೆ ಮಾತ್ರ ಒಟ್ಟು ರಾಜ್ಯವು ಪ್ರಗತಿ ಹೊಂದುತ್ತದೆಂಬ ದೃಢ ನಂಬಿಕೆ ಅಂದಿನ ಜನರಲ್ಲಿತ್ತು. ಸರ್ವೇ ಜನಾಃ ಸುಖಿನೋ ಭವಂತು, ರಾಜ್ಯಾಭೀವೃದ್ಧಿ ಪ್ರವರ್ಧಮಾನಂ ಎಂಬುದು ಅಂದಿನ ಆಳರಸರ ಧ್ಯೇಯವಾಕ್ಯವಾಗಿತ್ತು. ಗ್ರಾಮದಲ್ಲಿ ಗ್ರಾಮ ಚಾವಡಿಯು ನ್ಯಾಯಾಲಯದಂತೆ ಕಾರ್ಯನಿರ್ವಹಿಸುತ್ತಿತ್ತು. ಗ್ರಾಮಣಿ, ಮಧ್ಯಸ್ಥ, ಜನ್ನಿ, ಹೆಗ್ಗಡೆ ಮೊದಲಾದ ಗ್ರಾಮ ಪ್ರಮುಖರನ್ನೊಳಗೊಂಡ ಈ ಸಭೆಯು ಗ್ರಾಮದ ಪರಿಧಿಯಲ್ಲಿ ಉಂಟಾಗುವ ಸಾಮಾನ್ಯ ವಿವಾದಗಳನ್ನು ಪರಿಹರಿಸಿ ಗ್ರಾಮದ ಶಾಂತಿ ಕಾಪಾಡುತ್ತಿತ್ತು. ಅಂತೆಯೇ ಗ್ರಾಮದ ಪ್ರತಿ ಸಮುದಾಯವು "ಗುರಿಕಾರ"ನೆಂಬ ನಾಯಕನ ನೇತೃತ್ವದಲ್ಲಿ ಸಭೆ ನಡೆಸಿ ನ್ಯಾಯ ತೀರ್ಮಾನ ಮಾಡುವ ವ್ಯವಸ್ಥೆ ಇತ್ತು. ಇಂತಹ ಸ್ಥಳೀಯ ಸಭೆಗಳಲ್ಲಿ ನೀಡಲಾದ ತೀರ್ಪುಗಳು ಸಮ್ಮತವೆನಿಸದಿದ್ದಲ್ಲಿ ಆ ತೀರ್ಪನ್ನು "ಸೀಮೆ", "ನಾಡು" ಅಥವಾ "ಮಾಗಣೆ" ಮಟ್ಟದಲ್ಲಿನ ಸಭೆಗಳಲ್ಲಿ ಪ್ರಶ್ನಿಸಬಹುದಾಗಿತ್ತು. ಈ ಸಭೆಗಳಲ್ಲಿ "ನಾಡಪ್ರಭು" ವ್ಯಾಜ್ಯಗಳನ್ನು ಆಲಿಸಿ ತೀರ್ಪು ನೀಡುತ್ತಿದ್ದನು. ಅಲ್ಲದೇ ತನ್ನ ಆಡಳಿತ ಪರಿಧಿಯ ಯಾವುದೇ ಗ್ರಾಮಸಭೆಯ ತೀರ್ಪನ್ನು ಪುನರ್ಪರಿಶೀಲಿಸುವ, ಬದಲಾಯಿಸುವ ಅಧಿಕಾರವನ್ನು ಈತನು ಹೊಂದಿದ್ದನು. ಇಲ್ಲಿನ ತೀರ್ಮಾನಗಳನ್ನು ಪ್ರಶ್ನಿಸಿ ಪ್ರಾಂತ ಮಟ್ಟದ ನ್ಯಾಯಸಭೆಗಳಲ್ಲಿ ನ್ಯಾಯ ಕೇಳುವ ಉದಾಹರಣೆ ಅತಿವಿರಳ. ನ್ಯಾಯಸ್ಥಾನಗಳಲ್ಲಿದ್ದ ಮಧ್ಯಸ್ಥನೆಂಬ ಅಧಿಕಾರಿಯು ನ್ಯಾಯ ನಿರ್ಣಯ ಮತ್ತು ವ್ಯಾಜ್ಯಗಳಲ್ಲಿ ಮಧ್ಯಸ್ಥಿಕೆ ವಹಿಸುವ ಮೂಲಕ ನ್ಯಾಯಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದನು. ಬಾರಕೂರು, ಬಸರೂರು, ಮಂಗಳೂರು, ವೇಣೂರು, ಮೂಡಬಿದಿರೆ, ಕಾರ್ಕಳ ಮುಂತಾದ ಪಟ್ಟಣಪ್ರದೇಶದಲ್ಲಿದ್ದ 'ಹಲರು' ಎಂಬ ಪೌರಾಡಳಿತ ಸಭೆಗಳು ಆಡಳಿತ ವಿವಾದಗಳನ್ನು ಬಗೆಹರಿಸುತ್ತಿತ್ತು. ವ್ಯಾಪಾರಕ್ಕೆ ಸಂಬಂಧಿಸಿದಂತೆ ಉಂಟಾದ ವಿವಾದಗಳನ್ನು ಸೆಟ್ಟಿಕಾರ ಸಂಘಗಳು ಬಗೆಹರಿಸುತ್ತಿದ್ದವು. ಅತಿಗಂಭೀರ ಪ್ರಕರಣಗಳಲ್ಲಿ ಮಾತ್ರ ರಾಜನವರೆಗೆ ದೂರು ಕೊಂಡೊಯ್ಯಲಾಗುತ್ತಿತ್ತು. ಹೊಯ್ಸಳರ ಕಾಲದಲ್ಲಿ ನಖರ, ಸೆಟ್ಟಿಕಾರ ಮತ್ತು ನಖರ ಹಂಜಮಾನ ಎಂಬ ಪ್ರಮುಖ ವ್ಯಾಪಾರಿ ಸಂಘಗಳು ಮತ್ತು ವರ್ತಕ ಸಂಘಗಳ ಅಧಿಕಾರಿಯೇ ನ್ಯಾಯ ನಿರ್ಣಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದ ವಿಷಯದ ಉಲ್ಲೇಖ ಶಾಸನಗಳಲ್ಲಿದೆ. ಬಾರಕೂರಿನ ಮೂರು ಕೇರಿಯ ಸೆಟ್ಟಿಕಾರರು, ಮೂಡಬಿದಿರೆಯ ಎಂಟು ಕೇರಿ ಸೆಟ್ಟಿಕಾರರೆಂಬ ಸಂಘಟನೆಗಳು ರಾಜ್ಯದ ವಾಣಿಜ್ಯ ವಹಿವಾಟಿನ ಆಗುಹೋಗುಗಳ ಬಗ್ಗೆ ಮಹತ್ವದ ಪಾತ್ರ ವಹಿಸುತ್ತಿದ್ದವು.

ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ನ್ಯಾಯದಾನ ಮಾಡುವ ಅಧಿಕಾರಿಗೆ 'ಮಧ್ಯಸ್ಥ' ಎಂಬ ಪದನಾಮವಿತ್ತು. ಹಾಗೆಯೇ ಕಟ್ಟಳೆಯವರು ಮತ್ತು ಸಮಸ್ತ ಕಟ್ಟಳೆಯವರು ಎಂದು ಹೆಸರಿಸಲ್ಪಟ್ಟ

ಅಧಿಕಾರಿಗಳನೇಕರು ನ್ಯಾಯಾಂಗ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ರಾಜಕೀಯ ಹಾಗೂ ಯುದ್ಧಾಪರಾಧಗಳಲ್ಲಿ ಕಾರ್ಯಾಂಗವೇ ನ್ಯಾಯಾಂಗವಾಗಿ ಕಾರ್ಯನಿರ್ವಹಿಸುತ್ತಿತ್ತು.

## ತುಳುನಾಡಿನ ಅಳಿಯ ಸಂತಾನ ಪದ್ಧತಿ

ವಿಜಯನಗರಾನಂತರದ ಕೆಳದಿ ರಾಜವಂಶದ ಆಡಳಿತ ಕಾಲದಲ್ಲಿ ಅನುಸರಿಸಲಾಗುತ್ತಿದ್ದ ಕಾನೂನುಗಳ ಬಗ್ಗೆ ಬಸವಪ್ಪನಾಯಕನ 'ಶಿವತತ್ವ ರತ್ನಾಕರ' ಬೆಳಕು ಚೆಲ್ಲುತ್ತದೆ. ಕೆಳದಿಯ ಕಲ್ಲುಕುಟಿಗರಲ್ಲಿ ಬಳಕೆಯಲ್ಲಿದ್ದ 'ಅಳಿಯ ಸಂತಾನ' ಎಂಬ ವಿಶಿಷ್ಟ ಕಾನೂನು ವಿಷಯದಲ್ಲೂ ಸದರಿ ಕೃತಿಯಲ್ಲಿ ಉಲ್ಲೇಖಗಳಿವೆ. ಇದೇ ಕಾನೂನು ಉಡುಪಿ ಜಿಲ್ಲೆಯಲ್ಲಿ ಜಾರಿಯಲ್ಲಿತ್ತು. ಅದರ ಪ್ರಕಾರ ಕುಟುಂಬವು ಮಹಿಳಾ ಪ್ರಧಾನವಾಗಿದ್ದು ಆಸ್ತಿ ಹಕ್ಕು ಹೆಣ್ಣುಮಕ್ಕಳಿಗಿದ್ದು ಅವರಿಂದ ಕುಟುಂಬದ ಅಳಿಯನಿಗೆ ಆಸ್ತಿ ಬರುತ್ತಿತ್ತು. ಈ ಪದ್ಧತಿಯು ಮಾತೃ ಮೂಲ ಕುಟುಂಬ ಪದ್ಧತಿಯೆಂದು ಹೆಸರಾಗಿದೆ. ಇದನ್ನು ಅಳಿಯಕಟ್ಟು ಎಂದೂ ಕರೆಯಲಾಗುತ್ತದೆ. ನೆರೆಯ ಕೇರಳ ರಾಜ್ಯದಲ್ಲಿ ಅನಾದಿ ಕಾಲದಿಂದಲೂ ಈ ಪದ್ಧತಿ 'ಮರುಮಕ್ಕತಾಯಂ' ಎಂಬುದಾಗಿ ಬಳಕೆಯಲ್ಲಿತ್ತು. ದಿವಂಗತ ರಾಷ್ಟ್ರಕವಿ ಎಂ.ಗೋವಿಂದ ಪೈರವರು ಉಲ್ಲೇಖಿಸಿರುವಂತೆ ಈ ಮಾತೃಪ್ರಧಾನ ಕುಟುಂಬ ಪದ್ಧತಿ ದಕ್ಷಿಣ ಅಮೆರಿಕಾದ Hispaniola ಎಂಬ ಪ್ರಾಂತದ ಮೂಲವಾಸಿಗಳಲ್ಲಿ New Granada ಮತ್ತು Bogota ಎಂಬ ಪ್ರದೇಶದಲ್ಲಿ, ಉತ್ತರ ಅಮೆರಿಕಾದ Huron ಮತ್ತು Natchez ಎಂಬ ಬುಡಕಟ್ಟು ಜನರಲ್ಲಿ, ಆಫ್ರಿಕಾ ಖಂಡದ Diger ಎಂಬ ಪ್ರಾಂತ್ಯದ ನೀಗ್ರೋ ಜನರಲ್ಲಿ, ಸುಮಾತ್ರ ದ್ವೀಪದ ವಲಯ ಎಂಬ ಬುಡಕಟ್ಟಿನಲ್ಲಿ, ಸಿಂಹಳ ದ್ವೀಪದ Binfenne ಯ ಆಸುಪಾಸಿನ ಪ್ರದೇಶಗಳಲ್ಲಿ, ಭರತ ಖಂಡದ ಪೂರ್ವ ಬಂಗಾಳದ Sylchet ಬೆಟ್ಟಗಳಲ್ಲಿನ ಕಾಸೀ ಜನರಲ್ಲಿ ಇತ್ತು. ತ್ರಿಪುರ ಸಂಸ್ಥಾನದ ರಾಜಕುಟುಂಬದಲ್ಲಿ ಪೂರ್ವದಿಂದಲೂ ಬಳಕೆಯಲ್ಲಿದ್ದು ಈಗಲೂ ಈ ಪದ್ಧತಿ ಜಾರಿಯಲ್ಲಿದೆ. ಹೀಗೆ ಉಡುಪಿ ಜಿಲ್ಲೆಯ ಅಳಿಯಕಟ್ಟಿನ ಇತಿಹಾಸ ಕ್ರಿಸ್ತಪೂರ್ವದಷ್ಟು ಪ್ರಾಚೀನ. ಈ ಪದ್ಧತಿಯು ಆಳುಪರ ಭೂತಾಳ ಪಾಂಡ್ಯ ರಾಜನಿಗಿಂತ ಮೊದಲೇ ಅಸ್ತಿತ್ವದಲ್ಲಿದ್ದು ಆತನ ಆಳ್ವಿಕೆಯ ಅವಧಿಯಲ್ಲಿ ಈ ಪದ್ಧತಿಗೆ ನೀತಿ ನಿಯಮಗಳನ್ನು ರೂಪಿಸಿ 'ರಾಜಮಾನ್ಯತೆ' ನೀಡಿರಬಹುದು. ಹೀಗೆ ಈ ಪದ್ಧತಿಯು ಹೆಸರಿನಿಂದ ಭೂತಾಳ ಪಾಂಡ್ಯಕಟ್ಟು ಎಂದು ಹೆಸರಾಗಿದೆ. ಈ ಪ್ರಾಚೀನ ಸಂಪ್ರದಾಯದಂತೆ ಆಸ್ತಿ ಸೇರಿದಂತೆ ಕುಟುಂಬದ ಸಮಸ್ತ ಹಕ್ಕು ಕುಟುಂಬದ ಸ್ತ್ರೀ ಸಂತಾನಕ್ಕೆ ಸಲ್ಲುತ್ತದೆ. ಸ್ತ್ರೀಯರಿಗೇ ಆಸ್ತಿ ಹಕ್ಕು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಗೊಳ್ಳುತ್ತದೆ. ವಿವಾಹದ ತರುವಾಯ ಆಕೆಯ ಪತಿಯು ಆಸ್ತಿಯ ಸ್ವಾಧೀನ ಪಡೆದರೂ ಆತನ ಮರಣಾನಂತರ ಆತನ ಮಕ್ಕಳಿಗೆ ಆಸ್ತಿಯ ಮೇಲೆ ಯಾವುದೇ ಹಕ್ಕು ಬಾಧ್ಯತೆಗಳಿರುವುದಿಲ್ಲ ಹಾಗೂ ಗಂಡನ ಮನೆಯ ಆಸ್ತಿಯ ಮೇಲೆ ಸ್ತ್ರೀಗೂ ಹಕ್ಕಿರುವುದಿಲ್ಲ. ಬದಲಿಗೆ ಆತನ ಸೋದರಿ ಅಥವಾ ಸೋದರಿಯ ಹೆಣ್ಣುಮಕ್ಕಳಿಗೆ ಆಸ್ತಿಯ ಹಕ್ಕು ಸಲ್ಲುತ್ತದೆ. ಹೀಗೆ ಶತಮಾನಗಳಿಂದಲೂ ಕರಾವಳಿ ಜಿಲ್ಲೆ ಉಡುಪಿಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ ಈ ಪದ್ಧತಿಯು ಸ್ವಾತಂತ್ರ್ಯಾನಂತರದ ಕಾಲಘಟ್ಟಗಳಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಐವತ್ತರ ದಶಕದಲ್ಲಿ ಜಾರಿಗೊಂಡ "೧೯೫೬ರ ಹಿಂದೂ ಉತ್ತರದಾಯಿತ್ವ ಅಧಿನಿಯಮ"ದ ಪ್ರಕಾರ ಹಿಂದೂಗಳ ಆಸ್ತಿ ಹಕ್ಕು ಸಮಗ್ರವಾಗಿ ಪರಿಷ್ಕರಣೆಗೊಂಡಾಗ 'ಅಳಿಯಕಟ್ಟಿನ' ಅನೇಕ ವಿಧಿಗಳು ರದ್ದುಗೊಂಡವು. ಸದರಿ ಕಾನೂನಿಗೆ ವರ್ಷ ೨೦೦೫ರಲ್ಲಿ ತಂದ ಸಮಗ್ರ ತಿದ್ದುಪಡಿಯ ಫಲಶ್ರುತಿಯಾಗಿ ಈ ಸಂಪ್ರದಾಯವು ಸಂಪೂರ್ಣವಾಗಿ ರದ್ದುಗೊಂಡಿದೆ. ೧೭-೬-೧೯೫೬ರವರೆಗೆ ಚಾಲ್ತಿಯಲ್ಲಿದ್ದ ಈ ಪದ್ಧತಿಯು ಕೆಲ ಸಾಂಪ್ರದಾಯಿಕ ಅವಿಭಕ್ತ ಕುಟುಂಬಗಳಲ್ಲಿ ಹುಟ್ಟು, ಸಾವು ಹಾಗೂ ಸಾಮಾಜಿಕ ಸಂಬಂಧಗಳ ನೆಲೆಯಲ್ಲಿ ಇಂದೂ ಸಹ ಜೀವಂತವಾಗಿದೆ.

## ಆಧುನಿಕ ಯುಗದಲ್ಲಿ ನ್ಯಾಯಾಂಗ ವ್ಯವಸ್ಥೆ

ಮಧ್ಯಯುಗಾನಂತರದ ಅವಧಿಯಲ್ಲಿ ಉಡುಪಿ ಜಿಲ್ಲೆಯು ಹೊಯ್ಸಳ, ವಿಜಯನಗರ, ಕೆಳದಿ, ಮೈಸೂರು ಸಂಸ್ಥಾನಗಳ ಹಾಗೂ ನಂತರ ಹೈದರ್ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಯಲ್ಲಿತ್ತು. ಅಂದಿನ ನ್ಯಾಯ ನಿರ್ವಹಣೆಯು ಕಂದಾಯ ಇಲಾಖೆಯ ಅಧಿಕಾರಿಗಳ ಜವಾಬ್ದಾರಿಯಾಗಿತ್ತು. ಇದೇ ಪದ್ಧತಿಯು

ಬ್ರಿಟೀಷ್ ಕಂಪನಿ ಆಳ್ವಿಕೆ ಪ್ರಾರಂಭದವರೆಗೂ ಬಳಕೆಯಲ್ಲಿತ್ತು. ನ್ಯಾಯಾಂಗ ಇಲಾಖೆಗೆ ಪ್ರತ್ಯೇಕ ಅಸ್ತಿತ್ವ ಬಂದದ್ದು ಆಂಗ್ಲರ ಆಳ್ವಿಕೆಯ ಕಾಲದಲ್ಲಿ. ಕ್ರಿ.ಶ. ೧೭೬೫ರಲ್ಲಿ ಬಂಗಾಳದಲ್ಲಿ ನೆಲೆಯಾಗಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತಂದಿತು. ಕ್ರಿ.ಶ.೧೮೦೨ರಲ್ಲಿ ಸದರಿ ವ್ಯವಸ್ಥೆಯನ್ನು ಮದ್ರಾಸ್ ಹಾಗೂ ಭಾರತದ ಇನ್ನಿತರ ಸಂಸ್ಥಾನಗಳಿಗೆ ವಿಸ್ತರಿಸಲಾಯಿತು. ಅದೇ ವರ್ಷ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಕೋರ್ಟ್ ಆಫ್ ಫೌಜ್‌ದಾರಿ ಅದಾಲತ್, ಕೋರ್ಟ್ ಆಫ್ ಸರ್ಕ್ಯೂಟ್ (ಸಂಚಾರಿ) ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತಸ್ತ. ಜಿಲ್ಲಾ ಮ್ಯಾಜಿಸ್ಟ್ರೇಟ್ ಕಛೇರಿಯನ್ನು ಜಿಲ್ಲಾ ಸಿವಿಲ್ ನ್ಯಾಯಾಧೀಶರ ವ್ಯಾಪ್ತಿಗೆ ತರಲಾಯಿತು. ಫೋರ್ಟ್ ಸೇಂಟ್‌ಜಾರ್ಜ್ ಸರ್ಕಾರದಡಿ ನಾಲ್ಕು ಸಂಚಾರಿ ನ್ಯಾಯಾಲಯಗಳನ್ನೂ ಸ್ಥಾಪಿಸಲಾಯ್ತು. ಮುಂದೆ ೧೮೦೬ರಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾರ್ಪಾಡಾಗಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಕೇಂದ್ರ ವಿಭಾಗಗಳ ಅಥವಾ ಪ್ರಾಂತಗಳ ಸಂಚಾರಿ ನ್ಯಾಯಾಲಯಗಳೆಂದು ಕರೆಯಲಾಯಿತು. ಈ ವ್ಯವಸ್ಥೆಯಂತೆ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಗಿದ್ದ ಈ ಜಿಲ್ಲೆಯು, ಕೆನರಾ ಮತ್ತು ಸೋಂದಾ ಪ್ರಾಂತಗಳು ಸೇರಿದಂತೆ ಪಶ್ಚಿಮ ವಿಭಾಗದಡಿ ಬಂದಿತು. ಉಡುಪಿಯೂ ಸೇರಿದಂತೆ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯು ಪ್ರಭಾರ ದಂಡಾಧಿಕಾರಿಯಾಗಿದ್ದನು. ೧೮೦೬ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ಹಲವು ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳು ಸ್ಥಾಪಿತವಾದವು. ಆಗ ಆಗಿನ ಜಿಲ್ಲಾ ಕೇಂದ್ರವಾದ ಮಂಗಳೂರಿನಲ್ಲಿ ಕೆನರಾ ಮತ್ತು ಸೋಂದಾ ಪ್ರಾಂತಗಳಿಗಾಗಿ ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಮುಖ್ಯ ನ್ಯಾಯಾಧೀಶ ಹಾಗೂ ದಂಡಾಧಿಕಾರಿ ಹುದ್ದೆಗೆ ಬ್ರಿಟಿಷ್ ಅಧಿಕಾರಿಗಳನ್ನು ನೇಮಿಸುವ ವಾಡಿಕೆ ಇತ್ತು. ಆಗಿನ ಜಿಲ್ಲಾಧಿಕಾರಿಗೆ ನೀಡಲಾಗಿದ್ದ ದಂಡಾಧಿಕಾರವನ್ನು ರದ್ದುಮಾಡಲಾಗಿತ್ತು. ಜಿಲ್ಲಾ ನ್ಯಾಯಾಧೀಶರ ಅಡಿಯಲ್ಲಿ ಜೈಲು ಸಿಬ್ಬಂದಿ, ಮುಸ್ಲಿಂ ಕಾನೂನಿನ ಉಸ್ತುವಾರಿಗೆ ಮುಫ್ತಿ ಮತ್ತು ಹಿಂದೂ ಕಾನೂನಿನ ಉಸ್ತುವಾರಿಕೆಗೆ ಪಂಡಿತ ಹಾಗೂ ಇನ್ನಿತರ ಲಿಪಿಕ ಹಾಗೂ ನ್ಯಾಯಿಕ ನೌಕರರನ್ನು ನೇಮಿಸಲಾಗುತ್ತಿತ್ತು ಮತ್ತು ಜಿಲ್ಲಾ ನ್ಯಾಯಾಧೀಶರಿಗೆ ಹಲವು ಸರ್ಕಾರಿ ಸವಲತ್ತನ್ನು ಒದಗಿಸಲಾಗಿದ್ದಿತು. ೧೮೦೮ರಲ್ಲಿ ಜಿಲ್ಲಾ ನ್ಯಾಯಾಧೀಶರ ಕಛೇರಿಯನ್ನು ಮಂಗಳೂರಿನಿಂದ ಹೊನ್ನಾವರಕ್ಕೆ ಬದಲಾಯಿಸಲಾಯಿತು. ಆನಂತರ ಪ್ರಮುಖ ವ್ಯಾಪಾರಿಗಳು ಮತ್ತು ಶ್ರೀಮಂತರ ಕೋರಿಕೆಯನ್ನು ಮನ್ನಿಸಿ ೧೮೧೨ರಲ್ಲಿ ಪುನಃ ಮಂಗಳೂರಿಗೆ ವರ್ಗಾಯಿಸಲಾಯಿತು. ೧೮೧೬ರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೋಲಿಸರ ಕರ್ತವ್ಯಗಳು ಜಿಲ್ಲಾ ನ್ಯಾಯಾಧೀಶರಿಂದ ಜಿಲ್ಲಾಧಿಕಾರಿಗೆ ವರ್ಗಾವಣೆಯಾಯಿತು. ಅಲ್ಲದೆ ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ೧೮೧೬ರಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಜಿಲ್ಲಾ ಮುನ್ಸೀಫರನ್ನು ನೇಮಕ ಮಾಡಲಾಯಿತು ಮತ್ತು ಗ್ರಾಮ ಮುಖ್ಯಸ್ಥರನ್ನು ಮುನ್ಸೀಫರನ್ನಾಗಿ ನೇಮಿಸಲಾಯ್ತು.

ಸದರಿ ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿ ನೋಂದಣಿ ನ್ಯಾಯಾಲಯಗಳು ಮತ್ತು ಅದರಡಿ ಸ್ಥಳೀಯ ಕಮೀಷನರ್ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಸರ್ಕಾರಿ ನೌಕರರೊಬ್ಬರನ್ನು 'ರಿಜಿಸ್ಟ್ರಾರ್' ಆಗಿ ನೇಮಿಸಲಾಗುತ್ತಿತ್ತು. ಜಮೀನುದಾರರು, ಜಹಗೀರ್‌ದಾರರು, ವ್ಯಾಪಾರಿಗಳು, ಖಾಜಿಗಳು ಮೊದಲಾದ ಗಣ್ಯರಲ್ಲೊಬ್ಬರು ಸ್ಥಳೀಯ ಕಮೀಷನರಾಗಿ ನೇಮಕಗೊಳ್ಳುತ್ತಿದ್ದರು ಮತ್ತು ಅವರನ್ನು ಸದರ್ ಅಮೀನ್ ಎಂಬ ಪದನಾಮದಿಂದ ಗುರ್ತಿಸಲಾಗುತ್ತಿತ್ತು. ೧೮೪೩ರಲ್ಲಿ ಅವರಿಗೆ 'ಪ್ರಧಾನ ಸದರ್ ಅಮೀನ' ಎಂಬ ಬದಲಿ ಪದನಾಮ ನೀಡಲಾಯಿತು. ಅವರು ಗೇಣಿದಾರರು ಹಾಗೂ ರೈತರ ಮೊಕದ್ದಮೆಗಳಲ್ಲಿ ಮುನ್ಸೀಫರಂತೆ ಕಾರ್ಯನಿರ್ವಹಿಸುತ್ತಿದ್ದರು.

ಹೀಗೆ ಬ್ರಿಟಿಷ್ ನ್ಯಾಯಿಕ ಪದ್ಧತಿಯು ಜನಪ್ರಿಯಗೊಂಡು ಆ ವರೆಗೆ ಭಾರತದಲ್ಲಿ ಅನುಸರಿಸಲಾಗುತ್ತಿದ್ದ ಮಧ್ಯಸ್ಥಿಕೆ ವ್ಯವಸ್ಥೆ ಕಣ್ಮರೆಯಾಯಿತು ಹಾಗೂ ಪ್ರಾಚೀನ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದ ಮಧ್ಯಸ್ಥ, ಗೌಡ, ಪಟೇಲ, ಜಮೀನ್ದಾರ, ಜೋಡಿದಾರ ಮುಂತಾದವರು ಕಡಗಣಿಸಲ್ಪಟ್ಟರು. ಬ್ರಿಟಿಷ್ ವ್ಯವಸ್ಥೆ ವ್ಯವಸ್ಥಿತ ಸಾಂಸ್ಥಿಕ ಗುಣಲಕ್ಷಣಗಳನ್ನು ಹೊಂದಿತ್ತು. ಸಮಸ್ತ ನ್ಯಾಯಿಕ ಅಧಿಕಾರಿ ವರ್ಗಕ್ಕೆ

ಅನ್ವಯವಾಗುವ ಅಧಿಕಾರದ ಲಕ್ಷಣಗಳು, ಜವಾಬ್ದಾರಿ, ಸವಲತ್ತುಗಳ ಬಗ್ಗೆ ಶ್ರೇಣೀಕೃತ ವಿವರಗಳನ್ನೊದಗಿಸಲಾಗಿತ್ತು. ಈ ರೀತಿಯ ವ್ಯವಸ್ಥಿತ ನ್ಯಾಯಾಂಗವು ವಸಾಹತು ನಿಯಂತ್ರಣ ಹಾಗೂ ಸಾಮಾನ್ಯ ಅಧಿಕಾರದ ಮುಖ್ಯ ಕೇಂದ್ರವಾಗಿತ್ತು. ಆದಾಗ್ಯೂ ಬ್ರಿಟೀಷ್ ನ್ಯಾಯ ವ್ಯವಸ್ಥೆಯಲ್ಲಿ ನ್ಯಾಯ ನೀಡಿಕೆ ಪ್ರಕ್ರಿಯೆಯು ವಿಳಂಬ ಸ್ವರೂಪದ್ದಾಗಿತ್ತಲ್ಲದೆ ಸ್ಥಳೀಯರಿಗೆ ದುಬಾರಿಯೆಂದೆನಿಸಲ್ಪಟ್ಟ ಶುಲ್ಕ ಹಾಗೂ ಜುಲ್ಮಾನೆಗಳನ್ನೊಳಗೊಂಡಿತ್ತು. ಈ ಕಾರಣಗಳಿಂದ ಆ ವ್ಯವಸ್ಥೆಯು ಜನಪ್ರಿಯಗೊಳ್ಳದಿದ್ದರೂ ಜನರ ವಿರೋಧವನ್ನು ಹತ್ತಿಕ್ಕಿ ಸದರಿ ಪದ್ಧತಿಯನ್ನು ಮುಂದುವರೆಸಲಾಯ್ತು. ಈ ವ್ಯವಸ್ಥೆಯ ವಿರೋಧಿಗಳಾದ ಸ್ಥಳೀಯ ರೈತ ಮುಖಂಡರನ್ನು ಬಂಧಿಸಿ ಕಾನೂನು ಕ್ರಮಕ್ಕೊಳಪಡಿಸಿದ ಘಟನೆಗಳೂ ನಡೆದವು. ಇಂತಹ ವಿಳಂಬಕಾರಿ ಹಾಗೂ ಭ್ರಷ್ಟ ನ್ಯಾಯ ವ್ಯವಸ್ಥೆಯ ಬದಲಾಗಿ ಸ್ಥಳೀಯ ಜನರನ್ನೊಳಗೊಂಡ ನ್ಯಾಯ ಮಂಡಳಿಗಳ ಮೂಲಕ ಸುವ್ಯವಸ್ಥಿತ ನ್ಯಾಯ ನೀಡಿಕೆ ಸಾಧ್ಯವೆಂದು ಮನ್ರೋ ಮೊದಲಾದ ಅಧಿಕಾರಿಗಳು ಪ್ರತಿಪಾದಿಸಿದರು. ಆದರೂ ನ್ಯಾಯಾಲಯಗಳಿಗೆ ಸ್ಥಳೀಯರ ನೇಮಕವಾಗಲಿಲ್ಲ. ಕ್ರಮೇಣ ೧೮೨೭ರ ಸುಮಾರಿಗೆ ಸ್ಥಳೀಯರನ್ನೊಳಗೊಂಡ ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತಾದರೂ ಅವುಗಳಿಗೆ ಯೂರೋಪಿಯನ್ನರನ್ನು ದಂಡಿಸುವ ಅಧಿಕಾರವಿರಲಿಲ್ಲವಾದ್ದರಿಂದ ಅವುಗಳ ಉದ್ದೇಶ ವಿಫಲವಾಯಿತು.

ಪ್ರಾರಂಭದಲ್ಲಿ ನ್ಯಾಯಾಂಗ ಇಲಾಖೆಯನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಹೀಗೆ ವಿಂಗಡಿಸಲ್ಪಟ್ಟ ಸಿವಿಲ್ ನ್ಯಾಯಾಂಗ ವಿಭಾಗ ಹಾಗೂ ಕ್ರಿಮಿನಲ್ ನ್ಯಾಯಾಂಗ ವಿಭಾಗಗಳು ಅನುಕ್ರಮವಾಗಿ ಜಿಲ್ಲಾ ನ್ಯಾಯಾಧೀಶ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟರ ಅಧೀನದಲ್ಲಿದ್ದವು ಹಾಗೂ ಇವುಗಳ ಅಧೀನದಲ್ಲಿ ಅನುಕ್ರಮವಾಗಿ ಜಿಲ್ಲಾ ಮುನ್ಸೀಫ ನ್ಯಾಯಾಲಯ ಮತ್ತು ಸ್ಟೇಷನರಿ (ಸ್ಥಿರ) ಉಪ ನ್ಯಾಯಾಲಯಗಳಿದ್ದವು. ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಈ ನ್ಯಾಯಾಲಯಗಳು ಕಾರ್ಯನಿರ್ವಹಿಸುವ ಮತ್ತು ಗ್ರಾಮಗಳಲ್ಲಿ ಮಾತ್ರ ಪಟೇಲರು ಮ್ಯಾಜಿಸ್ಟ್ರೇಟರಂತೆ ಕರ್ತವ್ಯನಿರ್ವಹಿಸುವ ವ್ಯವಸ್ಥೆ ಸ್ವಾತಂತ್ರ್ಯಪೂರ್ವದಲ್ಲಿತ್ತು. ಐದುನೂರು ರೂಪಾಯಿ ಮೌಲ್ಯದವರೆಗಿನ ದಾವೆಗಳನ್ನು ಗ್ರಾಮಚಾವಡಿಗಳಲ್ಲಿ ಪಟೇಲರೇ ತೀರ್ಮಾನಿಸುತ್ತಿದ್ದರು. ಪಟೇಲರಿಗೆ ಯಾವುದೇ ದಂಡಾಧಿಕಾರವು ಇಲ್ಲದ ಕಾರಣ ವ್ಯಾಜ್ಯಗಳನ್ನು ರಾಜಿ ಮಾಡಿಸುವುದಷ್ಟೇ ಸಾಧ್ಯವಿತ್ತು. ಗ್ರಾಮಮಟ್ಟದ ಈ ನ್ಯಾಯಿಕ ವ್ಯವಸ್ಥೆಯಲ್ಲಿ ಊರಿನ ದೇವಸ್ಥಾನ, ಚಾವಡಿ, ಅರಳಿಕಟ್ಟೆ ಮುಂತಾದೆಡೆಗಳಲ್ಲಿ ಪಟೇಲರು ಊರಪ್ರಮುಖರ ಸಮ್ಮುಖದಲ್ಲಿ ನೀರು, ಆಸ್ತಿ, ದಾರಿ ಮುಂತಾದ ವಿವಾದಗಳನ್ನು ಪರಿಹರಿಸುತ್ತಿದ್ದರಾದರೂ ಅವರ ತೀರ್ಪು ಅಂತಿಮ ಎಂಬಂತಿರಲಿಲ್ಲ. ಮುನ್ಸೀಫ್ ಇತ್ಯಾದಿ ಮೇಲ್ಮಟ್ಟದ ನ್ಯಾಯಾಲಯಗಳಲ್ಲಿ ಅವರ ತೀರ್ಪನ್ನು ಪ್ರಶ್ನಿಸಬಹುದಾಗಿತ್ತು. ರಾಜ್ಯಗಳ ಪುನರ್ವಿಂಗಡಣೆಯ ನಂತರ ೧೯೫೧ರ ಮೈಸೂರು ಅಧಿನಿಯಮದ ಜಾರಿಯೊಂದಿಗೆ ಗ್ರಾಮಸಭೆಗಳಲ್ಲಿ ಪಟೇಲರ ನ್ಯಾಯ ನೀಡಿಕೆ ವ್ಯವಸ್ಥೆ ಕೊನೆಯಾಯಿತು. ಅನುವಂಶಿಕ ಹುದ್ದೆಗಳು ರದ್ದಾದವು. ಸದರಿ ಅಧಿನಿಯಮದ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನ್ಯಾಯಾಲಯ ಹಾಗೂ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳೂ ತಾಲೂಕು ಮಟ್ಟದಲ್ಲಿ ಮುನ್ಸೀಫ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳೂ ಸ್ಥಾಪನೆಗೊಂಡವು. ಮುಂದೆ ೧೯೬೪ರ ಜುಲೈನಲ್ಲಿ ಹೊಸ ಮೈಸೂರು ಸಿವಿಲ್ ಅಧಿನಿಯಮದ ಜಾರಿಯೊಂದಿಗೆ ಏಕರೂಪ ವೃಂದದ ನ್ಯಾಯಾಧೀಶರ ಹುದ್ದೆಯನ್ನು ಸೃಜಿಸಲಾಗಿತ್ತು. ಆವರೆಗೆ ಮದ್ರಾಸು ಪ್ರೆಸಿಡೆನ್ಸಿಯ ಭಾಗವಾಗಿದ್ದ ಉಡುಪಿ ಜಿಲ್ಲೆಯನ್ನೊಳಗೊಂಡ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೈಸೂರು ಅಧಿನಿಯಮದ ಪ್ರಕಾರ ವಿವಿಧ ಶ್ರೇಣಿಯ ನ್ಯಾಯಾಧೀಶರನ್ನು ಏಕರೂಪ ಶ್ರೇಣಿ ವ್ಯವಸ್ಥೆಗೊಳಪಡಿಸಲಾಯಿತು.

ಸದರಿ ಅಧಿನಿಯಮದಡಿ ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿ ತಾಲೂಕು ಮಟ್ಟದ ಉಪ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತವೆ. ಜಿಲ್ಲೆಯಲ್ಲಿ ಸಿವಿಲ್ ವ್ಯಾಜ್ಯಗಳನ್ನು ಬಗೆಹರಿಸಲು ಸಿವಿಲ್ ನ್ಯಾಯಾಧೀಶರು ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಬಗೆಹರಿಸಲು ಸೆಷನ್ಸ್ ನ್ಯಾಯಾಧೀಶರು ಇರುತ್ತಾರೆ. ತಾಲೂಕಿನಲ್ಲಿ ಸಿವಿಲ್ ವ್ಯಾಜ್ಯಗಳನ್ನು ಮುನ್ಸೀಫರೂ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಮ್ಯಾಜಿಸ್ಟ್ರೇಟರು ತೀರ್ಮಾನಿಸುತ್ತಾರೆ. ಇದಲ್ಲದೆ ತಾಲೂಕಿನಲ್ಲಿ ತಹಶೀಲ್ದಾರ್ ಹಾಗೂ ಉಪವಿಭಾಗೀಯ ಮಟ್ಟದಲ್ಲಿ

ಉಪವಿಭಾಗಾಧಿಕಾರಿಗಳೂ ಕ್ರಿಮಿನಲ್ ವ್ಯಾಜ್ಯಗಳಲ್ಲಿ ಸೀಮಿತ ಅಧಿಕಾರ ಹೊಂದಿರುತ್ತಾರೆ. ಜಿಲ್ಲಾಮಟ್ಟದ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳು ದಂಡಾಧಿಕಾರಿಯಾಗಿ ಕೆಲಸ ನಿರ್ವಹಿಸುವ ಅಧಿಕಾರ ಪಡೆದಿರುತ್ತಾರೆ.

ಜಿಲ್ಲಾ ನ್ಯಾಯಾಧೀಶರನ್ನು ರಾಜ್ಯಪಾಲರು ಉಚ್ಚ ನ್ಯಾಯಾಲಯದ ಸಲಹೆ ಮೇರೆಗೆ ನೇಮಿಸುತ್ತಾರೆ ಮತ್ತು ಇನ್ನಿತರ ನ್ಯಾಯಿಕ ಅಧಿಕಾರಿಗಳನ್ನು ರಾಜ್ಯಪಾಲರು ಲೋಕಸೇವಾ ಆಯೋಗ ಹಾಗೂ ಉಚ್ಛ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ನೇಮಿಸುತ್ತಾರೆ. ಜಿಲ್ಲಾ ಹಾಗೂ ಅಧೀನ ನ್ಯಾಯಾಲಯಗಳ ಮೇಲೆ ಉಚ್ಛ ನ್ಯಾಯಾಲಯವು ನೇರ ನಿಯಂತ್ರಣ ಹೊಂದಿದೆ. ೧೯೯೭ರವರೆಗೆ ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದು ಸಮಸ್ತ ನ್ಯಾಯಾಂಗ ಆಡಳಿತವು ದಕ್ಷಿಣ ಕನ್ನಡ ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿ ನಡೆಯುತ್ತಿತ್ತು. ಜಿಲ್ಲಾ ಪುನರ್ವಿಂಗಡಣೆ ನಂತರವೂ ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ನ್ಯಾಯಾಲಯ ಆರಂಭವಾಗುವವರೆಗೆ ಹಳೆಯ ವ್ಯವಸ್ಥೆಯೇ ರೂಢಿಯಲ್ಲಿತ್ತು. ೨೦೦೧ರಲ್ಲಿ ಉಡುಪಿ ಜಿಲ್ಲೆಯಲ್ಲಿ ನ್ಯಾಯಾಲಯ ಪ್ರಾರಂಭವಾಯಿತು. ೨೦೦೬ರ ಮಾರ್ಚ್ ಅಂತ್ಯದಲ್ಲಿ ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನ್ಯಾಯಾಲಯಗಳ ವಿವರ ಇಂತಿದೆ.

೧) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಉಡುಪಿ ೧೮-೧೨-೨೦೦೧ ರಿಂದ
೨) ತ್ವರಿತ ವಿಲೇವಾರಿ ನ್ಯಾಯಾಲಯ, ಉಡುಪಿ ೨೦-೫-೨೦೦೪ ರಿಂದ
೩) ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ – ಉಡುಪಿ
೪) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ನ್ಯಾಯಾಲಯ – ಉಡುಪಿ
೫) ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ – ಉಡುಪಿ
೬) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ–ಉಡುಪಿ
೭) ೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ–ಉಡುಪಿ
೮) ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ನ್ಯಾಯಾಲಯ–ಕುಂದಾಪುರ ೧–೧೨–೯೯
೯) ಪ್ರಧಾನ ಸಿವಿಲ್ ನ್ಯಾಯಾಧೀಶ (ಕಿರಿಯ ವಿಭಾಗ) ನ್ಯಾಯಾಲಯ – ಕುಂದಾಪುರ
೧೦) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ – ಕುಂದಾಪುರ
೧೧) ೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ – ಕುಂದಾಪುರ
೧೨) ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ – ಕಾರ್ಕಳ ೨೬–೩–೨೦೦೫ ರಿಂದ
೧೩) ಪ್ರಧಾನ ಸಿವಿಲ್ ನ್ಯಾಯಾಧೀಶ (ಕಿರಿಯ ವಿಭಾಗ) ನ್ಯಾಯಾಲಯ – ಕಾರ್ಕಳ
೧೪) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ – ಕಾರ್ಕಳ
೧೫) ಎರಡನೇ ಹೆಚ್ಚಿನ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ-ಕಾರ್ಕಳ

**ಜಿಲ್ಲಾ ನ್ಯಾಯಾಲಯ**

ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರ್ಪಟ್ಟು, ಹೊಸ ಜಿಲ್ಲೆಯು ರಚನೆಯಾಗಿ ನಾಲ್ಕು ವರ್ಷದ ನಂತರ ದಿನಾಂಕ ೧೮–೧೨–೨೦೦೧ ರಂದು ಜಿಲ್ಲಾ ನ್ಯಾಯಾಲಯವು ಉಡುಪಿಯಲ್ಲಿ

ಪ್ರಾರಂಭಗೊಂಡು ಕಾರ್ಯಾರಂಭ ಮಾಡಿದೆ. ಈ ನ್ಯಾಯಾಲಯವು ರೂ. ಒಂದು ಲಕ್ಷದವರೆಗಿನ ಮೌಲ್ಯದ ಸಿವಿಲ್ ಮೊಕದ್ದಮೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದೆ. ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯ ನ್ಯಾಯಾಂಗ ಇಲಾಖಾ ಮುಖ್ಯಸ್ಥರಾಗಿದ್ದು ತಮ್ಮ ಅಧೀನ ನ್ಯಾಯಾಲಯಗಳ ಕೆಲಸಗಳ ಮೇಲ್ವಿಚಾರಣೆ ಮಾಡುವುದರ ಜೊತೆಗೆ ತಪಾಸಣೆ ಮಾಡುವ ಅಧಿಕಾರವನ್ನೂ ಹೊಂದಿರುತ್ತಾರೆ. ಸ್ವಾಮ್ಯ ಅದಿನಿಯಮ ೧೯೫೬ (ಕಾಪಿರೈಟ್ ಆಕ್ಟ್), ವ್ಯಾಪಾರ ಮತ್ತು ವಾಣಿಜ್ಯ ಅಧಿನಿಯಮ ೧೯೫೬ (ಟ್ರೇಡ್ ಅಂಡ್ ಮರ್ಕೆಂಡೈಸ್ ಆಕ್ಟ್) ಮುಂತಾದವುಗಳ ಪ್ರಕಾರ ಹಾಗೂ ಲಘು (ಪಿ. ಅಂಡ್ ಎಸ್.ಸಿ) ವ್ಯಾಜ್ಯಗಳ ಸಂಬಂಧ ದಾವೆಗಳು, ಮಾಹಿತಿ ತಂತ್ರಜ್ಞಾನ ಅಧಿನಿಯಮ ೨೦೦೦ ಹಾಗೂ ಸರ್ಕಾರವು ಕಾಲಕಾಲಕ್ಕೆ ಮಾಡುವ ಅಧಿಸೂಚನೆಯ ಮೇರೆಗೆ ತತ್ಸಂಬಂಧಿತ ಮೊಕದ್ದಮೆಗಳು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿವೆ.

### ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ವ್ಯಾಪ್ತಿಗೆ ಬರುವ ಪ್ರಕರಣಗಳು

೧) ದಂಡಪ್ರಕ್ರಿಯಾ ಸಂಹಿತೆ (Cr.P.C) ರೀತ್ಯಾ ಏಳು ವರ್ಷಗಳಿಗೂ ಅಧಿಕ ಶಿಕ್ಷೆ ವಿಧಿಸಬಹುದಾದ ಕಾನೂನು ಉಲ್ಲಂಘನೆಯ ವ್ಯಾಜ್ಯಗಳು

೨) ಸರ್ಕಾರವು ಕಾಲಕಾಲಕ್ಕೆ ಮಾಡಿದ ಅಧಿಸೂಚನೆಯ ಪ್ರಕಾರ ವ್ಯಾಪ್ತಿಗೆ ಒಳಪಡಿಸಿದ ಪ್ರಕರಣಗಳು. ಉದಾ. ಗಾಂಜಾ, ಪೆಟ್ರೋಲ್, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮೇಲಿನ ದೌರ್ಜನ್ಯ ಮುಂತಾದವು.

೩) ಅಧೀನ ನ್ಯಾಯಾಲಯಗಳ ತೀರ್ಪಿನ ಮೇಲಿನ ಅಪೀಲುಗಳು ಮತ್ತು ಪುನರ್ ಪರಿಶೀಲನಾ ಅರ್ಜಿಗಳು.

**ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ದಾವೆಗಳ ವಿವರ (ಪ್ರಾರಂಭ – ೨೦೦೧)**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೨೦೦೧ | ೬೩೪ | ೦೯ | ೪೯೫೯ | ೧೩೦೭೯೪೩ |
| ೨೦೦೨ | ೨೬೦೭ | ೨೪೬೬ | ೧೬೦೬೯೩ | ೩೯೩೫೭೨೭ |
| ೨೦೦೩ | ೨೯೧೧ | ೨೨೭೨ | ೧೮೫೪೨೩ | ೫೩೦೬೩೫೨ |
| ೨೦೦೪ | ೨೮೧೦ | ೨೮೩೭ | ೧೧೮೦೦೨ | ೫೫೭೭೧೧೦ |
| ೨೦೦೫ | ೨೪೭೫ | ೩೦೪೩ | ಲಭ್ಯವಿಲ್ಲ | ಲಭ್ಯವಿಲ್ಲ |

*ಆಧಾರ : ಜಿಲ್ಲಾ ಸತ್ರ ನ್ಯಾಯಾಲಯ , ಉಡುಪಿ.*

### ತ್ವರಿತ ವಿಲೇವಾರಿ ನ್ಯಾಯಾಲಯ

ಕೇಂದ್ರ ಸರ್ಕಾರದ ಹನ್ನೊಂದನೇ ಅರ್ಥಿಕ ಆಯೋಗದ ಶಿಫಾರಸುಗಳನ್ವಯ ಹಾಲಿ ನ್ಯಾಯಾಲಯಗಳಲ್ಲಿ ಎರಡು ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಇರುವ ಕ್ರಿಮಿನಲ್ ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ತ್ವರಿತ ವಿಲೇವಾರಿ ನ್ಯಾಯಾಲಯಗಳು ಪ್ರಾರಂಭಿಸಲ್ಪಟ್ಟವು. ಉಡುಪಿಯಲ್ಲಿ ಇದನ್ನು ೨೦–೫–೨೦೦೪ ರಿಂದ ಪ್ರಾರಂಭಿಸಲಾಯಿತು. ಇದು ಉಡುಪಿಯ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿನ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿದೆ. ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ತನ್ನ ವ್ಯಾಪ್ತಿಯ ಯಾವುದೇ ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಇಲ್ಲಿಗೆ ವರ್ಗಾಯಿಸುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಒಂದು ತ್ವರಿತ ವಿಲೇವಾರಿ ನ್ಯಾಯಾಲಯ ಮಾತ್ರವಿದ್ದು ಅದರಲ್ಲಿ ಆರು ಜನರ ಸಿಬ್ಬಂದಿ ವರ್ಗವಿದೆ. ಈ ನ್ಯಾಯಾಲಯದ ಮೊಕದ್ದಮೆಗಳ ವಿವರ ಇಂತಿದೆ.

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಬಾಕಿ ಇರುವ ದಾವೆಗಳು |
|---|---|---|---|
| ೨೦೦೪ | ೪೬೭ | ೯೦ | ೩೭೯ |
| ೨೦೦೫ | ೭೮ | ೨೨೯ | ೨೨೮ |

## ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)

ಈ ನ್ಯಾಯಾಲಯವು ರೂ. ೫೦,೦೦೦ ಮೇಲ್ಪಟ್ಟು ಮೌಲ್ಯದ ಎಲ್ಲಾ ರೀತಿಯ ಸಿವಿಲ್ ಮೊಕದ್ದಮೆಗಳು ಹಾಗೂ ೯.೨೫ ಸಾವಿರ ರೂ.ಗಳಿಗಿಂತ ಕಡಿಮೆಯ ಸಿವಿಲ್ ಲಘು ದಾವೆಗಳನ್ನು ತೀರ್ಮಾನಿಸಬಹುದಲ್ಲದೆ, ಸಿವಿಲ್ ನ್ಯಾಯಾಲಯದ (ಕಿರಿಯ ವಿಭಾಗ) ಅಪೀಲು ಹಾಗೂ ಪುನರ್ ಪರಿಶೀಲನಾ ಅರ್ಜಿಗಳನ್ನು ಇತ್ಯರ್ಥಗೊಳಿಸುತ್ತದೆ. ಈ ನ್ಯಾಯಾಲಯದ ವ್ಯಾಪ್ತಿಗೆ ಬರುವಂತಹ ಇನ್ನಿತರ ಪ್ರಕರಣಗಳೆಂದರೆ ಭೂಸ್ವಾಧೀನ ದಾವೆಗಳು, ಪೋಷಕರ ನೇಮಕಾತಿ, ದತ್ತು ಪ್ರಕರಣಗಳು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ ಮೇರೆಗೆ ಇದರ ವ್ಯಾಪ್ತಿಗೆ ಒಳಪಟ್ಟ ಸಿವಿಲ್ ಪ್ರಕರಣಗಳು. ಭಾರತೀಯ ದಂಡ ಸಂಹಿತೆಯ ಪ್ರಕಾರ ಮೂರು ವರ್ಷಕ್ಕಿಂತ ಮೇಲ್ಪಟ್ಟು ಗರಿಷ್ಠ ಏಳು ವರ್ಷಗಳವರೆಗೆ ಶಿಕ್ಷೆ ವಿಧಿಸಲಾಗುವಂತಹ ಕ್ರಿಮಿನಲ್ ವ್ಯಾಜ್ಯಗಳು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವಲ್ಲದೆ ಕೆಳಹಂತದ ನ್ಯಾಯಾಲಯಗಳ ಮೇಲ್ಮನವಿ ಹಾಗೂ ಪುನರ್ ಪರಿಶೀಲನಾ ಅರ್ಜಿಗಳೂ ಇಲ್ಲಿ ಇತ್ಯರ್ಥಗೊಳ್ಳಬಹುದಾಗಿದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ದಾವೆಗಳ ವಿವರ**

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೬ | ೧೮೯೪ | ೩೯೬೯ | ೩,೨೭,೫೧,೧೯೮ | ೨,೮೫,೯೦,೧೫೨ |
| ೧೯೯೭ | ೮೭೮ | ೫೬೦ | ೩,೯೭,೧೩೭,೪೭ | ೩,೪೪,೪೦,೫೬೧ |
| ೧೯೯೮ | ೧೨೨೦ | ೧೩೧೫ | ೩,೪೭,೯೭,೬೬೧ | ೨,೧೮,೯೮,೮೬೪ |
| ೧೯೯೯ | ೧೩೩೨ | ೧೮೨೪ | ೬,೦೭,೭೮,೭೦೪ | ೨,೩೭,೪೧,೫೫೮ |
| ೨೦೦೦ | ೧೨೮೪ | ೧೪೨೨ | ೪,೬೬,೧೪,೮೩೨ | ೧,೩೧,೦೮,೨೦೭ |
| ೨೦೦೧ | ೧೧೯೨ | ೧೩೩೮ | ೫,೩೮,೮೪,೦೦೪ | ೧,೩೦,೨೩,೧೧೦ |
| ೨೦೦೨ | ೬೫೮ | ೧೦೩೩ | ೫,೭೧,೫೨,೪೬೬ | ೨,೧೩,೩೬,೯೭೭ |
| ೨೦೦೩ | ೩೩೫ | ೭೧೭ | ೧೦,೪೬,೩೧,೪೬೩ | ೩,೨೬,೭೪,೮೨೨ |
| ೨೦೦೪ | ೪೪೭ | ೫೭೫ | ೧೧,೮೨,೨೧,೨೬೫ | ೨,೪೩,೬೫,೭೮೩ |
| ೨೦೦೫ | ೫೯೪೨ | ೮೧೬ | ೫,೯೦,೭೪,೮೬೮ | ೧,೩೩,೦೭,೩೫೬ |

**ಸಿವಿಲ್ ನ್ಯಾಯಾಲಯ (ಕಿರಿಯ ವಿಭಾಗ) :** ಈ ನ್ಯಾಯಾಲಯವು ರೂ. ೫೦,೦೦೦ ಕ್ಕಿಂತ ಕೆಳಗಿನ ಮತ್ತು ರೂ. ೨೫,೦೦೦ ರೂ.ಗಳಿಗಿಂತ ಮೇಲ್ಪಟ್ಟು ಸಿವಿಲ್ ಮೊಕದ್ದಮೆಗಳು ಹಾಗೂ ಮನೆಬಾಡಿಗೆ ನಿಯಂತ್ರಣ ಪ್ರಕರಣಗಳನ್ನು ತೀರ್ಮಾನಿಸುತ್ತದೆ.

**ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು :** ಭಾರತೀಯ ದಂಡ ಸಂಹಿತೆ ಪ್ರಕಾರ ಮೂರು ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದಾದ ವ್ಯಾಜ್ಯಗಳು ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಅಧಿಸೂಚನೆಯ ಮೇರೆಗೆ ಇದರ ವ್ಯಾಪ್ತಿಗೆ ಒಳಪಡುವಂತಹ ದಾವೆಗಳು ಇಲ್ಲಿ ಇತ್ಯರ್ಥಗೊಳ್ಳುತ್ತವೆ. **ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ನ್ಯಾಯಾಲಯ, ಉಡುಪಿ.** (ವ್ಯಾಪ್ತಿಯ ಗ್ರಾಮಗಳ ಸಂಖ್ಯೆ: ೮೪) ದಾವೆಗಳ ವಿವರ.

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ನ್ಯಾಯಾಲಯದ ದಾಖಲಾದ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಬಾಕಿ ಇರುವ ದಾವೆಗಳು |
|---|---|---|---|
| ೧೯೯೬ | ೩೪೯ | ೫೧೦ | ಇದು ಹೆಚ್ಚುವರಿ ನ್ಯಾಯಾಲಯವಾಗಿರುವುದರಿಂದ ಇಲ್ಲಿ ಪ್ರತ್ಯೇಕ ಆಯವ್ಯಯ ಇರುವುದಿಲ್ಲ. ಅದನ್ನು ಪ್ರಧಾನ ನ್ಯಾಯಾಲಯದ ಲೆಕ್ಕದಲ್ಲಿ ನಮೂದಿಸಿದೆ. |
| ೧೯೯೭ | ೭೦೮ | ೯೭೯ | |
| ೧೯೯೮ | ೮೩೬ | ೯೩೮ | |
| ೧೯೯೯ | ೮೫೩ | ೧೨೬೫ | |
| ೨೦೦೦ | ೮೩೪ | ೮೫೭ | |
| ೨೦೦೧ | ೮೦೧ | ೧೦೪೨ | |
| ೨೦೦೨ | ೪೭೫ | ೬೬೦ | |
| ೨೦೦೩ | ೩೫೦ | ೬೩೩ | |
| ೨೦೦೪ | ೪೨೪ | ೪೨೪ | |
| ೨೦೦೫ | ೭೭೦ | ೭೬೩ | |

| ವರ್ಷಗಳು | ದಾಖಲಾದ ದಾವೆಗಳು | ಇತ್ಯರ್ಥಗೊಂಡ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೫ | ೧೧೦೦ | ೬೦೦ | ೧೯,೨೦,೬೭೨ | ೧೪,೯೬,೯೩೧ |
| ೧೯೯೬ | ೯೦೦ | ೫೬೦ | ೧೩,೧೩,೨೨೦ | ೧೨,೧೮,೧೧೮ |
| ೧೯೯೭ | ೭೯೦ | ೫೧೦ | ೧೫,೧೨,೨೨೦ | ೧೩,೨೫,೨೪೩ |
| ೧೯೯೮ | ೪೫೦ | ೧೬೦೦ | ೩೫,೮೫೩ | ೯,೫೦೦ |
| ೧೯೯೯ | ೩೨೫ | ೩೦೦ | ೧೪,೭೯೭ | ೧೩,೫೦೦ |
| ೨೦೦೦ | ೩೦೦ | ೨೮೦ | ೨೨,೭೪,೪೫೦ | ೧೮,೬೬,೬೦೪ |
| ೨೦೦೧ | ೩೧೦ | ೨೯೨ | ೧೨,೪೮,೨೭೪ | ೧೫,೫೦,೮೭೯ |
| ೨೦೦೨ | ೫೪೦ | ೧೪೦ | ೧,೪೦,೫೫೩ | ೭,೯೦,೧೦೭ |
| ೨೦೦೩ | ೧೨೦ | ೧೮೫ | ೩,೫೨,೧೬೦ | ೧೦,೨೮,೧೧೬ |
| ೨೦೦೪ | ೯೫ | ೧೪೦ | ೨,೮೦,೬೦೦ | ೬,೩೦,೧೧೦ |
| ೨೦೦೫ | ೧೭೮ | ೧೯೪ | ೨,೯೦,೦೦೦ | ೫,೩೦,೦೦೦ |

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಉಡುಪಿ

ದಾವೆಗಳ ವಿವರ (ವ್ಯಾಪ್ತಿಯ ಗ್ರಾಮಗಳ ಸಂಖ್ಯೆ:೮೪)

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | |
|---|---|---|---|
| ೧೯೯೫ | ೭೨೭೨ | ೫೨೨೨ | **ಷರಾ:** ಹೆಚ್ಚುವರಿ ನ್ಯಾಯಾಲಯವಾದ್ದರಿಂದ ಆಯವ್ಯಯ ಇರುವುದಿಲ್ಲ |
| ೧೯೯೬ | ೬೧೦೫ | ೪೩೧೮ | |
| ೧೯೯೭ | ೬೦೬೧ | ೪೯೧೮ | |
| ೧೯೯೮ | ೫೬೬೬ | ೪೪೨೦ | |
| ೧೯೯೯ | ೫೭೦೪ | ೪೫೦೨ | |
| ೨೦೦೦ | ೫೮೨೦ | ೩೯೨೦ | |
| ೨೦೦೧ | ೪೭೬೦ | ೩೨೨೦ | |
| ೨೦೦೨ | ೫೪೨೫ | ೩೧೪೧ | |
| ೨೦೦೩ | ೮೩೦೦ | ೫೪೫೩ | |
| ೨೦೦೪ | ೭೧೦೫ | ೫೭೦೭ | |
| ೨೦೦೫ | ೫೭೮೨ | ೪೬೭೩ | |

## ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಉಡುಪಿ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | |
|---|---|---|---|
| ೧೯೯೫ | ೮೯೦ | ೮೩೭ | **ಷರಾ:** ಹೆಚ್ಚುವರಿ ನ್ಯಾಯಾಲಯ ಆಯವ್ಯಯ ಇರುವುದಿಲ್ಲ |
| ೧೯೯೬ | ೯೨೨ | ೯೨೧ | |
| ೧೯೯೭ | ೯೪೯ | ೬೬೭ | |
| ೧೯೯೮ | ೧೧೬೫ | ೬೪೭ | |
| ೧೯೯೯ | ೧೦೩೩ | ೧೧೩೫ | |
| ೨೦೦೦ | ೧೦೯೮ | ೮೦೭ | |
| ೨೦೦೧ | ೧೦೦೫ | ೮೪೭ | |
| ೨೦೦೨ | ೯೦೫ | ೮೬೬ | |
| ೨೦೦೩ | ೧೧೨೩ | ೧೦೯೭ | |
| ೨೦೦೪ | ೨೦೮೦ | ೧೨೮೭ | |
| ೨೦೦೫ | ೧೨೩೫ | ೧೩೧೫ | |

## ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ನ್ಯಾಯಾಲಯ, ಕುಂದಾಪುರ ಇದರ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೯ | ೧೨೨೪ | ೦೫ | ೨೩೧೭೧ | ೩೫೭೭೧೦ |
| ೨೦೦೦ | ೧೨೧೮ | ೩೨೫ | ೬೧೯೯೧೭ | ೧೪೩೮೦೦ |
| ೨೦೦೧ | ೧೨೦೬ | ೫೪೮ | ೨೨೬೧೯ | ೧೭೩೪೯೫೫ |
| ೨೦೦೨ | ೧೦೬೬ | ೧೨೦೨ | ೫೧೯೮೬೬ | ೧೭೧೦೬೪೯ |
| ೨೦೦೩ | ೧೦೮೩ | ೧೩೨೮ | ೬೬೧೬೧ | ೨೫೮೫೮೨೫ |
| ೨೦೦೪ | ೧೧೯೬ | ೯೯೦ | ೫೪೯೫೨ | ೨೪೪೬೮೧೭ |

## ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ನ್ಯಾಯಾಲಯ, ಕುಂದಾಪುರ ದಾವೆಯ ವಿವರಗಳು

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೫ | ೭೪೧ | ೭೫೬ | ೧,೬೫,೧೬೮ | ೧೭,೬೩,೮೩೬ |
| ೧೯೯೬ | ೭೧೧ | ೧೩೦೫ | ೨,೦೯,೨೪೧ | ೨೨,೦೫,೧೨೩ |
| ೧೯೯೭ | ೫೬೨ | ೮೫೧ | ೮,೩೮,೩೪೨ | ೪,೪೯,೯೭೨ |
| ೧೯೯೮ | ೬೩೯ | ೪೭೧ | ೨,೭೭,೯೧೯ | ೩೩,೯೭,೩೦೫ |
| ೧೯೯೯ | ೪೩೪ | ೪೫೨ | ೧,೦೯,೧೦೮ | ೩೩,೯೬,೩೩೧ |
| ೨೦೦೦ | ೨೬೭ | ೭೬೬ | ೧,೦೬,೦೮೧ | ೪೧,೬೪,೦೧೬ |
| ೨೦೦೧ | ೨೨೨ | ೬೭೧ | ೧,೫೦,೦೫೧ | ೨೨,೧೧,೭೮೨ |
| ೨೦೦೨ | ೨೨೪ | ೧೪೯ | ೧,೧೯,೧೩೩ | ೩೮,೧೪,೪೪೨ |
| ೨೦೦೩ | ೨೧೩ | ೩೮೫ | ೧,೬೧,೦೯೯ | ೩೮,೦೫,೮೧೨ |
| ೨೦೦೪ | ೨೦೭ | ೫೬೭ | ೧,೪೪,೧೩೭ | ೪೦,೭೦,೪೩೯ |
| ೨೦೦೫ | ೨೧೫ | ೩೭೪ | ೯೮,೯೪೮ | ೩೨,೩೪,೬೬೭ |

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕುಂದಾಪುರ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೫ | ೪೨೪೬ | ೩೪೭೯ | ೩,೩೬,೫೧೯ | ೭,೧೬,೪೨೮ |
| ೧೯೯೬ | ೩೮೪೧ | ೩೨೭೩ | ೪,೨೩,೫೧೧ | ೭,೫೮,೦೮೭ |
| ೧೯೯೭ | ೩೫೧೯ | ೩೫೨೨ | ೪,೯೩,೮೨೦ | ೮,೫೨,೪೦೧ |
| ೧೯೯೮ | ೨೨೨೫ | ೨೬೩೮ | ೭,೮೧,೭೪೮ | ೯,೮೬,೮೨೧ |
| ೧೯೯೯ | ೩೧೫೨ | ೨೯೦೩ | ೮,೩೬,೦೮೩ | ೧೦,೩೩,೬೯೩ |
| ೨೦೦೦ | ೨೩೫೨ | ೨೨೪೭ | ೫,೯೦,೩೩೩ | ೧೪,೨೮,೫೩೧ |
| ೨೦೦೧ | ೨೭೮೭ | ೨೮೫೨ | ೬,೪೨,೦೫೪ | ೧೩,೪೬,೨೧೯ |
| ೨೦೦೨ | ೩೬೪೬ | ೩೮೧೮ | ೭,೫೧,೦೩೬ | ೧೩,೩೩,೫೦೨ |
| ೨೦೦೩ | ೨೯೧೩ | ೨೩೬೩ | ೬,೦೮,೯೫೨ | ೧೨,೧೭,೪೩೧ |
| ೨೦೦೪ | ೩೮೬೬ | ೪೪೭೨ | ೭,೩೩,೩೫೨ | ೧೬,೧೬,೧೯೫ |
| ೨೦೦೫ | ೩೩೪೪ | ೩೪೮೧ | ೧೧,೨೫,೪೭೪ | ೧೪,೨೯,೭೨೦ |

## ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಂದಾಪುರ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | |
|---|---|---|---|
| ೧೯೯೫ | ೨೨೭ | ೬೮ | **ಷರಾ:** ಹೆಚ್ಚುವರಿ ನ್ಯಾಯಾಲಯ ಆದಾಯ ವೆಚ್ಚದ ಮಾಹಿತಿ ಲಭ್ಯವಿಲ್ಲ |
| ೧೯೯೬ | ೨೭೦ | ೧೬೨ | |
| ೧೯೯೭ | ೨೭೮ | ೩೧೪ | |
| ೧೯೯೮ | ೨೯೨ | ೧೯೭ | |
| ೧೯೯೯ | ೨೫೪ | ೨೭೫ | |
| ೨೦೦೦ | ೩೨೪ | ೩೩೪ | |
| ೨೦೦೧ | ೧೫೭ | ೩೪೭ | |
| ೨೦೦೨ | ೮೯೩ | ೪೧೨ | |
| ೨೦೦೩ | ೨೨೭ | ೩೫೧ | |
| ೨೦೦೪ | ೯೪೬ | ೩೯೨ | |
| ೨೦೦೫ | ೧೭೮ | ೩೩೨ | |

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರ್ಕಳ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೫ | ೩೧೯೨ | ೨೮೪೫ | ೨,೫೦,೬೫೦ | ೭,೭೮,೭೯೦ |
| ೧೯೯೬ | ೨೪೩೭ | ೨೯೦೬ | ೨,೬೨,೦೮೮ | ೮,೩೫,೯೧೭ |
| ೧೯೯೭ | ೨೨೫೮ | ೩೦೩೦ | ೩,೭೧,೦೩೨ | ೧೦,೨೯೪೮೨ |
| ೧೯೯೮ | ೨೬೦೮ | ೨೩೯೫ | ೪,೧೯,೬೧೭ | ೯,೯೩,೯೪೩ |
| ೧೯೯೯ | ೨೧೩೭ | ೨೬೮೧ | ೭,೭೬,೫೨೨ | ೧೩,೧೦,೭೫೬ |
| ೨೦೦೦ | ೩೧೧೨ | ೨೯೨೮ | ೭,೪೨,೨೭೧ | ೧೨,೧೧,೧೨೯ |
| ೨೦೦೧ | ೨೭೪೬ | ೩೬೩೯ | ೫,೨೩,೯೧೦ | ೧೨,೭೪,೦೩೦ |
| ೨೦೦೨ | ೨೬೪೨ | ೨೩೯೬ | ೩,೯೪,೦೧೮ | ೧೦,೪೮,೪೨೭ |
| ೨೦೦೩ | ೨೪೩೫ | ೨೩೬೫ | ೩,೭೩,೫೪೧ | ೧೩,೯೦,೩೧೩ |
| ೨೦೦೪ | ೨೪೪೩ | ೨೪೮೧ | ೭,೪೬,೯೫ | ೧೨,೭೦,೭೦೫ |
| ೨೦೦೫ | ೧೧೯೧ | ೧೨೪೫ | ೨,೩೭,೨೨೨ | ೯,೩೯,೨೪೫ |

*ಆಧಾರ : ಸಿವಿಲ್ ನ್ಯಾಯಾಲಯ, ಕಾರ್ಕಳ*

## ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಧೀಶರು (ಕಿರಿಯ ವಿಭಾಗ) ನ್ಯಾಯಾಲಯ, ಕಾರ್ಕಳ ದಾವೆಗಳ ವಿವರ

| ವರ್ಷಗಳು | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೫ | ೬೯೪ | ೯೧ | ಷರಾ: ಹೆಚ್ಚುವರಿ ನ್ಯಾಯಾಲಯ ಆದಾಯ ವೆಚ್ಚದ ಮಾಹಿತಿ ಲಭ್ಯವಿರುವುದಿಲ್ಲ | |
| ೧೯೯೬ | ೨೩೯ | ೯೦ | | |
| ೧೯೯೭ | ೨೧೫ | ೩೭೯ | | |
| ೧೯೯೮ | ೨೦೦ | ೧೨೭ | | |
| ೧೯೯೯ | ೨೧೨ | ೧೭೫ | | |
| ೨೦೦೦ | ೨೨೭ | ೨೪೬ | | |
| ೨೦೦೧ | ೨೪೯ | ೨೮೩ | | |
| ೨೦೦೨ | ೨೬೨ | ೩೦೧ | | |
| ೨೦೦೩ | ೨೦೭ | ೩೫೩ | | |
| ೨೦೦೪ | ೧೩೨ | ೩೧೭ | | |
| ೨೦೦೫ | ೧೧೯ | ೧೬೨ | | |

**ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ನ್ಯಾಯಾಲಯ, ಕಾರ್ಕಳ.**
**ದಾವೆಗಳ ವಿವರ (ವ್ಯಾಪ್ತಿಯ ಗ್ರಾಮಗಳ ಸಂಖ್ಯೆ – ೫೦).**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆದಾಯ | ವೆಚ್ಚ |
|---|---|---|---|---|
| ೧೯೯೫ | ೪೯೨ | ೮೨೩ | ೧,೪೧,೩೮೪ | ೧೯,೭೯,೮೫೯ |
| ೧೯೯೬ | ೩೭೧ | ೯೯೪ | ೧,೩೭,೬೦೦ | ೨೧,೦೮,೭೮೯ |
| ೧೯೯೭ | ೩೨೬ | ೬೧೭ | ೧,೦೫,೦೫೯ | ೨೩,೦೯,೨೫೪ |
| ೧೯೯೮ | ೨೬೭ | ೪೬೧ | ೧,೧೯,೧೭೨ | ೨೭,೯೪,೬೮೩ |
| ೧೯೯೯ | ೨೮೮ | ೩೭೩ | ೧,೧೭,೪೧೩ | ೩೨,೬೦,೯೧೮ |
| ೨೦೦೦ | ೩೨೩ | ೩೫೯ | ೧,೨೧,೨೫೪ | ೩೩,೬೨,೮೧೯ |
| ೨೦೦೧ | ೨೯೦ | ೩೪೩ | ೧,೧೨,೮೩೬ | ೩೭,೮೨,೯೫೯ |
| ೨೦೦೨ | ೩೦೫ | ೩೪೯ | ೧,೯೨,೫೫೧ | ೩೯,೮೭,೩೮೬ |
| ೨೦೦೩ | ೨೯೫ | ೫೦೧ | ೧,೫೪,೩೧೧ | ೪೧,೭೯,೬೬೬ |
| ೨೦೦೪ | ೨೩೭ | ೪೬೬ | ೧,೫೦,೦೮೭ | ೩೫,೮೧,೨೮೭ |
| ೨೦೦೫ | ೨೭೫ | ೩೩೨ | ೧,೦೧,೩೩೪ | ೨೬,೧೯,೪೭೪ |

*ಮೂಲ: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ – ಉಡುಪಿ*

## ಕಾರಾಗೃಹ ಮತ್ತು ಬಂಧೀಖಾನೆಗಳು

ರಾಜ್ಯಾಂಗ ಅಥವಾ ಸಾಮಾಜಿಕ ಆರೋಗ್ಯ ರಕ್ಷಣೆಗೆ ರೂಪಿತವಾದ ನಿಯಮಾವಳಿಗಳ ವಿರುದ್ಧ ಯೋಚಿಸುವ ಅಥವಾ ನಡೆಯುವವರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿರಿಸುವ ಪ್ರಕ್ರಿಯೆ ಬಹು ಪುರಾತನವಾದದ್ದು. ಹೀಗೆ ಆಪಾದಿತರು ಅಥವಾ ಶಿಕ್ಷೆಗೆ ಗುರಿಯಾದವರನ್ನು ಸಾಮಾಜಿಕ ವ್ಯವಸ್ಥೆಯಿಂದ ದೂರೀಕರಿಸುವಲ್ಲಿ ಬಳಕೆಯಾದ ಮುಖ್ಯ ಪದ್ಧತಿ ಕಾರಾಗೃಹ. ಇಂತಹ ಕಾರಾಗೃಹಗಳ ರೀತಿ ಹಾಗೂ ಉದ್ದೇಶಗಳು ಕ್ರಮೇಣ ಬದಲಾವಣೆ ಹೊಂದಿವೆ. ಹಿಂದೆ ಕೇವಲ ವಿಚಾರಣಾಧೀನ ಕೈದಿಗಳನ್ನು ವಿಚಾರಣೆಗಾಗಿ ಹಾಗೂ ಶಿಕ್ಷೆಯ ಸ್ವರೂಪ ತೀರ್ಮಾನವಾದವರೆಗೆ ಮಾತ್ರ ಕಣ್ಗಾವಲಿನಲ್ಲಿಡಲು ಕಾರಾಗೃಹ ಬಳಕೆಯಾಗುತ್ತಿತ್ತು. ಕ್ರಮೇಣ ಕಾರಾಗೃಹ ವಾಸವೇ ದಂಡನೆಯ ಸ್ವರೂಪ ಪಡೆಯಿತು. ಪ್ರಭುತ್ವ ವಿರೋಧಿ ಹಾಗೂ ಸಮಾಜ ಘಾತುಕ ಶಕ್ತಿಗಳನ್ನು ಕಾರಾಗೃಹಗಳಲ್ಲಿ ಬಂಧನದಲ್ಲಿಟ್ಟು ಸಮಾಜದ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕಾರಾಗೃಹಗಳು ಮಹತ್ವದ ಪಾತ್ರವಹಿಸಿವೆ. ಸಾಮ್ರಾಜ್ಯಶಾಹಿ ಕಾಲದಲ್ಲಿ ಕಲ್ಲಿನಕೋಟೆಗಳಲ್ಲಿನ ಕತ್ತಲು ಕೋಣೆ ಅಥವಾ ಗವಿಗಳನ್ನು ಕಾರಾಗೃಹವಾಗಿ ಬಳಸಲಾಗುತ್ತಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿ ಕಾರಾಗೃಹಗಳಿಗಾಗಿ ಆಧುನಿಕ ರೀತಿಯ ಕಟ್ಟಡಗಳನ್ನು ಕಟ್ಟಲಾಯಿತು ಮತ್ತು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಕಾರಾಗೃಹಗಳು ಪ್ರಾರಂಭಗೊಂಡವು. ರಾಜ್ಯ ಪುನರ್ ವಿಂಗಡಣೆಗೆ ಮುಂಚಿನ ಅವಧಿಯಲ್ಲಿ ಉಡುಪಿ ಜಿಲ್ಲೆಯನ್ನು ಒಳಗೊಂಡಂತೆ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯು ಮದ್ರಾಸ್ ಪ್ರೆಸಿಡೆನ್ಸಿಯ ಆಡಳಿತದಲ್ಲಿತ್ತು. ಆಗ ಮದರಾಸು ಕಾರಾಗೃಹ ಕೈಪಿಡಿ, ಮದ್ರಾಸು ಕಾರಾಗೃಹ ಸುಧಾರಣೆ ಕೈಪಿಡಿ, ೧೮೯೪ರ ಕಾರಾಗೃಹ ಕಾಯ್ದೆಗಳು ೧೮೭೧ ಹಾಗೂ ೧೯೦೦ರ ಬಂಧಿತರ ಕಾಯ್ದೆ, ೧೮೬೯ರ ಸಾಕ್ಷ್ಯಾಧಾರ ಮತ್ತು ಹಾಜರಾತಿ ಕಾಯ್ದೆ ಮತ್ತು ೧೮೯೭ರ ಸುಧಾರಣಾ ಶಾಲೆಯ ಕಾಯಿದೆಗಳು ಚಾಲ್ತಿಯಲ್ಲಿದ್ದವು. ಆ ಪ್ರಕಾರ ಒಂದು ತಿಂಗಳಿಗಿಂತ ಹೆಚ್ಚಿನ ಕಾರಾಗೃಹ ಶಿಕ್ಷೆಯನ್ನು ಪಡೆದ ಅಪರಾಧಿಗಳನ್ನು ಉಪ ಕಾರಾಗೃಹದಲ್ಲೂ ಒಂದು ವರ್ಷದವರೆಗಿನ ಅವಧಿಯ ಶಿಕ್ಷೆಯಾದಲ್ಲಿ ಜಿಲ್ಲಾ ಕಾರಾಗೃಹದಲ್ಲಿಯೂ ಹಾಗೂ ಒಂದು ವರ್ಷ ಮೇಲ್ಪಟ್ಟು ಕಾರಾಗೃಹ ಶಿಕ್ಷೆಯಾದ ಅಪರಾಧಿಯನ್ನು ಸಾಮಾನ್ಯವಾಗಿ ಮಲಬಾರಿನ ಕಣ್ಣಾನೂರು ಕೇಂದ್ರ ಕಾರಾಗೃಹಗಳಿಗೆ ರವಾನಿಸಲಾಗುತ್ತಿತ್ತು.

೧೯೫೬ರ ರಾಜ್ಯ ಪುನರ್ ವಿಂಗಡಣೆಯ ತರುವಾಯ ಜಾರಿಯಲ್ಲಿರುವ ಕಾರಾಗೃಹದ ಬಗ್ಗೆ ಕಾಯಿದೆಗಳು ಮತ್ತು ನಿಯಮಗಳು ಈ ಕೆಳಗಿನಂತಿದೆ.

೧) ೧೯೭೪ರ ಕರ್ನಾಟಕ ಕಾರಾಗೃಹ ನಿಯಮ

೨) ೧೯೭೮ರ ಕರ್ನಾಟಕ ಕಾರಾಗೃಹ ಕೈಪಿಡಿ

೩) ೧೯೬೩ರ ಬಾಲದೋಷಿ ಕಾಯ್ದೆ

೪) ೧೯೬೩ರ ಬಾಲದೋಷಿ ಶಾಲೆ ನಿಯಮಗಳು

ಕಾರಾಗೃಹವು ಬಂಧಿತರ ಸುರಕ್ಷತೆ ಹಾಗೂ ಭದ್ರತೆಯ ಜವಾಬ್ದಾರಿ ಹೊಂದಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ೨೦೦೬ರ ಮಾರ್ಚ್‌ವರೆಗೆ ಜಿಲ್ಲಾ ಕಾರಾಗೃಹವು ಅಸ್ಥಿತ್ವಕ್ಕೆ ಬಂದಿರುವುದಿಲ್ಲ. ಉಡುಪಿ, ಕಾರ್ಕಳ ಮತ್ತು ಕುಂದಾಪುರದಲ್ಲಿ ಉಪ ಕಾರಾಗೃಹಗಳು ಕಾರ್ಯನಿರ್ವಹಿಸುತ್ತಿವೆ. ಇವು ಕಂದಾಯ ಇಲಾಖೆಗೆ ಹೊಂದಿಕೊಂಡಿವೆ. ಕಂದಾಯ ಇಲಾಖೆಯ ತಾಲೂಕಿನ ಉಪತಹಸೀಲ್ದಾರ್‌ರವರು ಉಪಕಾರಾಗೃಹದ ಅಧೀಕ್ಷಕರಾಗಿರುತ್ತಾರೆ. ಇವರಿಗೆ ಸಹಾಯಕರಾಗಿ ಪ್ರಥಮ ದರ್ಜೆ ಸಹಾಯಕ ಹಾಗೂ ಅಟೆಂಡರ್‌ಗಳು ಕಾರ್ಯನಿರ್ವಹಿಸುತ್ತಾರೆ ಹಾಗೂ ಈ ಮೂರು ಉಪಕಾರಾಗೃಹಗಳಲ್ಲಿ ಕೇವಲ ವಿಚಾರಣಾಧೀನ ಕೈದಿಗಳು ಮಾತ್ರ ಇರುತ್ತಾರೆ.

## ಉಪಕಾರಾಗೃಹಗಳ ಆಡಳಿತ ವ್ಯವಸ್ಥೆ

ಉಡುಪಿ ಜಿಲ್ಲೆಯಲ್ಲಿರುವ ಮೂರು ಉಪಕಾರಾಗೃಹಗಳಲ್ಲೂ ಸರ್ಕಾರದಿಂದ ಸಿಬ್ಬಂದಿ ಮಂಜೂರಾತಿ ಇರುವುದಿಲ್ಲ. ಅವುಗಳಲ್ಲಿ ತಾಲೂಕಿನ ಉಪ ತಹಸೀಲ್ದಾರ್ (ಆಡಳಿತ) ಇವರು ಪ್ರಭಾರ ಅಧೀಕ್ಷಕರಾಗಿದ್ದು ಇವರ ಕೆಲಸದಲ್ಲಿ ನೆರವಾಗಲು ತಲಾ ಒಬ್ಬ ದ್ವಿತೀಯ ದರ್ಜೆ ಗುಮಾಸ್ತ ಹಾಗೂ 'ಡಿ' ದರ್ಜೆ ನೌಕರರಿರುತ್ತಾರೆ. ಉಡುಪಿ ತಾಲೂಕಿನ ಉಪ ಕಾರಾಗೃಹದಲ್ಲಿ ೧೯೯೫ ರಿಂದ ವರ್ಷ ೨೦೦೫ರವರೆಗೆ ಭರಿಸಲಾದ ವೆಚ್ಚವು ರೂ.೭೦,೦೦,೦೦೦/– ಆಗಿದೆ. ಇಲ್ಲಿನ ತಾಲ್ಲೂಕು ಕಛೇರಿಯ ಹಿಂಭಾಗದಲ್ಲಿರುವ ಎರಡಂತಸ್ತಿನ ಕಟ್ಟಡದಲ್ಲಿ ಕಾರಾಗೃಹ ನೆಲೆಯಾಗಿದೆ. ಪ್ರತಿ ಅಂತಸ್ತಿಗೆ ೧೨ ಕೊಠಡಿಯಂತೆ ೨೪ ಕೊಠಡಿಗಳ ಈ ಕಟ್ಟಡದಲ್ಲಿ ದಿನವಹಿ ಸರಾಸರಿ ೫೦ ಮಂದಿ ವಿಚಾರಣಾಧೀನ ಕೈದಿಗಳಿರುತ್ತಾರೆ. (ರೂ.೨೫ ಆಹಾರಕ್ಕೂ ಮತ್ತು ಆಡಳಿತಾತ್ಮಕ ವೆಚ್ಚಕ್ಕೆ ರೂ.೧೦) ಪ್ರತಿ ಕೈದಿಗೆ ದಿನವಹಿ ರೂ.೩೫ ರಂತೆ ಖರ್ಚು ಭರಿಸಲಾಗುತ್ತದೆ.

ವಿಚಾರಣಾಧೀನ ಕೈದಿಯು ಅವರ ಸ್ವಂತ ಉಡುಪನ್ನು ಧರಿಸಬಹುದು. ಕೈದಿಗಳಿಗೆ ಆರೋಗ್ಯ ಸಮಸ್ಯೆಗಳಿದ್ದಲ್ಲಿ ತಾಲೂಕು ಸರ್ಕಾರಿ ಆಸ್ಪತ್ರೆ ಹಾಗೂ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆಯಿದ್ದಾಗ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ ಮಂಗಳೂರು, ಕಿಮ್ಸ್ ಧಾರವಾಡ ಹಾಗೂ ಕಿದ್ವಾಯಿ ಮತ್ತು ನಿಮ್ಹಾನ್ಸ್ ಬೆಂಗಳೂರು ಮುಂತಾದೆಡೆಗೆ ಕಳುಹಿಸಿಕೊಡಲಾಗುತ್ತದೆ. ಪ್ರತಿ ವಿಚಾರಣಾ ಕೈದಿಗೂ ಕಾರಾಗೃಹದಲ್ಲಿರುವವರೆಗೆ ಪೌಷ್ಟಿಕ ಆಹಾರ ನೀಡಲಾಗುತ್ತದೆ. ಓದಲು ಆಸಕ್ತಿಯುಳ್ಳ ಬಂಧಿಗಳಿಗೆ ನಗರ ಕೇಂದ್ರ ಗ್ರಂಥಾಲಯದಿಂದ ಪುಸ್ತಕ, ದಿನಪತ್ರಿಕೆಗಳ ಲಭ್ಯವಾಗುತ್ತವೆ. ಅವರ ಮನರಂಜನೆಗಾಗಿ ದೂರದರ್ಶನ ವ್ಯವಸ್ಥೆ ಮಾಡಲಾಗಿದೆ. ಒಳಾಂಗಣ ಕ್ರೀಡೆಗಳಾದ ಚೆಸ್, ಕೇರಂ, ಕಬಡ್ಡಿ ಹಾಗೂ ವಾಲಿಬಾಲ್ ಮುಂತಾದ ಆಟಗಳನ್ನು ಆಡುವ ವ್ಯವಸ್ಥೆ ಕಲ್ಪಿಸಲಾಗಿದೆ. ರಾತ್ರಿ ಭಜನೆ, ಕೀರ್ತನೆ ಹಾಗೂ ಪ್ರಾರ್ಥನೆಗೆ ಅವಕಾಶವಿರುತ್ತದೆ.

ಕಾರಾಗೃಹಗಳಿಗೆ ಪೋಲೀಸ್ ಮಹಾನಿರ್ದೇಶಕರು, ಕಾರಾಗೃಹಗಳ ಮಹಾನಿರೀಕ್ಷಕರು, ಕಾರಾಗೃಹಗಳ ಉಪ ಮಹಾನಿರೀಕ್ಷಕರು, ಜಿಲ್ಲಾ ಸತ್ರ ನ್ಯಾಯಾಧೀಶರು, ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಅಧೀಕ್ಷಕರು ಹಾಗೂ ಉಪವಿಭಾಗಾಧಿಕಾರಿಗಳು ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸುತ್ತಾರೆ. ಬಂಧಿಗಳ ಅಹವಾಲನ್ನು ಸ್ವೀಕರಿಸಿ ಮನವಿಗಳಿಗೆ ಸ್ಪಂದಿಸಿ ಸೂಕ್ತ ವ್ಯವಸ್ಥೆಯಾಗುವಂತೆ ನೋಡಿಕೊಳ್ಳುತ್ತಾರೆ. ವಿಚಾರಣಾಧೀನ ಕೈದಿಗಳಿಗೆ ವಾರಕ್ಕೊಮ್ಮೆ ತಮ್ಮನ್ನು ಭೇಟಿ ಮಾಡಲು ಬಂದವರೊಡನೆ ಸಂಧಿಸಲು ಅವಕಾಶ ನೀಡಲಾಗುತ್ತದೆ.

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ

ಕರ್ನಾಟಕ ಸರ್ಕಾರವು ೧೯೭೭ರಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯವನ್ನು ಸ್ಥಾಪಿಸಿದೆ. ಲಾ ಕಮೀಷನ್‌ನ ೧೪ನೆಯ ಮತ್ತು ೪೧ನೆಯ ವರದಿಗಳಲ್ಲಿ ಇರುವ ಶಿಫಾರಸ್ಸುಗಳನ್ವಯ ಈ ನಿರ್ದೇಶನಾಲಯವು ಸ್ಥಾಪಿಸಲ್ಪಟ್ಟಿದೆ.

ನ್ಯಾಯಾಲಯಗಳಲ್ಲಿ ನಡೆಯುವ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪೋಲೀಸು ಇಲಾಖೆ ಮಾಡಿರುವ ಮಾಹಿತಿ ಸಂಗ್ರಹಣೆ ಸಮರ್ಪಕ ಹಾಗೂ ಸಮಗ್ರವಾಗಿರುವ ಬಗ್ಗೆ ದೃಢಪಡಿಸುವ ಗುರುತರ ಜವಾಬ್ದಾರಿ ನಿರ್ವಹಣೆಗೆ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸದರಿ ಇಲಾಖೆಯು ಸ್ಥಾಪಿಸಲ್ಪಟ್ಟಿದೆ. ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ, ಉಪವಿಭಾಗ ಮತ್ತು ತಾಲೂಕು ಮಟ್ಟಗಳಲ್ಲಿ ಇಲಾಖೆ ಕಾರ್ಯನಿರ್ವಹಿಸುತ್ತದೆ.

ಉಡುಪಿ ಜಿಲ್ಲೆಯಲ್ಲಿ ಅಭಿಯೋಗ ಉಪನಿರ್ದೇಶಕರ ಕಛೇರಿ ಇನ್ನೂ ಪ್ರಾರಂಭವಾಗಿಲ್ಲ. ಈ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯೋಗ ಇಲಾಖೆಯ ಕಛೇರಿಗಳು ಕೆಳಕಂಡಂತಿವೆ.

೧) ಸರ್ಕಾರಿ ಅಭಿಯೋಜಕರ ಕಛೇರಿ – ಉಡುಪಿ

೨) ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ – ಉಡುಪಿ

೩) ಸಹಾಯಕ ಸರ್ಕಾರಿ ಅಭಿಯೋಜಕರು – ಉಡುಪಿ

೪) ಸಹಾಯಕ ಸರ್ಕಾರಿ ಅಭಿಯೋಜಕರು – ಕುಂದಾಪುರ

೫) ಸಹಾಯಕ ಸರ್ಕಾರಿ ಅಭಿಯೋಜಕರು – ಕಾರ್ಕಳ

೬) ಅಧಿಕ ಸಹಾಯಕ ಸರ್ಕಾರಿ ಅಭಿಯೋಜಕರು – ಕಾರ್ಕಳ

ಸದರಿ ಕಛೇರಿಯ ಅಧಿಕಾರಿಗಳು ತಮ್ಮ ಸಹಾಯಕ ಸಿಬ್ಬಂದಿಯೊಂದಿಗೆ ಸಂಬಂಧಿತ ನ್ಯಾಯಾಲಯಗಳಲ್ಲಿ ಸರ್ಕಾರದ ಪರವಾಗಿ ಕ್ರಿಮಿನಲ್ ಪ್ರಕರಣಗಳನ್ನು ನಡೆಸಿ, ಇತ್ಯರ್ಥವಾದ ಬಳಿಕ ಸದರಿ ಪ್ರಕರಣಗಳ ಬಗ್ಗೆ ಅಭಿಪ್ರಾಯಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಿಸಿದ ವಿಭಾಗೀಯ ಕಛೇರಿಗಳಿಗೆ ಸಲ್ಲಿಸುತ್ತಾರೆ.

ಸರ್ಕಾರಿ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಸಿವಿಲ್ ಜಡ್ಜ್ ನ್ಯಾಯಾಲಯಗಳು ಹಾಗೂ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ನಡೆಸಲಾಗುವ ಸಿವಿಲ್ ವ್ಯಾಜ್ಯಗಳ ಮೇಲ್ವಿಚಾರಣೆಯೂ ಕೂಡ ಸದರಿ ಇಲಾಖೆಯ ಕಾರ್ಯಗಳಲ್ಲೊಂದಾಗಿದೆ ಹಾಗೂ ಇಲಾಖೆ ನಿರ್ವಹಿಸುವ ಇನ್ನಿತರ ಕೆಲಸಕಾರ್ಯಗಳು ಕೆಳಕಂಡಂತಿದೆ. ಜಿಲ್ಲಾ ಪೋಲಿಸ್ ಇಲಾಖೆಗೆ ಮತ್ತು ಇನ್ನಿತರ ಇಲಾಖಾ ಮುಖ್ಯಾಧಿಕಾರಿಗಳಿಗೆ ಕ್ರಿಮಿನಲ್ ಹಾಗೂ ಸಿವಿಲ್ ಸ್ವರೂಪದ ಮೊಕದ್ದಮೆಗಳಲ್ಲಿ ತನಿಖೆ ಮತ್ತು ಅಭಿಯೋಜನೆಗೆ ಸಂಬಂಧಪಟ್ಟಂತೆ ಸೂಕ್ತ ಸಲಹೆ ಸೂಚನೆ ನೀಡುವುದು ಹಾಗೂ ಮ್ಯಾಜಿಸ್ಟ್ರೇಟ್ ಹಾಗೂ ಸತ್ರ ನ್ಯಾಯಾಲಯಗಳು ನೀಡಿದ ತೀರ್ಪುಗಳ ಮತ್ತು ಆದೇಶಗಳನ್ನು ಪರಿಶೀಲಿಸುವುದು ಮತ್ತು ಅಂತಹ ತೀರ್ಪು ಮತ್ತು ಆದೇಶಗಳ ವಿರುದ್ಧ ಅರ್ಹ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿದೆ. ಅಭಿಯೋಗದಿಂದ ಮೊಕದ್ದಮೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳುವ ವಿಷಯವೂ ಸೇರಿದಂತೆ ಕ್ರಿಮಿನಲ್ ಮೊಕದ್ದಮೆಗಳ ತನಿಖೆ ಮತ್ತು ಅಭಿಯೋಗಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಸಲಹೆಗಳನ್ನು ನೀಡುವುದು.

ಉಡುಪಿಯ ಸರ್ಕಾರಿ ಅಭಿಯೋಜಕರ ಕಛೇರಿಯಲ್ಲಿ ಸರ್ಕಾರಿ ಅಭಿಯೋಜಕರು ಕಾರ್ಯ ನಿರ್ವಹಿಸುತ್ತಿದ್ದು, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ಅಟೆಂಡರ್ ಮತ್ತು ದಲಾಯತರು ಮುಂತಾದ ಸಿಬ್ಬಂದಿ ವರ್ಗದವರಿದ್ದಾರೆ. ಉಳಿದಂತೆ ಕುಂದಾಪುರ ಮತ್ತು

## ಜಿಲ್ಲೆಯಲ್ಲಿ ಸಿವಿಲ್ ಪ್ರಕರಣಗಳ ವಿವರ

| ವರ್ಷಗಳು | ಪರಿಶೀಲಿಸಲಾದ ತೀರ್ಪು ಮತ್ತು ಆದೇಶ ಸಂಖ್ಯೆ | ಮೇಲ್ಮನವಿ ಸಲ್ಲಿಸಲು ಶಿಫಾರಸ್ಸು | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಸಂಖ್ಯೆ | ಮೇಲ್ಮನವಿ ಸಲ್ಲಿಸುವುದಕ್ಕಾಗಲಿ, ಪರಿಷ್ಕರಣಾಕ್ಕಾಗಲಿ ಶಿಫಾರಸ್ಸಿಲ್ಲದ ಪ್ರಕರಣಗಳು |
|---|---|---|---|---|
| ೨೦೦೨ | ೪೫ | ೦೪ | – | ೪೧ |
| ೨೦೦೩ | ೬೫ | ೦೬ | – | ೫೯ |
| ೨೦೦೪ | ೫೮ | ೦೭ | – | ೫೧ |
| ೨೦೦೫ | ೫೩ | ೦೪ | ೦೨ | ೪೭ |
| ಒಟ್ಟು | ೨೨೧ | ೨೧ | ೦೨ | ೧೯೮ |

## ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿನ ಕ್ರಿಮಿನಲ್ ಪ್ರಕರಣಗಳ ವಿವರ

| ವರ್ಷಗಳು | ವಿಲೇವಾರಿ ಮಾಡಲಾದ ಪ್ರಕರಣಗಳ ಸಂಖ್ಯೆ | ಶಿಕ್ಷೆ ವಿಧಿಸಿದ ಪ್ರಕರಣಗಳ ಸಂಖ್ಯೆ | ಪರಿಶೀಲಿಸಲಾದ ಪ್ರಕರಣಗಳ ಸಂಖ್ಯೆ | ಮೇಲ್ಮನವಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣಗಳು | ಪರಿಷ್ಕರಣಕ್ಕೆ ಅರ್ಜಿಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣಗಳು | ಮೇಲ್ಮನವಿಗೆ ಅಥವಾ ಪರಿಷ್ಕರಣೆಗೆ ಶಿಫಾರಸ್ಸು ಮಾಡಿಲ್ಲದ ಸಂಖ್ಯೆ | ಷರಾ |
|---|---|---|---|---|---|---|---|
| ೨೦೦೧ | ೦೮ | – | – | – | – | – | – |
| ೨೦೦೨ | ೨೫೩೨ | ೮೧೨ | ೫೯೫ | ೧೧ | – | ೫೮೪ | – |
| ೨೦೦೩ | ೨೭೯೭ | ೮೪೪ | ೬೯೧ | ೦೮ | ೦೧ | ೬೮೨ | – |
| ೨೦೦೪ | ೩೩೨೬ | ೧೧೩೪ | ೬೭೮ | ೦೭ | ೦೨ | ೬೬೯ | – |
| ೨೦೦೫ | ೩೧೮೦ | ೧೩೫೮ | ೫೦೫ | ೦೪ | – | ೫೦೧ | – |
| ಒಟ್ಟು | ೧೧೮೪೩ | ೪೧೪೮ | ೨೪೬೯ | ೩೦ | ೦೩ | ೨೪೩೬ | – |

*ಆಧಾರ: ಅಭಿಯೋಗ ಮತ್ತು ಸಿವಿಲ್ ವ್ಯಾಜ್ಯಗಳ ನಿರ್ದೇಶನಾಲಯ – ಬೆಂಗಳೂರು*

ಕಾರ್ಕಳಗಳಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಕಾರ್ಯನಿರ್ವಹಿಸುತ್ತಿದ್ದು ಅವರಿಗೆ ಬೆರಳಚ್ಚುಗಾರರು ಹಾಗೂ ದಲಾಯತರು ಸಹಾಯಕ ಸಿಬ್ಬಂದಿಯಾಗಿರುತ್ತಾರೆ.

ಸದರಿ ಇಲಾಖೆಯ ಅಧಿಕಾರಿಗಳು ಕಾನೂನು ನೆರವು ಪ್ರಾಧಿಕಾರದ ಪದಾಧಿಕಾರಿಗಳೊಂದಿಗೆ ಸಹಕರಿಸುವ ಮೂಲಕ ಸಮಾಜದ ದುರ್ಬಲವರ್ಗದ ಜನರಿಗಾಗಿ ಕಾನೂನು ನೆರವು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ವಿಷಯದಲ್ಲಿ ಜಿಲ್ಲಾ ಪೋಲೀಸ್ ಅಧೀಕ್ಷಕರಿಗೆ ಒದಗಿಸಿರುವ ಸಹಾಯಕ ಅಭಿಯೋಗ ನಿರ್ದೇಶಕರು ಜಿಲ್ಲಾ ಕಾನೂನು ನೆರವು ಸಮಿತಿಯ ಸದಸ್ಯರಾಗಿರುತ್ತಾರೆ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ತಾಲೂಕು ಕಾನೂನು ನೆರವು ಸಮಿತಿಯ ಸದಸ್ಯರಾಗಿರುತ್ತಾರೆ. ಜಿಲ್ಲಾ ಮಟ್ಟದ ಅಭಿಯೋಗ ಉಪ ನಿರ್ದೇಶಕರ ಕಛೇರಿ ಉಡುಪಿಯಲ್ಲಿ ಇನ್ನೂ ಪ್ರಾರಂಭಿಸಲ್ಪಟ್ಟಿಲ್ಲ, ಜಿಲ್ಲಾ ಕೇಂದ್ರದಲ್ಲಿ ಸರ್ಕಾರಿ ಅಭಿಯೋಜಕರ ಕಛೇರಿ ಹಾಗೂ ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ ಮತ್ತು ತಾಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಗಳು ಕಾರ್ಯನಿರ್ವಹಿಸುತ್ತವೆ.

### ಕಾನೂನು ಸೇವಾ ಪ್ರಾಧಿಕಾರ

ಕರ್ನಾಟಕ ರಾಜ್ಯದಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ೧೯೭೮ರ ಸರ್ಕಾರಿ ಆದೇಶದನ್ವಯ ಸ್ಥಾಪಿತವಾಗಿ ಕಾರ್ಯನಿರ್ವಹಿಸುತ್ತಿದೆ. ಸದರಿ ಪ್ರಾಧಿಕಾರವು ರಾಜ್ಯಮಟ್ಟದ ಕೇಂದ್ರ ಕಛೇರಿಯನ್ನು

ಬೆಂಗಳೂರಿನಲ್ಲಿ ಹೊಂದಿದೆ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟಗಳಲ್ಲಿ ಕಾನೂನು ಸೇವಾ ಸಮಿತಿಗಳ ಮೂಲಕ ಸೇವೆ ಸಲ್ಲಿಸುತ್ತಿದೆ. ಪ್ರಾಧಿಕಾರದ ಧ್ಯೇಯೋದ್ದೇಶಗಳಲ್ಲಿ ಕಾನೂನಿನ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು, ಅರ್ಹರಿಗೆ ಉಚಿತ ಕಾನೂನು ಸಲಹೆ ನೀಡುವುದು, ಜನತಾ ನ್ಯಾಯಾಲಯಗಳ ಮೂಲಕ ಕ್ಷಿಪ್ರವಾಗಿ ವ್ಯಾಜ್ಯಗಳನ್ನು ಬಗೆಹರಿಸುವುದು ಉದ್ದೇಶಗಳಾಗಿವೆ.

ಈ ಮೊದಲು ಆರ್ಥಿಕವಾಗಿ ಹಿಂದುಳಿದವರ್ಗಗಳಿಗೆ ಉಚಿತ ಕಾನೂನು ನೆರವನ್ನು ಕಾನೂನು ನೆರವು ಮಂಡಳಿಗಳು ಒದಗಿಸುತ್ತಿದ್ದವು. ಅವುಗಳ ರದ್ಧತಿಯ ನಂತರ ಈಗಿರುವ ಕಾನೂನು ಸೇವಾ ಪ್ರಾಧಿಕಾರವನ್ನು ರಚಿಸಲಾಯಿತು. ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಈ ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ. ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಆಯಾ ಜಿಲ್ಲೆಯ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಅಧ್ಯಕ್ಷರಾಗಿದ್ದು ಪ್ರಧಾನ ಸಿವಿಲ್ ನ್ಯಾಯಾಧೀಶರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಪ್ರತಿ ತಾಲೂಕಿನ ಕಾನೂನು ಸೇವಾ ಸಮಿತಿಗಳಿಗೆ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಇವರು ಅಧ್ಯಕ್ಷರಾಗಿದ್ದು ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಇವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಈ ಸಂಸ್ಥೆಗಳು ಸರ್ಕಾರದಿಂದ ನಾಮ ನಿರ್ದೇಶಿಸಲ್ಪಟ್ಟ ಸದಸ್ಯರನ್ನು ಒಳಗೊಂಡಿದ್ದು ಸದಸ್ಯ ಮಂಡಳಿಯ ಸಲಹೆಯ ಮೇರೆಗೆ ಕಾರ್ಯನಿರ್ವಹಿಸುತ್ತವೆ. ಉಡುಪಿ ಜಿಲ್ಲೆಯಲ್ಲಿ ೨೦೦೨ನೇ ಇಸವಿಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಸ್ಥಾಪನೆಗೊಂಡಿದ್ದು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಪ್ರಾಧಿಕಾರದ ವ್ಯಾಪ್ತಿಯ ಉಡುಪಿ, ಕಾರ್ಕಳ ಹಾಗೂ ಕುಂದಾಪುರ ತಾಲೂಕುಗಳಲ್ಲಿ ತಾಲೂಕು ಕಾನೂನು ಸೇವಾ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಯಾವುದೇ ಕುಟುಂಬಗಳ ವಾರ್ಷಿಕ ಆದಾಯ ರೂ. ೨೫ ಸಾವಿರಕ್ಕಿಂತ ಕಡಿಮೆ ಇದ್ದರೆ ಅಂತಹವರು ಪ್ರಾಧಿಕಾರವು ಒದಗಿಸುವ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ. ಅಲ್ಲದೆ ಮಾನಸಿಕ ಮತ್ತು ದೈಹಿಕ ನ್ಯೂನತೆ ಹೊಂದಿರುವವರು, ಮಹಿಳೆಯರು, ಮಕ್ಕಳು, ಪ್ರಕೃತಿ ವಿಕೋಪಕ್ಕೆ ಈಡಾದವರು, ರಕ್ಷಣಾ ಗೃಹ ಹಾಗೂ ಮಾನಸಿಕ ಆಸ್ಪತ್ರೆಗಳ ಉಸ್ತುವಾರಿಯಲ್ಲಿರುವವರು, ಮತೀಯ

**ಜಿಲ್ಲೆಯಲ್ಲಿ ಒದಗಿಸಲಾದ ಕಾನೂನು ನೆರವು ಮತ್ತು ಕಾನೂನು ಸಾಕ್ಷರತಾ ಶಿಬಿರದ ವಿವರ**

| ತಾಲೂಕು | ವರ್ಷಗಳು | ನಡೆದ ಶಿಬಿರಗಳ ಸಂಖ್ಯೆ | ನೀಡಲಾದ ಉಪನ್ಯಾಸಗಳು | ಫಲಾನುಭವಿಗಳ ಸಂಖ್ಯೆ | ಖರ್ಚು | ಕಾನೂನು ನೆರವು ನೀಡಿದ ಪ್ರಕರಣಗಳ ಸಂಖ್ಯೆ |
|---|---|---|---|---|---|---|
| **ಉಡುಪಿ** | ೨೦೦೨-೦೩ | ೭ | ೨೩ | ೨೬೬೪ | ೧೭೦೦ | ೮ |
| | ೨೦೦೩-೦೪ | ೧೦ | ೪೨ | ೩೩೩೧ | ೨೧೮೦೦ | ೬ |
| | ೨೦೦೪-೦೫ | ೨೬ | ೮೨ | ೭೬೫೬ | ೧೭೮೮೦ | ೭ |
| | ಡಿಸೆಂಬರ್ ೨೦೦೫ರವರೆಗೆ | ೩೩ | ೬೫ | ೮೫೨೦ | ೧೧೦೦ | ೮ |
| | **ಒಟ್ಟು** | **೭೬** | **೨೧೨** | **೨೨೧೭೧** | **೪೨೫೫೦** | **೨೯** |
| **ಕುಂದಾಪುರ** | ೨೦೦೨-೦೩ | ೫ | ೧೧ | ೮೦೦ | ೧೬೬೩ | ೦ |
| | ೨೦೦೩-೦೪ | ೯ | ೨೩ | ೧೮೫೦ | ೭೬೦೬ | ೨ |
| | ೨೦೦೪-೦೫ | ೨೬ | ೭೫ | ೬೦೦೦ | ೬೭೮೦ | ೨ |
| | ಡಿಸೆಂಬರ್ ೨೦೦೫ರವರೆಗೆ | ೨೨ | ೬೨ | ೮೩೦೦ | ೩೦೯೫ | ೦ |
| | **ಒಟ್ಟು** | **೬೨** | **೧೭೧** | **೧೬೯೫೦** | **೧೯೧೪೪** | **೪** |

| ತಾಲೂಕು | ವರ್ಷಗಳು | ನಡೆದ ಶಿಬಿರಗಳ ಸಂಖ್ಯೆ | ನೀಡಲಾದ ಉಪನ್ಯಾಸಗಳು | ಫಲಾನುಭವಿಗಳ ಸಂಖ್ಯೆ | ಖರ್ಚು | ಕಾನೂನು ನೆರವು ನೀಡಿದ ಪ್ರಕರಣಗಳ ಸಂಖ್ಯೆ |
|---|---|---|---|---|---|---|
| ಕಾರ್ಕಳ | ೨೦೦೨–೦೩ | ೨ | ೩ | ೩೫೦ | ೧೬೦೦ | ೦ |
| | ೨೦೦೩–೦೪ | ೪ | ೨೧ | ೨೦೦೦ | ೧೨೭೧೧ | ೨ |
| | ೨೦೦೪–೦೫ | ೧೭ | ೫೨ | ೪೪೫೦ | ೧೩೬೪೫ | ೦ |
| | ಡಿಸೆಂಬರ್ ೨೦೦೫ ರವರೆಗೆ | ೨೧ | ೬೫ | ೫೪೦೦ | ೬೭೦೦ | ೧೦ |
| | **ಒಟ್ಟು** | **೪೪** | **೧೪೧** | **೧೨೨೦೦** | **೩೪೬೫೬** | **೧೨** |

ದೌರ್ಜನ್ಯಕ್ಕೆ ಒಳಗಾದವರು, ಕಾರ್ಖಾನೆಗಳ ಕಾರ್ಮಿಕರು, ಲೈಂಗಿಕ ಕಾರ್ಯಕರ್ತರು ಹಾಗೂ ಜೀತದಾಳುಗಳಿಗೆ ಮತ್ತು ಅನಾಥರಿಗೆ ಈ ಪ್ರಾಧಿಕಾರವು ಕಾನೂನು ಸಲಹೆ, ಸೇವೆಯನ್ನು ಉಚಿತವಾಗಿ ಒದಗಿಸುತ್ತದೆ. ಇಂತಹ ಪ್ರಕರಣಗಳಲ್ಲಿ ಕೆಳಹಂತದ ನ್ಯಾಯಾಲಯಗಳಿಂದ ಹಿಡಿದು ಸರ್ವೋಚ್ಚ ನ್ಯಾಯಾಲಯದವರೆಗೆ ಎಲ್ಲಾ ರೀತಿಯ ವೆಚ್ಚಗಳನ್ನು ಪ್ರಾಧಿಕಾರವು ಭರಿಸುತ್ತದೆ.

## ಜನತಾ ನ್ಯಾಯಾಲಯ

ಕಾನೂನು ಸೇವಾ ಪ್ರಾಧಿಕಾರಗಳ ಮುಖ್ಯ ಉದ್ದೇಶವೆಂದರೆ ದುರ್ಬಲರಿಗೆ ಉಚಿತವಾಗಿ ಶೀಘ್ರ ನ್ಯಾಯಾಲಯ ದೊರಕಿಸುವುದಾಗಿದೆ. ಇದಕ್ಕಾಗಿ ಪ್ರಾಧಿಕಾರವು ಜನತಾ ನ್ಯಾಯಾಲಯಗಳೆಂಬ ವ್ಯವಸ್ಥೆಯ ಮುಖೇನ ಅರ್ಹರಿಗೆ ಕ್ಷಿಪ್ರವಾಗಿ ನ್ಯಾಯದಾನ ಮಾಡುತ್ತದೆ. ಈ ಮೂಲಕ ಸಾಮಾನ್ಯ ನ್ಯಾಯಾಲಯಗಳ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ. ಇಲ್ಲಿ ಹೆಚ್ಚಿನ ಪ್ರಕರಣಗಳು ರಾಜಿ ಸಂಧಾನ ಮಾಡುವ ಮೂಲಕ ಇತ್ಯರ್ಥಗೊಳ್ಳುತ್ತವೆ. ರಾಜಿಗೊಂಡ ಪ್ರಕರಣಗಳಲ್ಲಿ ಮೇಲ್ಮನವಿಯ ಪ್ರಶ್ನೆ ಉದ್ಭವಿಸುವುದಿಲ್ಲವಾದ ಕಾರಣ ಆರ್ಥಿಕವಾಗಿ ಸಂಕಷ್ಟದಲ್ಲಿರುವವರಿಗೆ ಇನ್ನೂ ಹೆಚ್ಚಿನ ಹಾನಿಯಾಗದಂತಾಗುತ್ತದೆ. ಉಡುಪಿ ಜಿಲ್ಲೆಯಲ್ಲಿ ೨೦೦೨ ರಿಂದ ೨೦೦೫ರ ಡಿಸೆಂಬರ್‌ವರೆಗೆ ಜನತಾ ನ್ಯಾಯಾಲಯಗಳಲ್ಲಿ ನಡೆದ ಪ್ರಕರಣಗಳ ವಿವರಗಳನ್ನು ಪುಟ ೫೦೧ ಕೋಷ್ಟಕದಲ್ಲಿ ನೀಡಲಾಗಿದೆ.

## ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆ

೧೯೮೬ನೇ ಇಸವಿಯಲ್ಲಿ ಗ್ರಾಹಕರ ಶೋಷಣೆ ತಡೆಯುವ ಉದ್ದೇಶಕ್ಕಾಗಿ ಗ್ರಾಹಕ ರಕ್ಷಣಾ ಅಧಿನಿಯಮವನ್ನು ಜಾರಿಗೊಳಿಸಲಾಯಿತು. ಆ ಪ್ರಕಾರ ರಾಜ್ಯದಲ್ಲಿ ಗ್ರಾಹಕ ದೂರು ಪರಿಹಾರ ಆಯೋಗ ಸ್ಥಾಪನೆಗೊಂಡಿದ್ದು ಇದರಡಿಯಲ್ಲಿ ಪ್ರತಿ ಜಿಲ್ಲೆಯಲ್ಲೂ ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆಗಳು ಕಾರ್ಯನಿರ್ವಹಿಸುತ್ತಿವೆ. ಈ ವೇದಿಕೆಯು ಮುಖ್ಯವಾಗಿ ಗ್ರಾಹಕನು ಕೊಂಡ ವಸ್ತು ಅಥವಾ ಪಡೆದ ಸೇವೆಗಳ ಬಗ್ಗೆ ಉದ್ಭವಿಸುವ ತಕರಾರುಗಳನ್ನು ಆಲಿಸಿ ಗ್ರಾಹಕರ ಹಿತರಕ್ಷಣೆ ಮಾಡುತ್ತದೆ.

ರಾಜ್ಯ ಆಯೋಗದ ಅಧ್ಯಕ್ಷರಾಗಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಕಾರ್ಯನಿರ್ವಹಿಸುತ್ತಾರೆ. ಜಿಲ್ಲಾ ವೇದಿಕೆಗಳಿಗೆ ಅಧ್ಯಕ್ಷರನ್ನು ರಾಜ್ಯ ಅಯೋಗವು ನೇಮಿಸುತ್ತದೆ. ಜಿಲ್ಲಾ ನ್ಯಾಯಾಧೀಶರು ಅಥವಾ ಸಮಾನ ಅರ್ಹತೆಯುಳ್ಳವರು ಸಾಮಾನ್ಯವಾಗಿ ಜಿಲ್ಲಾ ವೇದಿಕೆಗೆ ಅಧ್ಯಕ್ಷರಾಗಿರುತ್ತಾರೆ. ಉಳಿದ ಇಬ್ಬರು ಸದಸ್ಯರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ಸದಸ್ಯರಾಗಲು ಕೆಳಕಂಡ ಅರ್ಹತೆ ಹೊಂದಿರಬೇಕಾಗುತ್ತದೆ. ೩೫ ವರ್ಷಗಳಿಗೆ ಕಡಿಮೆ ಇಲ್ಲದೆ, ಪದವೀಧರರಾಗಿದ್ದು, ಜೊತೆಗೆ ಅರ್ಥಶಾಸ್ತ್ರ, ಕಾನೂನು, ವಾಣಿಜ್ಯ, ಲೆಕ್ಕಶಾಸ್ತ್ರ, ಕೈಗಾರಿಕೆ, ಸಾರ್ವಜನಿಕ ವ್ಯವಹಾರ ಅಥವಾ ಆಡಳಿತಕ್ಕೆ ಸಂಬಂಧಿಸಿದಂತೆ ಹತ್ತು ವರ್ಷಗಳ ಅನುಭವವಿರಬೇಕು. ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆಯು ರೂ.೨೦ ಲಕ್ಷದವರೆಗಿನ ಮೌಲ್ಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ದೂರಗಳನ್ನು ಸ್ವೀಕರಿಸಿ ತೀರ್ಪು ನೀಡಬಹುದಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ೨೦೦೪ರಲ್ಲಿ ಗ್ರಾಹಕರ ವೇದಿಕೆಯು ಪ್ರಾರಂಭಿಸಲ್ಪಟ್ಟಿದೆ.

## ಜಿಲ್ಲಾ ಜನತಾ ನ್ಯಾಯಾಲಯದಲ್ಲಿ ನಡೆದ ಮೊಕದ್ದಮೆಗಳ ವಿವರ

| ತಾಲೂಕು | ವರ್ಷಗಳು | ನಡೆದ ಒಟ್ಟು ಜನತಾ ನ್ಯಾಯಾಲಯ ಸಂಖ್ಯೆ / ತೀರುವಳಿಗೊಂಡ ಒಟ್ಟು ಪ್ರಕರಣಗಳು | | ತೀರುವಳಿಗೊಂಡ ಪ್ರಕರಣ | | | | ಎಂ.ವಿ.ಸಿ. ಪ್ರಕರಣದಲ್ಲಿ ನೀಡಲಾದ ಒಟ್ಟು ಪರಿಹಾರ ರೂ. | ಎಲ್.ಎ.ಸಿ. ಪ್ರಕರಣದಲ್ಲಿ ನೀಡಲಾದ ಒಟ್ಟು ಪರಿಹಾರ ರೂ. | ಮಾಡಲಾದ ಒಟ್ಟು ಖರ್ಚು |
|---|---|---|---|---|---|---|---|---|---|---|
| | | | | ಸಿವಿಲ್ | ಕ್ರಿಮಿನಲ್ | ವ್ಯಾಜ್ಯಪೂರ್ವ ಪ್ರಕರಣಗಳು | ಎಂ.ವಿ.ಸಿ. ಪ್ರಕರಣಗಳು | | | |
| ಉಡುಪಿ | ೨೦೦೨–೦೩ | ೧೨ | ೯೬೯ | ೨೬೦ | ೨೯೧ | – | ೪೧೮ | ೩೪೦೪೧೯೦೦ | – | ೨೨೨೫೫ |
| | ೨೦೦೩–೦೪ | ೧೩ | ೧೩೨೩ | ೩೩೫ | ೬೭೯ | ೫ | ೩೦೪ | ೨೫೨೮೨೬೦೦ | ೯೭೮೪೭ | ೨೩೨೩೧ |
| | ೨೦೦೪–೦೫ | ೨೦ | ೯೯೦ | ೧೯೬ | ೫೭೬ | ೧ | ೨೧೭ | ೧೨೭೯೯೫೧೦ | ೧೬೫೮೧೩ | ೧೮೯೬೯ |
| | ೨೦೦೫ ಡಿಸೆಂಬರ್ ವರೆಗೆ | ೧೫ | ೮೩೩ | ೧೫೪ | ೫೫೩ | – | ೧೨೬ | ೮೯೬೮೦೦೦ | – | ೧೧೬೨೨ |
| | **ಒಟ್ಟು** | **೬೦** | **೪೧೧೫** | **೯೪೫** | **೨೦೯೯** | **೦೬** | **೧೦೬೫** | **೮೧೦೯೨೦೧೦** | **೨೬೩೬೬೦** | **೭೬೦೭೭** |
| ಕುಂದಾಪುರ | ೨೦೦೨–೦೩ | ೮ | ೪೦೨ | ೮೯ | ೧೧೯ | – | ೧೯೪ | ೧೬೯೭೧೬೧೨ | – | ೧೯೮೫ |
| | ೨೦೦೩–೦೪ | ೧೫ | ೮೧೩ | ೧೭೦ | ೩೩೯ | ೫ | ೨೯೯ | ೨೧೪೬೯೮೦೦ | ೫೧೯೯೬ | ೭೭೮೩ |
| | ೨೦೦೪–೦೫ | ೧೪ | ೭೨೧ | ೨೧೭ | ೨೯೮ | ೩ | ೨೦೩ | ೧೫೪೪೫೦೦೦ | ೨೦೭೦೫೫ | ೧೦೬೬೧ |
| | ೨೦೦೫ ಡಿಸೆಂಬರ್ ವರೆಗೆ | ೧೨ | ೫೪೬ | ೧೩೦ | ೨೨೧ | ೧ | ೧೯೪ | ೧೫೦೫೯೫೦೦ | ೧೦೮೪೪ | ೧೨೦೦೦ |
| | **ಒಟ್ಟು** | **೪೯** | **೨೪೮೨** | **೬೦೬** | **೯೭೭** | **೯** | **೮೯೦** | **೬೮೯೪೫೯೧೨** | **೨೬೯೮೯೫** | **೩೨೪೨೯** |
| ಕಾರ್ಕಳ | ೨೦೦೨–೦೩ | ೧೨ | ೪೮೦ | ೧೫೫ | ೩೨೫ | – | – | – | – | ೧೦೯೯೦ |
| | ೨೦೦೩–೦೪ | ೧೦ | ೪೩೪ | ೧೩೭ | ೨೯೭ | – | – | – | – | ೭೦೬೦ |
| | ೨೦೦೪–೦೫ | ೨೧ | ೩೦೧ | ೧೧೪ | ೧೮೭ | – | – | – | – | ೬೨೦೬ |
| | ೨೦೦೫ ಡಿಸೆಂಬರ್ ವರೆಗೆ | ೮ | ೭೨ | ೨೩ | ೪೨ | ೧ | – | – | – | ೪೦೩೫ |
| | **ಒಟ್ಟು** | **೫೧** | **೧೨೮೭** | **೪೨೯** | **೮೫೧** | **೧** | **೬** | **೪,೬೦,೦೦೦** | – | **೨೭೩೯೧** |

***ಆಧಾರ:*** *ಕಾನೂನು ಸೇವಾ ಪ್ರಾಧಿಕಾರ – ಬೆಂಗಳೂರು*

ಉಡುಪಿಯಲ್ಲಿ ವೇದಿಕೆಯ ಕೇಂದ್ರ ಕಛೇರಿಯಿದ್ದು ಇದು ಜಿಲ್ಲಾವ್ಯಾಪ್ತಿಯನ್ನು ಹೊಂದಿದೆ. ೨೦೦೪ರಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಆವರೆಗಿನ ೨೨೪ ಪ್ರಕರಣಗಳನ್ನು ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ವೇದಿಕೆಯಿಂದ ಉಡುಪಿ ಜಿಲ್ಲಾ ಗ್ರಾಹಕರ ವೇದಿಕೆಗೆ ವರ್ಗಾಯಿಸಲಾಯಿತು. ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

## ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ನಡೆದ ಮೊಕದ್ದಮೆಗಳ ವಿವರ

| ವರ್ಷಗಳು | ದಾಖಲಾದ ಮೊಕದ್ದಮೆ ಸಂಖ್ಯೆ | ಇತ್ಯರ್ಥಗೊಂಡ ಮೊಕದ್ದಮೆ ಸಂಖ್ಯೆ | ಬಾಕಿ ಇರುವ ಮೊಕದ್ದಮೆ ಸಂಖ್ಯೆ |
|---|---|---|---|
| ೨೦೦೦ | ೦೨ | ೦೨ | – |
| ೨೦೦೧ | ೦೭ | ೦೭ | – |
| ೨೦೦೨ | ೧೨ | ೧೨ | – |
| ೨೦೦೩ | ೧೮೨ | ೧೮೨ | – |
| ೨೦೦೪ | ೩೮೬ | ೩೮೬ | – |
| ೨೦೦೫ | ೧೬೩ | ೧೪೬ | ೧೭ |
| ೨೦೦೬ | ೪೮ | ೦೩ | ೪೫ |
| **ಒಟ್ಟು** | **೮೦೦** | **೭೩೮** | **೬೨** |

*ಆಧಾರ: ಉಡುಪಿ ಜಿಲ್ಲಾ ಗ್ರಾಹಕರ ಪರಿಹಾರ ವೇದಿಕೆ – ಉಡುಪಿ*

## ಜಿಲ್ಲಾ ಪೊಲೀಸ್ ಆಡಳಿತ

ಪೊಲೀಸ್ ಅಥವಾ ಆರಕ್ಷಕ ಇಲಾಖೆಯು ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ, ಅಪರಾಧ ಪತ್ತೆ ಮಾಡುವ, ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಿಸುವ ಮತ್ತು ಜನರಿಗೆ ರಕ್ಷಣೆಯನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. ಪ್ರಾಚೀನ ಕಾಲದ ವ್ಯವಸ್ಥೆಯಲ್ಲಿ ಗ್ರಾಮಮಟ್ಟದಲ್ಲಿ ಊರಿನ ರಕ್ಷಣೆ ಹೊಣೆ ತಳವಾರನದಾಗಿತ್ತು. ಪಟ್ಟಣಗಳಲ್ಲಿ ಹಾಗೂ ನಗರಗಳಲ್ಲಿ ಕೊತ್ವಾಲರು ರಕ್ಷಣೆ ಒದಗಿಸುತ್ತಿದ್ದರು.

**ಪ್ರಾಚೀನ ವ್ಯವಸ್ಥೆ :** ಉಡುಪಿ ಜಿಲ್ಲೆಯೂ ಸೇರಿದಂತಿದ್ದ ತುಳುನಾಡಿನಲ್ಲಿ ಆಳ್ವರಸರ ಆಡಳಿತಾವಧಿಯಲ್ಲಿ ನಾಗರೀಕರ ರಕ್ಷಣೆಗೆ ವಿಶೇಷ ಒತ್ತು ನೀಡಲಾಗಿತ್ತು. ರಾಜ್ಯವನ್ನು ಸುಗಮ ಆಡಳಿತದ ದೃಷ್ಟಿಯಿಂದ ಸಣ್ಣ ಪ್ರದೇಶ ವ್ಯಾಪ್ತಿಯಲ್ಲಿ ನಾಡುಗಳನ್ನಾಗಿ ವಿಭಜಿಸಲಾಗಿತ್ತು. ನಾಡು, ನಗರ, ನಕರ, ಪುರ ಮುಂತಾಗಿ ಕರೆಯಲ್ಪಡುತ್ತಿದ್ದ ಪ್ರಮುಖ ಸ್ಥಳಗಳ ಆಡಳಿತವನ್ನು 'ನಾಯಕ'ರು ನಡೆಸುತ್ತಿದ್ದರು. ಗ್ರಾಮಗಳಿಗೆ 'ಒಡೆಯ'ರು ಮುಖ್ಯಸ್ಥರಾಗಿದ್ದರು. ಗ್ರಾಮಣಿ, ಊರಾಳ್ವ, ಪೆರ್ಗಡೆ ಅಥವಾ ಹೆಗ್ಗಡೆ ಇನ್ನಿತರ ಅಧಿಕಾರಿಗಳಾಗಿದ್ದರು.

ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಆಡಳಿತ ನಡೆಸುತ್ತಿದ್ದ ನಾಯಕರು ತಮ್ಮ ಪ್ರದೇಶದ ಶಾಂತಿ ಮತ್ತು ಸುವ್ಯವಸ್ಥೆಗೆ ಜವಾಬ್ದಾರರಾಗಿದ್ದರು. ಇವರು ತಮ್ಮ ಅಧೀನದಲ್ಲಿ 'ಕಾವಲುಗಾರ' ಎಂಬ ಭಟರನ್ನು ನೇಮಿಸಿ ಅವರಿಗೆ ಸಣ್ಣ ಪ್ರದೇಶದ ಉಸ್ತುವಾರಿ ನೀಡುತ್ತಿದ್ದರು. ಇಂತಹ ಕಾವಲುಗಾರರು ಸ್ಥಳೀಯ 'ಅಪರಾಧಿ ಬುಡಕಟ್ಟಿಗೆ' ಸೇರಿದವರಾಗಿದ್ದು ತಮ್ಮ ಜನರಿಂದ ನಡೆಯುಬಹುದಾದ ಅಪರಾಧಗಳನ್ನು ತಡೆಯುವ ಹೊಣೆ ಹೊರುತ್ತಿದ್ದರು ಮತ್ತು ಕಾವಲುಗಾರರ ಅಧೀನದಲ್ಲಿ 'ತಲೈಯಾರಿ' ಎಂಬ ಭಟರಿರುತ್ತಿದ್ದರು. 'ಕಳ್ಳರ ಜಾಡನ್ನು ಕಳ್ಳನೇ ಬಲ್ಲ' ಎಂಬ ನಾಣ್ಣುಡಿಯಂತೆ ಕಳ್ಳರನ್ನು ಕಳ್ಳರೇ ಹಿಡಿಯುತ್ತಿದ್ದ ಈ ವ್ಯವಸ್ಥೆಯು 'ನಾಯನಕಾರ ಪದ್ಧತಿ' ಎಂದು ಹೆಸರಾಗಿತ್ತು ಮತ್ತು ಕರ್ತವ್ಯ ಪಾಲನೆಯಲ್ಲಾಗುವ ಲೋಪಕ್ಕೆ ಶಿಕ್ಷೆಯಾಗುತ್ತಿತ್ತು. ಇವರ ಕೆಲಸಕ್ಕೆ ಭೂಮಿಯನ್ನು ವೇತನರೂಪದಲ್ಲಿ ನೀಡಲಾಗುತ್ತಿತ್ತು. ಕೆಲವೊಮ್ಮೆ ಆರಕ್ಷಕ ಅಥವಾ "ಪಾಡಿಕ್ಕಾವಲು" ವ್ಯವಸ್ಥೆಯ ಜವಾಬ್ದಾರಿಯನ್ನು ಗ್ರಾಮಸ್ಥರೇ ಗ್ರಾಮದ ಪ್ರಭಾವೀ ವ್ಯಕ್ತಿಗಳಿಗೆ ವಹಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಆಳರಸರು 'ಪಾಡಿಕ್ಕಾವಲ್' ಹಕ್ಕನ್ನು ವ್ಯಕ್ತಿಯೊಬ್ಬನಿಗೆ ಅವನು ಮಾಡಿದ ಸೇವೆಗೆ ಪ್ರತಿಫಲವಾಗಿ ನೀಡುತ್ತಿದ್ದ ವಿಷಯ ತುಳುನಾಡಿನ ಶಾಸನಗಳಲ್ಲಿ ಉಲ್ಲೇಖವಾಗಿದೆ. ಇವರ ಸೇವೆಗೆ ಜಮೀನನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು ಕರ್ತವ್ಯ ಲೋಪಗಳಿಗೆ ಉಗ್ರರೂಪದ ಶಿಕ್ಷೆ ಕಾದಿರುತ್ತಿತ್ತು. ವಿಜಯನಗರ ಸಾಮ್ರಾಜ್ಯ ಆಡಳಿತಾವಧಿಯಲ್ಲೂ ಈ ವ್ಯವಸ್ಥೆ ಪರಿಣಾಮಕಾರಿಯಾಗಿ ನಡೆಯುತ್ತಿತ್ತು.

### ಆಧುನಿಕ ಯುಗದಲ್ಲಿ ನಾಗರೀಕ ರಕ್ಷಣೆ

ಕೆಳದಿ ಅರಸರ ಕಾಲದಲ್ಲಿ ಸ್ಥಳೀಯ ಪಾಳೇಗಾರರೇ ನಾಗರೀಕ ರಕ್ಷಣೆ ಹೊಣೆ ಹೊತ್ತಿದ್ದರು. ಇದೇ ವ್ಯವಸ್ಥೆ ಹೈದರ್ ಮತ್ತು ಟಿಪ್ಪು ಹಾಗೂ ಮೈಸೂರರಸರ ಆಡಳಿತದ ಕಾಲದಲ್ಲೂ ಮುಂದುವರೆಯಿತು. ಭಾರತಕ್ಕೆ ಬ್ರಿಟಿಷರ ಆಗಮನದೊಂದಿಗೆ ಆಧುನಿಕ ಪೋಲೀಸು ವ್ಯವಸ್ಥೆ ರೂಪಗೊಂಡಿತು. ಬಂಗಾಳದಲ್ಲಿ ಅಸ್ತಿತ್ವದಲ್ಲಿದ್ದ ಪೋಲೀಸ್ ವ್ಯವಸ್ಥೆಯನ್ನು ಮದ್ರಾಸ್ ಪ್ರೆಸಿಡೆನ್ಸಿಯ ಪ್ರಾಂತ್ಯಗಳಿಗೆ ವಿಸ್ತರಿಸಲಾಯಿತು. ಅದರಂತೆ ಉಡುಪಿಯೂ ಸೇರಿದ್ದ ಅಂದಿನ ಕೆನರಾ ಪ್ರದೇಶದ ಮೇಲೆ ಪ್ರತಿ ಜಿಲ್ಲೆಯನ್ನು ೨೦ ಚದರ ಮೈಲಿಯ ವಿಭಾಗಗಳನ್ನಾಗಿಸಿ ಅಂತಹ ಪ್ರತಿ ವಿಭಾಗಕ್ಕೆ ದಾರೋಗನೆಂಬ ಅಧಿಕಾರಿ ಹಾಗೂ ಆತನ ಸಹಾಯಕ್ಕೆ ಒಬ್ಬ ಠಾಣಾದಾರನನ್ನು ನಿಯೋಜಿಸಲಾಯಿತು. ಜಿಲ್ಲಾಧಿಕಾರಿಯ ಅಧೀನದಲ್ಲಿ ೩೫ ರಿಂದ ೫೦ ಮಂದಿ ಸಶಸ್ತ್ರ ಪೋಲೀಸರು ಕೆಲಸ ಮಾಡುತ್ತಿದ್ದು ಗ್ರಾಮಮಟ್ಟದ ರಕ್ಷಣಾ ವ್ಯವಸ್ಥೆಯನ್ನು ಸಮರ್ಪಕವಾಗಿ ನಿಭಾಯಿಸಲಾಗುತ್ತಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟರು ಪೋಲಿಸ್ ಇಲಾಖಾ ಸಿಬ್ಬಂದಿಯ ನೇಮಕ ಮತ್ತಿತರ ಸೇವಾ ವಿಷಯಗಳನ್ನು ನಿರ್ವಹಿಸುತ್ತಿದ್ದರು ಹಾಗೂ ಅಪರಾಧಿಗಳಿಗೆ ಪೋಲಿಸ್ ಅಧಿಕಾರಿಗಳು ನೀಡಿದ ಸಲಹೆ ಮೇರೆಗೆ ಶಿಕ್ಷೆ ವಿಧಿಸುತ್ತಿದ್ದರು. ೧೮೦೮ರಲ್ಲಿ ಜಿಲ್ಲಾಧಿಕಾರಿಗಿದ್ದ ಪೋಲೀಸ್ ಇಲಾಖಾ ಜವಾಬ್ದಾರಿಯನ್ನು ಜಿಲ್ಲಾ ನ್ಯಾಯಾಧೀಶರಿಗೆ ವರ್ಗಾಯಿಸಲಾಯಿತು. ನಂತರ ಕಾನೂನು ಸುವ್ಯವಸ್ಥೆಯ ನಿರ್ವಹಣೆಗೆ ಸೂಕ್ತ ನಿಯಮಾವಳಿಗಳನ್ನು ೧೮೧೨ರಲ್ಲಿ ಜಾರಿಗೆ ತರಲಾಯಿತು.

ಮದ್ರಾಸ್ ಪ್ರೆಸಿಡೆನ್ಸಿಯ ನಿರ್ದೇಶಕರ ಮಂಡಳಿಯು ೧೮೧೪ರಲ್ಲಿ ದಾರೋಗ ಪದ್ಧತಿಯು ಅಸಮರ್ಪಕವೆಂದು ಪ್ರತಿಪಾದಿಸಿತು. ಸ್ಥಳೀಯವಾಗಿ ಶಾಂತಿ ಕಾಪಾಡಲು ಗ್ರಾಮ ಪೋಲೀಸ್ ವ್ಯವಸ್ಥೆ ಉತ್ತಮವೆಂದು ಅಭಿಪ್ರಾಯಪಟ್ಟಿತು. ಗ್ರಾಮ ಮಟ್ಟದ ಪೊಲೀಸ್ ವ್ಯವಸ್ಥೆ ಬಲಗೊಳಿಸಲು ಪೊಲೀಸ್ ಇಲಾಖೆಯ ಜವಾಬ್ದಾರಿಯನ್ನು ಮ್ಯಾಜಿಸ್ಟ್ರೇಟರಿಂದ ಹಿಂಪಡೆದು ಜಿಲ್ಲಾಧಿಕಾರಿಗೆ ವಹಿಸುವ ಬಗ್ಗೆ ಶಿಫಾರಸ್ಸು ಮಾಡಲಾಯಿತು. ಇದರೊಂದಿಗೆ ವಿಶೇಷ ಆಯೋಗದ ಮುಖ್ಯಸ್ಥನಾಗಿದ್ದ ಮನ್ರೊ ವರದಿಯನ್ವಯ ಜಿಲ್ಲಾ ಪೊಲೀಸ್ ಮುಖ್ಯಸ್ಥರ ಕಛೇರಿಯನ್ನು ಜಿಲ್ಲಾ ನ್ಯಾಯಾಧೀಶ ಕಛೇರಿಯಿಂದ ಬೇರ್ಪಡಿಸಿ ಜಿಲ್ಲಾಧಿಕಾರಿ ಕಛೇರಿಯೊಂದಿಗೆ ಒಂದುಗೂಡಿಸಲಾಯಿತು. ದಾರೋಗ ಹುದ್ದೆಯು ರದ್ದಾಯಿತು. ೧೮೧೬ರಲ್ಲಿ ಪೊಲೀಸ್ ಪಡೆಯನ್ನು ಗ್ರಾಮದಲ್ಲಿ ಪಟೇಲರ, ತಾಲ್ಲೂಕಿನಲ್ಲಿ ತಹಸೀಲ್ದಾರರ, ಮತ್ತು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯ ಉಸ್ತುವಾರಿಗೆ ವಹಿಸಲಾಯ್ತು. ಈ ಪದ್ಧತಿ ಕೆನರಾ ಪ್ರದೇಶದಲ್ಲಿ ೧೯ನೇ ಶತಮಾನದ ೫೦ರ ದಶಕದವರೆಗೆ ಚಾಲ್ತಿಯಲ್ಲಿತ್ತು. ಆದರೆ ಈ ವ್ಯವಸ್ಥೆಯು ಭ್ರಷ್ಟತೆ, ಹಿಂಸೆ ಮತ್ತು ಶೋಷಣೆಗಳಿಂದ ತುಂಬಿತ್ತು.

ಮದ್ರಾಸು ಸರ್ಕಾರವು ೧೮೫೪ರಲ್ಲಿ ಕಂದಾಯ, ನ್ಯಾಯಾಂಗ ಮತ್ತು ಪೊಲೀಸರಿಂದ ಸ್ಥಳೀಯರಿಗಾಗುತ್ತಿದ್ದ ಶೋಷಣೆ ಬಗ್ಗೆ ನಿಜ ಸ್ಥಿತಿ ಅರಿಯಲು ಒಂದು ವಿಚಾರಣಾ ಆಯೋಗವನ್ನು ರಚಿಸಿತು. ಈ ಆಯೋಗಕ್ಕೆ ಇ.ಎಫ್. ಎಲಿಯಟ್, ಹೆಚ್. ಸ್ಟ್ರೋಕ್ಸ್ ಮತ್ತು ಜಾನ್ ಬ್ರೂಸ್ ನಾರ್ಟನ್‌ರವರು ಸದಸ್ಯರಾಗಿದ್ದರು. ಈ ಆಯೋಗವು ೧೮೫೫ರಲ್ಲಿ ತನ್ನ ವರದಿ ನೀಡಿತು. ಪೊಲೀಸ್ ಮತ್ತು ಕಂದಾಯ ಇಲಾಖೆಗಳಲ್ಲಿ ಭ್ರಷ್ಟತೆ ವ್ಯಾಪಕವಾಗಿದ್ದು, ಹಲವಾರು ಪ್ರಕರಣಗಳಲ್ಲಿ ವಿಶೇಷವಾಗಿ ಕಂದಾಯ ಪ್ರಕರಣಗಳಲ್ಲಿ ಹಿಂಸೆಯು ವ್ಯಾಪಕವಾಗಿದ್ದ ಬಗ್ಗೆ ವರದಿಯಲ್ಲಿ ಹೇಳಲಾಗಿತ್ತು ಹಾಗೂ ವ್ಯವಸ್ಥೆಯನ್ನು ಉತ್ತಮಪಡಿಸಲು ಸೂಕ್ತ ಸಲಹೆಗಳನ್ನು ನೀಡಲಾಗಿತ್ತು.

ಸದರಿ ಆಯೋಗದ ಸಲಹೆಗಳಂತೆ ೧೮೫೯ರಲ್ಲಿ ಜಿಲ್ಲೆಯ ಕಂದಾಯ ಇಲಾಖೆಯಿಂದ ಪೊಲೀಸ್ ಇಲಾಖೆಯನ್ನು ಬೇರ್ಪಡಿಸಿ ಸ್ವತಂತ್ರ ಇಲಾಖೆಯನ್ನಾಗಿಸಲಾಯಿತು. ಪ್ರಾರಂಭದಲ್ಲಿ ಇಲಾಖಾ ಮುಖ್ಯಸ್ಥರ ಹುದ್ದೆಗೆ ಯೂರೋಪಿಯನ್ ಅಧಿಕಾರಿಗಳೇ ನೇಮಕಗೊಳ್ಳುತ್ತಿದ್ದರು. ಜಿಲ್ಲಾ ಪೊಲೀಸ್ ಅಧೀಕ್ಷಕರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಸೂಕ್ತ ಪ್ರಮಾಣದ ಪೋಲೀಸ್ ಪಡೆಯು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವಂತಾಯ್ತು. ೧೮೬೦ರಲ್ಲಿ ಭಾರತೀಯ ದಂಡಸಂಹಿತೆ ರಚಿಸಲ್ಪಟ್ಟು, ೧೮೬೨ ರಿಂದ ಅದು ಜಾರಿಗೊಳಿಸಲ್ಪಟ್ಟಿತು. ಈ ಮುಂಚೆ ಅಪರಾಧ ತನಿಖೆಗಳಲ್ಲಿ ಪೊಲೀಸರು ಅಪರಾಧಿಗಳಿಗೆ ತೀವ್ರತರದ ದೈಹಿಕ ಹಿಂಸೆ ನೀಡುತ್ತಿದ್ದರು. ಕೈಕಾಲು ಕತ್ತರಿಸುವುದು, ಕಣ್ಣು ಕೀಳಿಸುವುದು, ಚಾಟಿ ಏಟು ನೀಡುವುದು, ಬರೆ ಹಾಕುವುದು ಮುಂತಾದ ಬರ್ಬರ ವಿಧಾನ ಬಳಸಿ ತನಿಖೆ ಮಾಡುತ್ತಿದ್ದರು. ಅಪರಾಧ ತಡೆಗೆ ಇಂತಹ ಶಿಕ್ಷೆಗಳು ಪರಿಣಾಮಕಾರಿಯೆಂಬ ನಂಬಿಕೆ ಬೆಳೆದಿತ್ತು. ಭಾರತೀಯ ದಂಡ ಸಂಹಿತೆಯು ೧೮೬೨ರಲ್ಲಿ ಜಾರಿಯಾಗುವುದರೊಂದಿಗೆ ಶಿಕ್ಷೆಯ ರೂಪದಲ್ಲಿ ಮಹತ್ತರ ಬದಲಾವಣೆಗಳಾದವು. ಅನಾಗರೀಕ ಹಾಗೂ ಹಿಂಸಾತ್ಮಕ ಶಿಕ್ಷೆಗಳನ್ನು ರದ್ದುಪಡಿಸಲಾಯ್ತು ಹಾಗೂ ಐದು ರೀತಿಯ ಶಿಕ್ಷೆಗಳನ್ನು ಮಾತ್ರ ಅನುಮೋದಿಸಲಾಗಿದೆ. ಅವುಗಳೆಂದರೆ, ಗಲ್ಲು, ಗಡೀಪಾರು, ಕಾರಾಗೃಹವಾಸ, ಆಸ್ತಿ ಮುಟ್ಟುಗೋಲು ಹಾಗೂ ಜುಲ್ಮಾನೆಗಳು.

೨೦ನೇ ಶತಮಾನದ ಆದಿಭಾಗದಲ್ಲಿ ಪ್ರತಿ ಆರು ಚದರ ಮೈಲಿಗಳಿಗೆ ಪ್ರತಿ ೧೫೫೮ ಜನರಿಗೆ ಒಬ್ಬ ನಿಯತ ಪೊಲೀಸು ಮತ್ತು ೧೬೧೨ ಜನರಿಗೆ ಒಬ್ಬ ಗ್ರಾಮ ಪೋಲಿಸರಿರುವ ವ್ಯವಸ್ಥೆ ಮದ್ರಾಸ್ ಪ್ರೆಸಿಡೆನ್ಸಿಯ ಎಲ್ಲ ಪ್ರಾಂತಗಳಲ್ಲಿದ್ದಿತೆಂದು ೧೯೦೮ರ ಇಂಪೀರಿಯಲ್ ಗ್ಯಾಸೆಟಿಯರ್ ಹೇಳಿದೆ. ಪೊಲೀಸು ಇನ್ಸ್‌ಪೆಕ್ಟರ್ ಜನರಲ್ ಇಲಾಖಾ ಮುಖ್ಯಸ್ಥರಾಗಿದ್ದರು. ಸಹಾಯಕ ಸೂಪರಿಂಟೆಂಡರು ಅವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇನ್ಸ್‌ಪೆಕ್ಟರ್‌ಗಳು, ಸಬ್ ಇನ್ಸ್‌ಪೆಕ್ಟರ್, ಹೆಡ್ ಕಾನ್ಸ್‌ಟೇಬಲ್ ಮತ್ತು ಗ್ರಾಮೀಣ ಪೋಲೀಸರು ಇವರ ಸಿಬ್ಬಂದಿ ವರ್ಗದಲ್ಲಿದ್ದರು.

ಆಗ ದಕ್ಷಿಣ ಕನ್ನಡ ಜಿಲ್ಲೆ ಪೊಲೀಸ್ ಇಲಾಖೆಗೆ ಸೂಪರಿಂಟೆಂಡೆಂಟರು ಮುಖ್ಯಸ್ಥರಾಗಿದ್ದು ಮಂಗಳೂರಿನಲ್ಲಿ ಕೇಂದ್ರ ಕಛೇರಿಯಿತ್ತು. ೧೦ ಮಂದಿ ಇನ್ಸ್‌ಪೆಕ್ಟರ್‌ಗಳು ಮತ್ತು ೫೫೮ ಪೊಲೀಸರಿದ್ದು ಜಿಲ್ಲೆಯಲ್ಲಿ ೫೦ ಪೊಲೀಸ್ ಠಾಣೆಗಳಿದ್ದವು. ಮಂಗಳೂರಿನ ಬಾಸೆಲ್ ಮಿಷನ್ ನೇಯ್ಗೆ ಕಾರ್ಖಾನೆಯಲ್ಲಿದ್ದ ಜಾನ್‌ಹಾಲ್‌ರ ಎಂಬ ಬ್ರಿಟೀಷ್ ಇಂಜಿನಿಯರನು ರೂಪಿಸಿದ ಖಾಕಿ ಬಣ್ಣವೇ ಮುಂದೆ ಪೊಲೀಸರ ಹಾಗೂ ಇತರ ಕೆಲ ನಿರ್ದಿಷ್ಟ ನೌಕರರಿಗೆ ಬಹು ಜನಪ್ರಿಯ ಸಮವಸ್ತ್ರವಾಗಿದೆ. ೧೯೯೭ರಲ್ಲಿ ಉಡುಪಿ ಜಿಲ್ಲೆಯು ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರ್ಪಟ್ಟು ಹೊಸ ಜಿಲ್ಲೆಯಲಾಗಿ ಕಾರ್ಯಾರಂಭ ಮಾಡಿತು. ಆಗಸ್ಟ್ ೧೯೯೭ರಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿ ಪ್ರಾರಂಭಿಸಲ್ಪಟ್ಟಿತು. ೨೦೦೬ ಮಾರ್ಚ್ ಅಂತ್ಯದಲ್ಲಿ ಜಿಲ್ಲೆಯಲ್ಲಿ ಉಡುಪಿ ಹಾಗೂ ಕಾರ್ಕಳ ಉಪವಿಭಾಗಗಳಿವೆ. ಮೂರು ತಾಲೂಕುಗಳಲ್ಲಿ ಅಸ್ತಿತ್ವದಲ್ಲಿದ್ದ ಇಲಾಖೆಯ ಠಾಣೆಗಳ ವಿವರ ಕೆಳಗಿನ ಕೋಷ್ಟಕದಲ್ಲಿದೆ.

| ಕ್ರ. ಸಂ. | ಪೊಲೀಸ್ ವೃತ್ತ | ಕ್ರ. ಸಂ. | ಪೊಲೀಸ್ ಠಾಣೆ |
|---|---|---|---|
| | **ಉಡುಪಿ ಉಪ ವಿಭಾಗ** | | |
| ೧) | ಉಡುಪಿ | ೧) | ಉಡುಪಿ ನಗರ |
| | | ೨) | ಉಡುಪಿ ಸಂಚಾರ |
| | | ೩) | ಮಲ್ಪೆ |
| ೨) | ಮಣಿಪಾಲ | ೧) | ಮಣಿಪಾಲ |
| | | ೨) | ಶಿರ್ವಾ |
| | | ೩) | ಪಡುಬಿದ್ರಿ |
| | | ೪) | ಕಾಪು |
| ೩) | ಬ್ರಹ್ಮಾವರ | ೧) | ಬ್ರಹ್ಮಾವರ |
| | | ೨) | ಕೋಟ |
| | | ೩) | ಹಿರಿಯಡ್ಕ |
| ೪) | ಕುಂದಾಪುರ | ೧) | ಕುಂದಾಪುರ |
| | | ೨) | ಶಂಕರ ನಾರಾಯಣ |
| | | ೩) | ಗಂಗೊಳ್ಳಿ |
| | | ೪) | ಕುಂದಾಪುರ ಮಹಿಳಾ ಠಾಣೆ |
| ೫) | ಬೈಂದೂರು | ೧) | ಬೈಂದೂರು |
| | | ೨) | ಕೊಲ್ಲೂರು |
| | **ಕಾರ್ಕಳ ಉಪ ವಿಭಾಗ** | | |
| ೧) | ಕಾರ್ಕಳ ವೃತ್ತ | | ಕಾರ್ಕಳ ನಗರ |
| | | | ಕಾರ್ಕಳ ಗ್ರಾಮಾಂತರ |
| | | | ಹೆಬ್ರಿ |

ಜಿಲ್ಲೆಯಲ್ಲಿ ಎರಡು ಔಟ್‌ಪೋಸ್ಟ್‌ಗಳಿವೆ. ಅವು ಮಣಿಪಾಲದ ಕೊಂಕಣ ರೈಲ್ವೆ ಮತ್ತು ಕಟಪಾಡಿಯಲ್ಲಿದ್ದು, ಒಬ್ಬ ಪೊಲೀಸ್ ಉಪ ನಿರೀಕ್ಷಕ, ಒಬ್ಬ ಮುಖ್ಯ ಪೇದೆ ಹಾಗೂ ಐದು ಮಂದಿ ಪೇದೆಗಳು ಕಾರ್ಯನಿರ್ವಹಿಸುತ್ತಾರೆ. ಪ್ರತಿ ಉಪವಿಭಾಗವು ಪೊಲೀಸ್ ಉಪ ಅಧೀಕ್ಷಕರ ಉಸ್ತುವಾರಿಯಲ್ಲಿದೆ. ವೃತ್ತ ನಿರೀಕ್ಷಕರು ವೃತ್ತಗಳಲ್ಲಿ ಉಸ್ತುವಾರಿ ವಹಿಸುತ್ತಾರೆ ಹಾಗೂ ಪ್ರತಿ ಠಾಣೆಯಲ್ಲೂ ಉಪನಿರೀಕ್ಷಕರು, ಸಹಾಯಕ ಉಪ ನಿರೀಕ್ಷಕರು, ಮುಖ್ಯ ಪೇದೆ ಹಾಗೂ ಇತರ ಪೇದೆಗಳು ಸಿಬ್ಬಂದಿ ವರ್ಗದಲ್ಲಿರುತ್ತಾರೆ. ೨೦೦೬ ಮಾರ್ಚ್‌ನಲ್ಲಿ ಇಲಾಖೆಯಲ್ಲಿದ್ದ ಒಟ್ಟು ಸಿಬ್ಬಂದಿ ಸಂಖ್ಯೆ ೧೧೦೪.

## ಜಿಲ್ಲಾ ಸಶಸ್ತ್ರ ಮೀಸಲು ಪಡೆ

ಜಿಲ್ಲಾ ಪೊಲೀಸ್ ಅಧೀಕ್ಷಕರ ಉಸ್ತುವಾರಿಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಾರ್ಯನಿರ್ವಹಿಸುತ್ತದೆ. ಇದರ ಮುಖ್ಯ ಕಾರ್ಯವೆಂದರೆ ಅನಿರೀಕ್ಷಿತವಾಗಿ ಉಂಟಾಗುವ ಗಲಭೆ, ಮುಷ್ಕರ, ಮೆರವಣಿಗೆ ಹಾಗೂ

ಚುನಾವಣೆಗಳ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಬಂದೋಬಸ್ತು ಕಾರ್ಯನಿರ್ವಹಿಸುವುದಾಗಿದೆ. ಜಿಲ್ಲೆಯ ಮುಖ್ಯ ಅಧಿಕಾರಿಗಳ ಆರ್ಡರ್ಲಿ ಕರ್ತವ್ಯ, ಮುಖ್ಯ ಕಛೇರಿಗಳ ಪಹರೆ, ಗಣ್ಯವ್ಯಕ್ತಿಗಳಿಗೆ ಬೆಂಗಾವಲು, ಪೊಲೀಸ್ ಬ್ಯಾಂಡ್, ಕೈದಿಗಳನ್ನು ನ್ಯಾಯಾಲಯ, ಬಂದೀಖಾನೆಗಳಿಗೆ ರವಾನೆ ಮುಂತಾದವು ಈ ಪಡೆಯ ಇನ್ನಿತರ ಕೆಲಸಗಳಾಗಿವೆ. ಈ ಪಡೆಯಲ್ಲಿ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಮುಖ್ಯಸ್ಥರಾಗಿದ್ದು ಉಪನಿರೀಕ್ಷಕರು, ಮುಖ್ಯ ಪೇದೆ, ಪೇದೆ ಹಾಗೂ ಇನ್ನಿತರ ಸಿಬ್ಬಂದಿಗಳಿರುತ್ತಾರೆ. ವಾಹನ ವಿಭಾಗ, ಜಿಲ್ಲಾ ಶಸ್ತ್ರಾಗಾರ ಮತ್ತು ಶ್ವಾನದಳಗಳು ಈ ಪಡೆಯಲ್ಲಿರುತ್ತವೆ.

## ಜಿಲ್ಲಾ ಶ್ವಾನದಳ

ಅಪರಾಧ ತನಿಖೆಯಲ್ಲಿ ಮತ್ತು ಅಪರಾಧಿಗಳ ಸುಳಿವು ಪತ್ತೆ ಮಾಡುವಲ್ಲಿ ಜಿಲ್ಲೆಯ ಪೊಲೀಸ್ ಶ್ವಾನದಳದ ಪಾತ್ರ ಮಹತ್ವದ್ದಾಗಿದೆ. ಶ್ವಾನಗಳು ವಾಸನೆ ಆಧಾರದ ಮೇಲೆ ಅಪರಾಧಿಗಳ ಪತ್ತೆ ಮಾಡುವ ವಿಶಿಷ್ಟ ಕೌಶಲ್ಯ ಪಡೆದಿವೆ. ಈ ನಿಟ್ಟಿನಲ್ಲಿ ಶ್ವಾನಗಳಿಗೆ ತರಬೇತಿ ನೀಡಲಾಗುತ್ತದೆ. ತರಬೇತಿ ಹೊಂದಿದ ಶ್ವಾನಗಳನ್ನು ಬಾಂಬ್ ಹಾಗೂ ಇತರ ಸ್ಫೋಟಕ ವಸ್ತುಗಳನ್ನು ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚಲು ಬಳಸಲಾಗುತ್ತದೆ. ಉಡುಪಿ ಜಿಲ್ಲೆಯಲ್ಲಿ ೧೯೯೯ ರಿಂದ ಶ್ವಾನದಳ ಕಾರ್ಯಾರಂಭ ಮಾಡಿದೆ. ಒಬ್ಬ ಮುಖ್ಯ ಪೇದೆ, ಇಬ್ಬರು ಪೇದೆಗಳು ಶ್ವಾನದಳದ ಉಸ್ತುವಾರಿ ನೋಡಿಕೊಳ್ಳುತ್ತಾರೆ ಹಾಗೂ ಪ್ರಸ್ತುತ ಸೀಮಾ, ಬ್ಲಾಕಿ ಮತ್ತು ಬ್ರುಟೋ ಎಂಬ ಮೂರು ಶ್ವಾನಗಳು ದಳದಲ್ಲಿವೆ.

**ಶ್ವಾನದಳವು ೨೦೦೬ ರವರೆಗೆ ಪತ್ತೆಹಚ್ಚಿರುವ ಪ್ರಕರಣಗಳ ವಿವರ**

| ಕ್ರ. ಸಂ. | ವರ್ಷ | ಸ್ಫೋಟಕ ಪ್ರಕರಣ | ಅಪರಾಧ ಪ್ರಕರಣ |
|---|---|---|---|
| ೧) | ೧೯೯೮–೯೯ | ೧೦ | – |
| ೨) | ೧೯೯೯–೨೦೦೦ | ೧೨ | – |
| ೩) | ೨೦೦೦–೨೦೦೧ | ೧೨ | ೦೧ |
| ೪) | ೨೦೦೧–೨೦೦೨ | ೧೦ | ೨೨ |
| ೫) | ೨೦೦೨–೨೦೦೩ | ೦೮ | ೧೭ |
| ೬) | ೨೦೦೩–೨೦೦೪ | ೩೮ | ೪೫ |
| ೭) | ೨೦೦೪–೨೦೦೫ | ೧೨ | ೮೩ |
| ೮) | ೨೦೦೫–೨೦೦೬ | ೦೯ | ೪೫ |
| | ಒಟ್ಟು | ೧೧೧ | ೨೧೩ |

ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಒಟ್ಟು ೮೬ ವಾಹನಗಳಿವೆ. ೨೦೦೫–೦೬ನೇ ಸಾಲಿಗೆ ಇಲಾಖಾ ಸಿಬ್ಬಂದಿ ವೇತನ ಮತ್ತು ಕಛೇರಿ ನಿರ್ವಹಣೆ ಹಾಗೂ ಇತರ ವೆಚ್ಚಗಳಿಗೆ ರೂ.೮,೫೯, ೩೩,೬೯೫–೦೦ ಗಳನ್ನು ಖರ್ಚು ಮಾಡಲಾಗಿದೆ.

## ಪೊಲೀಸ್ ಕಲ್ಯಾಣ ನಿಧಿ

ಜಿಲ್ಲಾ ಪೊಲೀಸ್ ಸಿಬ್ಬಂದಿಗಳ ಕಲ್ಯಾಣಕ್ಕಾಗಿ ಪೊಲೀಸ್ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆ. ಇಲಾಖಾ ಸಿಬ್ಬಂದಿ/ಅಧಿಕಾರಿಗಳ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯವನ್ನು ಈ ಕೆಳಕಂಡಂತೆ ಮಾಡಲಾಗುತ್ತದೆ. ಒಂದರಿಂದ ಏಳನೇ ತರಗತಿಯವರೆಗೆ ರೂ. ೨೦೦.೦೦ ಎಂಟರಿಂದ ಹತ್ತನೇ ತರಗತಿಯವರೆಗೆ ರೂ.೩೦೦.೦೦, ಪಿಯುಸಿ ತರಗತಿಗೆ ರೂ. ೪೦೦–೦೦, ಪದವಿ ತರಗತಿಗೆ ರೂ. ೫೦೦–೦೦, ಸ್ನಾತಕೋತ್ತರ ಪದವಿಗಳಿಗೆ ರೂ. ೧೦೦೦–೦೦, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ತರಗತಿಗಳಿಗೆ ಪ್ರಥಮ ವರ್ಷ ಕ್ರಮವಾಗಿ ರೂ. ೫೦೦೦–೦೦ ಮತ್ತು ರೂ. ೧೦,೦೦೦–೦೦ ನಂತರ ವರ್ಷಂಪ್ರತಿ ರೂ. ೧೦೦೦–೦೦ ನೀಡಲಾಗುತ್ತದೆ.

ಜಿಲ್ಲೆಯ ಎಲ್ಲಾ ಸಿಬ್ಬಂದಿಗಳಿಂದ ಮಾಸಿಕ ವಂತಿಗೆಯನ್ನು ಪಡೆದು ನಿಧಿಗೆ ಜಮಾವಣೆ ಮಾಡಲಾಗುತ್ತದೆ. ಸಿಬ್ಬಂದಿ ವೈದ್ಯಕೀಯ ವೆಚ್ಚಕ್ಕಾಗಿ ವಾರ್ಷಿಕ ಗರಿಷ್ಟ ರೂ. ೫೦೦೦ವನ್ನು ಮಂಜೂರು ಮಾಡಲಾಗುತ್ತದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ಪೋಲೀಸ್ ವರಿಷ್ಠಾಧಿಕಾರಿಯಾಗಿ ಕರ್ನಲ್ ಹೆಲ್‌ಕಿನ್ಸ್‌ರವರು ೧೮೬೦ರಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ೧೯೧೧ರಲ್ಲಿ ಶ್ರೀ ಎ. ಸುಬ್ಬರಾವ್‌ರವರು ಜಿಲ್ಲೆಯಲ್ಲಿ ಆ ಹುದ್ದೆ ಅಲಂಕರಿಸಿದ ಪ್ರಥಮ ಭಾರತೀಯ ಅಧಿಕಾರಿ ಎಂಬ ಗರಿಮೆ ಪಡೆದರು. ಶ್ರೀ ಎಂ. ಸಿಂಗಾರವೇಲು ಇವರು ಸ್ವಾತಂತ್ರ್ಯಾನಂತರದ ಪ್ರಥಮ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಯಾದರು. ಉಡುಪಿ ಜಿಲ್ಲೆ ವಿಭಜನೆಯ ನಿಕಟಪೂರ್ವದಲ್ಲಿ ಶ್ರೀ ಎನ್.ಎಸ್. ಮೇಘರಿಕ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದರು. ಹೊಸ ಜಿಲ್ಲೆ ರಚನೆಯಾದ ನಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಪೊಲೀಸ್ ವರಿಷ್ಠಾಧಿಕಾರಿಗಳ ವಿವರ ಕೆಳಗಿನಂತಿದೆ.

| ಕ್ರ. ಸಂ. | ಹೆಸರು ಶ್ರೀಮತಿ / ಶ್ರೀಯುತ | ಅವಧಿ | |
|---|---|---|---|
| | | **ಇಂದ** | **ವರೆಗೆ** |
| ೧) | **ಸವಿತಾ ಹಂದೆ** ಐ.ಪಿ.ಎಸ್. | ೨೫-೦೮-೧೯೯೭ | ೦೩-೦೭-೧೯೯೮ |
| ೨) | **ಎಂ.ಎ. ಸಲೀಂ** ಐ.ಪಿ.ಎಸ್. | ೦೪-೦೭-೧೯೯೮ | ೧೩-೦೬-೨೦೦೦ |
| ೩) | **ಅಮೃತ ಪಾಲ್** ಐ.ಪಿ.ಎಸ್. | ೧೬-೦೬-೨೦೦೦ | ೨೫-೦೭-೨೦೦೩ |
| ೪) | **ಎಸ್. ಮುರುಗನ್** ಐ.ಪಿ.ಎಸ್. | ೨೫-೦೭-೨೦೦೩ | ೧೦-೦೫-೨೦೦೬ |
| ೫) | **ಡಾ॥ ಎ. ಸುಬ್ರಹ್ಮಣ್ಯೇಶ್ವರ ರಾವ್** ಐ.ಪಿ.ಎಸ್. | ೨೯-೦೫-೨೦೦೬ | ೦೮-೧೦-೨೦೦೭ |
| ೬) | **ದೇವಜ್ಯೋತಿ ರೇ** ಐ.ಪಿ.ಎಸ್. | ೦೯-೧೧-೨೦೦೮ | ೧೪-೦೭-೨೦೦೮ |
| ೭) | **ಪ್ರವೀಣ್ ಮಧುಕರ್ ಪವಾರ್** ಐ.ಪಿ.ಎಸ್. | ೦೪-೦೯-೨೦೦೮ | ಈವರೆಗೆ |

## ಸರ್ಕಾರದ ಗೌರವ ಪಡೆದ ಸಿಬ್ಬಂದಿ ವಿವರ

೧೯೯೮ ರಿಂದ ೨೦೦೬ ಮಾರ್ಚ್‌ವರೆಗೆ ಒಬ್ಬ ಪೊಲೀಸ್ ವರಿಷ್ಠಾಧಿಕಾರಿ ಒಬ್ಬ ಪೊಲೀಸ್ ಉಪ ಅಧೀಕ್ಷಕರು ರಾಷ್ಟ್ರಪತಿಗಳ ಶೌರ್ಯ ಪ್ರಶಸ್ತಿ ಪಡೆದಿರುತ್ತಾರೆ. ಮುಖ್ಯಮಂತ್ರಿಗಳ ಪದಕ ಪಡೆದ ೧೨ ಮಂದಿ ಅಧಿಕಾರಗಳಲ್ಲಿ ಇಬ್ಬರು ಇನ್ಸ್‌ಪೆಕ್ಟರ್‌ಗಳು, ಒಬ್ಬ ಸಹಾಯಕ ಸಬ್‌ಇನ್ಸ್‌ಪೆಕ್ಟರ್, ನಾಲ್ಕು ಮಂದಿ ಮುಖ್ಯ ಪೇದೆಗಳು ಮತ್ತು ಐದು ಮಂದಿ ಪೇದೆಗಳಿರುತ್ತಾರೆ.

ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ನಡೆದ ಪ್ರಮುಖ ಘಟನೆಗಳ ವಿವರ ಇಂತಿದೆ.

- ೨೦೦೪ನೇ ಇಸವಿಯಲ್ಲಿ ಉಡುಪಿಯಿಂದ ಮಂಗಳೂರಿಗೆ ರಸ್ತೆಮಾರ್ಗವಾಗಿ ಅಧಿಕ ಭಾರ ಹೊತ್ತ ಲಾರಿಗಳ ಮೂಲಕ ಮ್ಯಾಂಗನೀಸ್ ಅದಿರು ಸಾಗಣೆಯಾಗುತ್ತಿದ್ದ ಬಗ್ಗೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಇದು ಕ್ರಮೇಣ ಹಿಂಸಾತ್ಮಕ ಪ್ರತಿಭಟನೆ ರೂಪ ಪಡೆಯುವತ್ತ ಸಾಗಿದಾಗ ಜಿಲ್ಲಾಡಳಿತ ಮಧ್ಯಪ್ರವೇಶಿಸಿ ಜನಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಲಾರಿ ಮಾಲೀಕರ ಸಂಘದ ಜಂಟಿ ಸಭೆ ನಡೆಸಿ ವಾತಾವರಣ ತಿಳಿಗೊಳಿಸಿತು.
- ಶ್ರೀ ಕ್ಷೇತ್ರ ಉಡುಪಿ ಶ್ರೀ ಕೃಷ್ಣ ಮಠದಲ್ಲಿದ್ದ ಪುರಾತನ ಗೋಪುರವನ್ನು ನೂತನವಾಗಿ ನಿರ್ಮಿಸುವ ಯೋಜನೆಯಂತೆ ಹಳೆ ಗೋಪುರವನ್ನು ದಿನಾಂಕ ೧೭-೧೨-೨೦೦೪ ರಂದು ಕೆಡವಲಾಯಿತು. ಗೋಪುರ ಕೆಡವಿದ್ದನ್ನು ವಿರೋಧಿಸಿ ವಿವಿಧ ಸಂಘಟನೆಗಳು ದೇವಾಲಯಕ್ಕೆ ಮುತ್ತಿಗೆ ಹಾಕಲು ಹವಣಿಸಿದಾಗ ನ್ಯಾಯಾಲಯ ಆದೇಶ ಉಲ್ಲಂಘನೆ ಆರೋಪದ ಮೇಲೆ ಸುಮಾರು ೪೦೦ ಮಂದಿಯನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು. ೧೧-೫-೨೦೦೫ರಂದು ನೂತನ ಗೋಪುರವು ಉದ್ಘಾಟನೆಗೊಂಡ ನಂತರ ಯಾವುದೇ ಅಹಿತರಕರ ಘಟನೆ ನಡೆಯದೆ ಪರಿಸ್ಥಿತಿ ಶಾಂತವಾಗಿದೆ.

- ಉಡುಪಿ ತಾಲೂಕಿನ ಪಡುಬಿದ್ರಿ ಠಾಣೆ ವ್ಯಾಪ್ತಿಯ ನಂದಿಕೂರು ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸುವುದರ ವಿರುದ್ಧ ಸ್ಥಳೀಯರು ತೀವ್ರ ಪ್ರತಿಭಟನೆ ಹಮ್ಮಿಕೊಂಡಿರುತ್ತಾರೆ. ಸದರಿ ವಿದ್ಯುತ್ ಕಂಪನಿಯು ಸ್ಥಾಪನಾ ಕಾರ್ಯವನ್ನು ಹೈದರಾಬಾದು ಮೂಲದ ನಾಗಾರ್ಜುನ ಕಂಪನಿಗೆ ವಹಿಸಲಾಗಿದೆ. ಈ ಉದ್ದೇಶಕ್ಕಾಗಿ ಸ್ಥಳೀಯ ಪ್ರದೇಶದ ಸಮೀಕ್ಷೆ ಕಾರ್ಯವನ್ನು ದಿನಾಂಕ ೧೦-೮-೨೦೦೫ ರಂದು ಪ್ರಾರಂಭಿಸಿದಾಗ ಕಾಪು ಶಾಸಕರು ಹಾಗೂ ಇನ್ನಿತರ ನಾಯಕರು ಸಾರ್ವಜನಿಕರೊಡಗೂಡಿ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿದ್ದರು. ಕಲಂ ೧೪೪ ಸಿ.ಆರ್.ಪಿ.ಸಿ.ಯಂತೆ ವಿಧಿಸಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ಎಲ್ಲರನ್ನೂ ಬಂಧಿಸಿ ಬಿಡುಗಡೆಗೊಳಿಸಲಾಯಿತು. ಪೊಲೀಸು ಮೂಲಗಳ ಪ್ರಕಾರ ಈ ವಿವಾದವಿನ್ನೂ ಜೀವಂತವಾಗಿದ್ದು ತೀವ್ರಗೊಳ್ಳುವ ಸಂಭವವಿದೆ.
- ಬ್ರಹ್ಮಾವರದ ಬೈಕಾಡಿ ಗ್ರಾಮದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನಾನಾಕಾರಣಗಳಿಂದ ಚಟುವಟಿಕೆ ಸ್ಥಗಿತಗೊಂಡಿದೆ. ಕಾರ್ಖಾನೆಯಲ್ಲಿ ಕೆಲಸ ಮಾಡುವ ಸುಮಾರು ೨೦೦ ಕಾರ್ಮಿಕರಿಗೆ ವೇತನ ಪಾವತಿಯಾಗದೆ ಅವರ ಜೀವನ ದುಸ್ತರವಾಗಿದೆ. ೨೦೦೪ರ ಆಗಸ್ಟ್‌ನಲ್ಲಿ ಕಾರ್ಮಿಕರಿಗೆ ವೇತನಕ್ಕಾಗಿ ಒತ್ತಾಯಿಸಲು ಶ್ರೀ ರಿಚರ್ಡ್ ಮೆಸ್ಕರ್‌ನೀಸ್ ರವರ ಮುಂದಾಳ್ತನದಲ್ಲಿ ಮುಷ್ಕರ ಹೂಡಲಾಗಿತ್ತು. ಜಿಲ್ಲಾಡಳಿತವು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದರೂ ನೌಕರರಿಗೆ ಯಾವುದೇ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿರುವುದಿಲ್ಲ.
- ೨೦೦೩ರ ಸೆಪ್ಟೆಂಬರ್‌ನಲ್ಲಿ ಹಿರಿಯಡ್ಕದ ಅಬ್ದುಲ್ ಖಾದರ್ ಎಂಬುವವರು ಓಡಿಸುವ ಬಸ್ಸಿನ ಸಮಯದ ಬಗ್ಗೆ ಆ ಪ್ರದೇಶದ ಆಟೋ ಚಾಲಕರು ತಕರಾರು ಹೊಂದಿದ್ದು ಸದರಿ ಬಸ್ಸಿನಲ್ಲಿ ಮಾರಕಾಸ್ತ್ರ ಸಂಗ್ರಹವಿದ್ದು ಪೊಲೀಸರು ಅದನ್ನು ವಶಪಡಿಸಿಕೊಳ್ಳಬೇಕೆಂದು ಮನವಿ ಸಲ್ಲಿಸಲಾಗಿತ್ತು. ಬಸ್ಸನ್ನು ಪರಿಶೀಲಿಸಿ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ವಿಫಲಗೊಂಡಿದ್ದಾರೆಂದು ಆರೋಪಿಸಿ ೩೦೦-೪೦೦ ಜನರು ಗುಂಪಾಗಿ ಹಿರಿಯಡ್ಕ ಪೊಲೀಸ್ ಠಾಣೆಯ ಮೇಲೆ ಕಲ್ಲು ತೂರಾಟ ನಡೆಸಿದರು. ಪರಿಸ್ಥಿತಿ ನಿಯಂತ್ರಣಕ್ಕಾಗಿ ಹೆಚ್ಚುವರಿ ಪೊಲೀಸು ಪಡೆಯನ್ನು ಕರೆತಂದಿದ್ದ ಪೋಲೀಸ್ ವಾಹನಕ್ಕೆ ಬೆಂಕಿ ಹಚ್ಚಲಾಯಿತು. ಕ್ರಮೇಣ ಪರಿಸ್ಥಿತಿ ಶಾಂತಗೊಂಡಿತು. ಗಲಭೆಗೆ ಸಂಬಂಧಿಸಿದಂತೆ ೨೩ ಜನರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

## ಜಿಲ್ಲೆಯಲ್ಲಿ ನಡೆದಿರುವ ಕೋಮು ಗಲಭೆ ಪ್ರಕರಣಗಳು

೧) ದಿನಾಂಕ ೬-೩-೨೦೦೧ ರಂದು ಮಲ್ಪೆಯ ಹೂಡೆ ಮಾರ್ಕೆಟ್ ಪ್ರದೇಶದಲ್ಲಿ ಬಕ್ರಿದ್ ಹಬ್ಬದಲ್ಲಿ ಮಾಂಸ ವಿತರಣೆಗಾಗಿ ವಧೆ ಮಾಡಲು ತಂದು ಕಟ್ಟಲಾಗಿದ್ದ ಹಸುಗಳನ್ನು ರಕ್ಷಿಸಿದ ಪ್ರಕರಣದಲ್ಲಿ ವ್ಯಕ್ತಿ ಒಬ್ಬನ ಮೇಲೆ ಅನ್ಯ ಕೋಮಿನ ಹಲವರು ಹಲ್ಲೆ ನಡೆಸಿದರು. ಈ ಪ್ರಯುಕ್ತ ಮಲ್ಪೆ ಪ್ರದೇಶದಲ್ಲಿ ಕೋಮು ಗಲಭೆ ನಡೆದು ಒಂಭತ್ತು ಪ್ರಕರಣಗಳು ಮಲ್ಪೆ ಠಾಣೆಯಲ್ಲಿ ದಾಖಲಾಗಿರುತ್ತವೆ.

೨) ದಿನಾಂಕ ೨೪-೨-೨೦೦೨ ರಂದು ಗಂಗೊಳ್ಳಿ ಠಾಣೆ ಸರಹದ್ದಿನಲ್ಲಿ ಜುಮ್ಮಾ ಮಸೀದಿ ಹತ್ತಿರ ಮಾಂಸ ವಿತರಣೆಗಾಗಿ ವಧೆ ಮಾಡಲು ಕಟ್ಟಿದ್ದ ಕೋಣಗಳ ಬಗ್ಗೆ ತಕರಾರು ಉದ್ಭವಿಸಿ ಎರಡು ಕೋಮುಗಳ ಮಧ್ಯೆ ಗಲಭೆ ಸಂಭವಿಸಿತು. ಗಲಭೆಯಲ್ಲಿ ಆರು ಜನರಿಗೆ ಸಾಮಾನ್ಯ ಗಾಯಗಳಾಗಿದ್ದು ಮೂರು ಕೋಮು ಗಲಭೆ ಪ್ರಕರಣಗಳನ್ನು ಠಾಣೆಯಲ್ಲಿ ದಾಖಲಿಸಲಾಯಿತು.

೩) ದಿನಾಂಕ ೩೧-೩-೨೦೦೨ ರಂದು ಕುಂದಾಪುರ ಠಾಣಾ ವ್ಯಾಪ್ತಿಯಲ್ಲಿ ಅಸೋಡು ಗ್ರಾಮದ ನಂದಿಕೇಶ್ವರ ದೇವಸ್ಥಾನದ ಜಾತ್ರೆಯಲ್ಲಿ ಒಂದು ಕೋಮಿನ ಹೆಣ್ಣುಮಕ್ಕಳಿಗೆ ಮತ್ತೊಂದು ಕೋಮಿನ ಯುವಕರು ಸೂಜಿಗಳಿಂದ ಚುಚ್ಚಿದರು. ಸದ್ರಿ ಸೂಜಿಗಳಲ್ಲಿ ಏಡ್ಸ್ ರೋಗದ

ವೈರಸ್‌ಗಳಿದ್ದವು ಎಂಬ ವದಂತಿಯೊಂದಿಗೆ ಸುತ್ತಮುತ್ತಲ ಪ್ರದೇಶಗಳಲ್ಲಿ ತೀವ್ರ ರೀತಿಯ ಕೋಮು ಗಲಭೆ ನಡೆಯಿತು. ಎರಡೂ ಕೋಮಿನ ಜನರ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಯಿತು. ಹಲವು ಮಂದಿ ಗಲಭೆಯಲ್ಲಿ ಗಾಯಗೊಂಡರು. ಪೋಲೀಸರು ಸಕಾಲಿಕ ಕ್ರಮ ಕೈಗೊಂಡು ಪರಿಸ್ಥಿತಿಯನ್ನು ನಿಯಂತ್ರಿಸಿದರು. ಈ ಸಂಬಂಧ ೮೨ ಪ್ರಕರಣಗಳು ಕುಂದಾಪುರ ಠಾಣೆಯಲ್ಲಿ ದಾಖಲಾಗಿವೆ.

೪) ದಿನಾಂಕ ೧೫–೫–೨೦೦೩ ರಂದು ಗಂಗೊಳ್ಳಿ ಠಾಣಾ ಸರಹದ್ದಿನ ಗಂಗೊಳ್ಳಿ ಪೇಟೆಯಲ್ಲಿ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಕಟ್ಟಲಾದ ಬ್ಯಾನರ್ ವಿಚಾರದಲ್ಲಿ ಕೋಮುಗಲಭೆ ಪ್ರಾರಂಭವಾಯಿತು. ಈ ಗಲಭೆಯಲ್ಲಿ ಆರು ಜನರಿಗೆ ಸಣ್ಣಪುಟ್ಟ ಗಾಯಗಳಾದವು. ಸದ್ರಿ ವಿಷಯವಾಗಿ ೧೯ ಪ್ರಕರಣಗಳು ಗಂಗೊಳ್ಳಿ ಠಾಣೆಯಲ್ಲಿ ದಾಖಲಾಗಿರುತ್ತವೆ.

೫) ದಿನಾಂಕ ೩–೩–೨೦೦೪ ರಂದು ಕುಂದಾಪುರ ಠಾಣಾ ಸರಹದ್ದಿನ ಕಡ್ಲೂರು ಪೇಟೆಯಲ್ಲಿ ಭಜರಂಗದಳದ ಘಟಕದ ಉದ್ಘಾಟನೆಗೆ ಹಾಕಲಾದ ಬ್ಯಾನರ್ ವಿಚಾರದಲ್ಲಿ ಎರಡು ಕೋಮುಗಳ ನಡುವೆ ಗಲಭೆ ಪ್ರಾರಂಭವಾಯಿತು. ಘಟನೆಯಲ್ಲಿ ಎಂಟು ಜನರು ಗಾಯಗೊಂಡರು. ಈ ಬಗ್ಗೆ ನಾಲ್ಕು ಪ್ರಕರಣಗಳು ಕುಂದಾಪುರ ಠಾಣೆಯಲ್ಲಿ ದಾಖಲಾಗಿರುತ್ತವೆ.

೬) ದಿನಾಂಕ ೧೩–೩–೨೦೦೫ ರಂದು ಉಡುಪಿ ಠಾಣೆ ವ್ಯಾಪ್ತಿಯ ಆದಿ ಉಡುಪಿ ಎಂಬಲ್ಲಿ ಹಸುಗಳನ್ನು ಸಾಗಾಣಿಕೆಯ ವಿಷಯವಾಗಿ ಒಂದು ಕೋಮಿನ ಇಬ್ಬರನ್ನು ಇನ್ನೊಂದು ಕೋಮಿನವರು ನಗ್ನಗೊಳಿಸಿ ಹಲ್ಲೆ ನಡೆಸಿರುತ್ತಾರೆ. ಈ ಘಟನೆಯ ಬಗ್ಗೆ ಉಡುಪಿ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಮತ್ತು ಈ ಸಂಬಂಧ ೨೬–೩–೨೦೦೫ ರಂದು ಉಡುಪಿಯಲ್ಲಿ ನಡೆಸಲಾದ ಗೋಹತ್ಯಾ ನಿಷೇಧ ಅನುಷ್ಠಾನ ಯಾತ್ರೆಯಲ್ಲಿ ಜಿಲ್ಲಾ ಹಿತರಕ್ಷಣಾ ವೇದಿಕೆಯ ಕಾರ್ಯಕರ್ತರು ಇನ್ನೊಂದು ಕೋಮಿನವರ ಅಂಗಡಿಗಳಿಗೆ ಹಾನಿ ಮಾಡಿದರು. ಈ ಬಗ್ಗೆ ನಗರದ ಠಾಣೆಯಲ್ಲಿ ೨೪ ಪ್ರಕರಣಗಳು ದಾಖಲಾಗಿರುತ್ತವೆ.

**ಕೋಷ್ಟಕ ೧೦.೧ : ಜಿಲ್ಲೆಯಲ್ಲಿ ವರದಿಯಾದ ಕೊಲೆ, ಸುಲಿಗೆ ದರೋಡೆ ಇನ್ನಿತರ ಅಪರಾಧದ ಪ್ರಕರಣಗಳ ವಿವರ**

| ವರ್ಷಗಳು | ಕೊಲೆ | ದರೋಡೆ | ಸುಲಿಗೆ | ಕಳ್ಳತನ | ಇತರ ಕಳವು ಪ್ರಕರಣಗಳು | ಅತ್ಯಾಚಾರ ಪ್ರಕರಣಗಳು |
|---|---|---|---|---|---|---|
| ೧೯೯೫ | ೧೭ | ೫ | ೧೩ | ೨೩೮ | ೯೨ | ೮ |
| ೧೯೯೬ | ೦೭ | ೫ | ೯ | ೧೫೩ | ೭೯ | ೪ |
| ೧೯೯೭ | ೧೧ | ೧ | ೧೨ | ೧೭೩ | ೭೬ | ೫ |
| ೧೯೯೮ | ೧೬ | ೧ | ೪ | ೧೬೧ | ೮೨ | ೨ |
| ೧೯೯೯ | ೧೪ | ೪ | ೮ | ೧೪೭ | ೬೪ | ೫ |
| ೨೦೦೦ | ೧೨ | ೨ | ೪ | ೧೧೮ | ೭೭ | ೧೧ |
| ೨೦೦೧ | ೧೬ | ೧ | ೧೨ | ೧೧೫ | ೯೨ | ೨ |
| ೨೦೦೨ | ೧೫ | ೨ | ೧೧ | ೧೪೩ | ೬೪ | ೧ |
| ೨೦೦೩ | ೧೩ | ೩ | ೯ | ೧೩೬ | ೮೧ | ೫ |
| ೨೦೦೪ | ೧೬ | ೯ | ೧೨ | ೧೨೨ | ೯೨ | – |
| ೨೦೦೫ | ೨೬ | ೬ | ೧೫ | ೧೩೬ | ೮೮ | ೭ |

**ನಕ್ಸಲ್ ನಿಗ್ರಹ ದಳ :** ಜಿಲ್ಲೆಯಲ್ಲಿ ಇತ್ತೀಚೆಗೆ ನಕ್ಸಲೀಯ ಚಟುವಟಿಕೆ ಚುರುಕುಗೊಳ್ಳುತ್ತಿದೆ. ಜಿಲ್ಲೆಯ ಘಟ್ಟ ಪ್ರದೇಶದ ಅರಣ್ಯಗಳಲ್ಲಿ ನೆಲೆಯಾಗಿದ್ದುಕೊಂಡು ಸಮಾಜ ವ್ಯವಸ್ಥೆಯ ವಿರುದ್ಧ ಹೋರಾಡಲು ಕಟಿಬದ್ಧರಾಗಿರುವ ನಕ್ಸಲರಿಂದ ಸಾರ್ವಜನಿಕರಲ್ಲಿ ಭಯಭೀತಿಗಳುಂಟಾಗಿವೆ. ನಕ್ಸಲರನ್ನು ನಿಗ್ರಹಿಸಿ ಶಾಂತಿ ಕಾಪಾಡಲು ಜಿಲ್ಲೆಯಲ್ಲಿ ನಕ್ಸಲ್ ನಿಗ್ರಹ ದಳ ಕಾರ್ಯಾಚರಣೆ ಮಾಡುತ್ತಿದೆ. ಅರಣ್ಯ ಹಾಗೂ ಇನ್ನಿತರ ನಕ್ಸಲ್ ಅಡಗುದಾಣಗಳಿಗೆ ದಾಳಿಮಾಡಿ ನಕ್ಸಲರನ್ನು ಬಂಧಿಸುವ ಅಥವಾ ಕೊಲ್ಲುವ ಕಾರ್ಯಾಚರಣೆ ಮಾಡುತ್ತಿದೆ. ಅರಣ್ಯ ಹಾಗೂ ಇನ್ನಿತರ ನಕ್ಸಲ್ ಅಡಗುದಾಣಗಳಿಗೆ ದಾಳಿಮಾಡಿ ನಕ್ಸಲರನ್ನು ಬಂಧಿಸುವ ಅಥವಾ ಕೊಲ್ಲುವ ಕಾರ್ಯಾಚರಣೆ ನಡೆಯುತ್ತಿದೆ. ಈ ದಳದಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್, ಒಬ್ಬ ಮುಖ್ಯಪೇದೆ, ನಾಲ್ಕು ಜನ ಪೇದೆಗಳಿದ್ದು ಜೀಪು ಮತ್ತು ನಿಸ್ತಂತು ಸಂಪರ್ಕ ವ್ಯವಸ್ಥೆ ಕಲ್ಪಿಸಲಾಗಿದೆ. ಈ ದಳವು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯ ನಿರ್ದೇಶನದಲ್ಲಿ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತದೆ.

**ಕೋಷ್ಟಕ ೧೦.೨ : ಪತ್ತೆ ಹಚ್ಚಲಾದ ಪ್ರಕರಣಗಳಲ್ಲಿ ಅಪರಾಧಗಳ ವಿವರ**

| ವರ್ಷಗಳು | ಲೈಂಗಿಕ ಕಲಹ | ಲಾಭ | ಕೌಟುಂಬಿಕ ಕಲಹ | ವೈರತ್ವ | ಇತರೆ ಅಪರಾಧ |
|---|---|---|---|---|---|
| ೧೯೯೫ | ೨ | ೩೨೧ | ೫ | ೬ | ೯ |
| ೧೯೯೬ | ೧ | ೨೨೬ | – | ೧ | ೮ |
| ೧೯೯೭ | – | ೨೪೩ | ೧ | ೩ | ೧೩ |
| ೧೯೯೮ | ೧ | ೨೩೧ | ೩ | ೨ | ೭ |
| ೧೯೯೯ | ೧ | ೨೦೪ | – | ೬ | ೧೦ |
| ೨೦೦೦ | ೧ | ೧೮೬ | – | ೨ | ೧೭ |
| ೨೦೦೧ | – | ೨೧೧ | ೨ | ೩ | ೧೧ |
| ೨೦೦೨ | – | ೨೦೭ | ೧ | ೭ | ೮ |
| ೨೦೦೩ | ೨ | ೨೧೨ | ೨ | ೪ | ೧೨ |
| ೨೦೦೪ | – | ೨೨೧ | ೩ | ೫ | ೫ |
| ೨೦೦೫ | ೨ | ೨೩೨ | ೫ | ೫ | ೧೩ |

**ಕೋಷ್ಟಕ ೧೦.೩ : ಕಳುವಾದ ಸ್ವತ್ತುಗಳನ್ನು ಪತ್ತೆ ಮಾಡಿ ಹಿಂತಿರುಗಿಸಿದ ವಿವರ**

| ವರ್ಷಗಳು | ಸ್ವತ್ತಿನ ಮೌಲ್ಯ | | |
|---|---|---|---|
| | ಕಳುವಾದ | ಹಿಂದೆ ಪಡೆದ | ಶೇಕಡಾವಾರು |
| ೧೯೯೫ | ೫೮೧೯೩೫೫ | ೧೨೮೬೬೪೬ | ೨೨.೧೦ |
| ೧೯೯೬ | ೭೪೧೦೦೬೯ | ೧೫೮೬೫೯೮ | ೨೧.೪೧ |
| ೧೯೯೭ | ೪೮೪೨೬೪೧ | ೨೪೫೭೨೩೧ | ೫೦೩೭೪ |
| ೧೯೯೮ | ೪೫೮೫೪೮೨ | ೩೬೨೪೬೫೦ | ೭೯.೦೪ |
| ೧೯೯೯ | ೬೨೮೪೫೨೬ | ೪೪೫೬೭೨೦ | ೭೦.೯೧ |
| ೨೦೦೦ | ೭೫೬೯೯೧೯ | ೬೬೨೮೩೭೦ | ೮೭.೫೬ |
| ೨೦೦೧ | ೪೭೧೭೯೯೦೭ | ೩೦೦೯೦೭೪ | ೬.೩೭ |
| ೨೦೦೨ | ೮೯೫೭೫೮೮ | ೧೩೦೧೭೯೩ | ೧೪.೫೩ |
| ೨೦೦೩ | ೭೬೯೧೨೩೪ | ೧೫೭೨೩೨೩ | ೨೦.೪೪ |
| ೨೦೦೪ | ೯೯೬೨೫೫೭ | ೨೬೩೯೯೯೪ | ೨೬.೪೯ |
| ೨೦೦೫ | ೧೭೩೯೩೨೭೭ | ೫೨೬೭೨೩೦ | ೩೦.೨೮ |

### ಕೋಷ್ಟಕ ೧೦.೪ : ವಿಚಾರಣೆ ಮೂಲಕ ಅಪರಾಧ ಸಾಬೀತಾದ ಪ್ರಕರಣಗಳ ವಿವರ

| ವರ್ಷಗಳು | ವರದಿಯಾದ ಪ್ರಕರಣಗಳು | ವಿಚಾರಣೆ ನಡೆಸಲಾದದ್ದು | ಸಾಬೀತಾದ ಪ್ರಕರಣಗಳು |
|---|---|---|---|
| ೧೯೯೫ | ೨೩೫೫ | ೧೯೦೪ | ೮೩೦ |
| ೧೯೯೬ | ೨೦೦೦ | ೧೬೫೮ | ೬೯೧ |
| ೧೯೯೭ | ೨೦೫೦ | ೧೬೦೮ | ೭೫೯ |
| ೧೯೯೮ | ೨೩೫೮ | ೧೬೫೬ | ೭೯೬ |
| ೧೯೯೯ | ೨೩೭೫ | ೧೮೧೩ | ೯೪೬ |
| ೨೦೦೦ | ೨೩೮೫ | ೧೭೯೨ | ೯೯೭ |
| ೨೦೦೧ | ೨೭೧೧ | ೨೧೫೭ | ೧೦೬೫ |
| ೨೦೦೨ | ೨೯೪೫ | ೨೩೬೫ | ೧೩೭೧ |
| ೨೦೦೩ | ೨೭೭೬ | ೨೨೩೨ | ೧೩೦೮ |
| ೨೦೦೪ | ೩೦೩೪ | ೨೩೫೫ | ೧೨೫೯ |
| ೨೦೦೫ | ೨೯೨೧ | ೨೩೦೨ | ೯೮೬ |

### ಕೋಷ್ಟಕ ೧೦.೫ : ಆಕಸ್ಮಿಕ ಸಾವುಗಳು ಮತ್ತು ಸಾವಿಗೆ ಕಾರಣಗಳ ವಿವರ

| ವರ್ಷಗಳು | ಆತ್ಮಹತ್ಯೆ | ನೀರಿನಲ್ಲಿ ಮುಳುಗಿ ಸಾವು | ಹಾವು ಕಡಿತ | ವಿದ್ಯುತ್ ಶಾಖ್ | ಸಿಡಿಲು ಬಡಿತ | ವಾಹನ ಅಪಘಾತ | ಎತ್ತರದಿಂದ ಬೀಳುವುದು | ಬೆಂಕಿ ಅಪಘಾತ | ಇತರ ಕಾರಣಗಳು |
|---|---|---|---|---|---|---|---|---|---|
| ೧೯೯೫ | ೨೬೬ | ೧೦೮ | ೩ | ೨ | – | ೧೩೫ | ೬ | ೧೪ | ೮೧ |
| ೧೯೯೬ | ೨೫೫ | ೧೦೦ | ೩ | ೨ | ೩ | ೧೪೦ | ೧೦ | ೨ | ೭೬ |
| ೧೯೯೭ | ೩೦೬ | ೯೯ | ೪ | ೩ | ೩ | ೧೩೭ | ೧೨ | ೧೩ | ೮೦ |
| ೧೯೯೮ | ೨೮೪ | ೯೫ | ೩ | ೮ | – | ೧೩೦ | ೧೦ | ೧೦ | ೮೯ |
| ೧೯೯೯ | ೩೨೩ | ೯೧ | – | ೪ | ೪ | ೧೬೪ | ೧೨ | ೧೮ | ೯೬ |
| ೨೦೦೦ | ೩೦೨ | ೧೦೭ | ೬ | ೧ | ೩ | ೧೨೮ | ೧೮ | ೨೨ | ೬೮ |
| ೨೦೦೧ | ೩೦೨ | ೯೬ | ೩ | ೭ | ೨ | ೧೩೬ | ೧೪ | ೧೮ | ೯೬ |
| ೨೦೦೨ | ೩೪೮ | ೮೮ | ೨ | ೬ | ೫ | ೧೩೭ | ೯ | ೧೪ | ೭೫ |
| ೨೦೦೩ | ೩೫೨ | ೧೦೨ | ೪ | ೬ | ೪ | ೧೨೮ | ೭ | ೧೦ | ೮೫ |
| ೨೦೦೪ | ೩೧೮ | ೧೦೨ | ೨ | ೮ | ೨ | ೧೬೩ | ೧೧ | ೧೦ | ೭೦ |
| ೨೦೦೫ | ೩೨೪ | ೬೯ | ೧ | ೬ | ೨ | ೧೬೨ | ೧೯ | ೧೧ | ೭೭ |

### ಕೋಷ್ಟಕ ೧೦.೬ : ವರದಿಯಾಗಿರುವ ಜೂಜು, ಸಟ್ಟಾ, ಕಳ್ಳಸಾಗಾಣಿಕೆ ಹಾಗೂ ಇನ್ನಿತರ ಪ್ರಕರಣಗಳ ವಿವರ

| ವರ್ಷಗಳು | ಸಟ್ಟಾ | ಜೂಜು | ಕಳ್ಳಭಟ್ಟಿ ಪ್ರಕರಣ | ಕಳ್ಳಸಾಗಣೆ ಪ್ರಕರಣ | ಇತರೆ |
|---|---|---|---|---|---|
| ೧೯೯೫ | ೧೬೬ | ೩೧ | ೩ | – | ೩೦ |
| ೧೯೯೬ | ೬೩ | ೨೪ | ೯ | – | ೨೪ |
| ೧೯೯೭ | ೧೪೮ | ೩೩ | ೧೨ | – | ೨೬ |
| ೧೯೯೮ | ೧೦೩ | ೪೯ | ೪೧ | ೪ | ೯೪ |
| ೧೯೯೯ | ೧೮೨ | ೪೮ | ೨೩ | ೨ | ೫೯ |
| ೨೦೦೦ | ೧೯೪ | ೫೭ | ೧೦ | ೩ | ೩೨ |
| ೨೦೦೧ | ೨೫೮ | ೬೬ | ೩೬ | ೪ | ೨೩ |
| ೨೦೦೨ | ೨೪೭ | ೭೩ | ೨೩ | ೨ | ೧೭ |
| ೨೦೦೩ | ೨೫೦ | ೩೭ | ೭ | ೩ | ೩ |
| ೨೦೦೪ | ೩೨೩ | ೫೭ | ೭ | ೧ | ೩ |
| ೨೦೦೫ | ೩೪೯ | ೭೧ | ೫ | – | ೧೪ |

## ಕೋಷ್ಟಕ ೧೦.೭ : ಫಿರ್ಯಾಧಿಗೆ ಬಂದು ಖುಲಾಸೆಯಾದ ಪ್ರಕರಣಗಳ ವಿವರ

| ವರ್ಷಗಳು | ನ್ಯಾಯಾಲಯದಲ್ಲಿ ಇತ್ಯರ್ಥವಾದ ಪ್ರಕರಣಗಳು | ಆರೋಪ ಸಾಬೀತಾದ ಪ್ರಕರಣಗಳು | ಖುಲಾಸೆ/ ಬಿಡುಗಡೆ ಪ್ರಕರಣಗಳು | ರಾಜಿಯಾದ ಪ್ರಕರಣಗಳು | ಆರೋಪ ಸಾಬೀತು ಶೇಕಡಾವಾರು | ಜಾಮೀನಿನ ಮೇಲೆ ಬಿಡುಗಡೆಯಾದ ಪ್ರಕರಣಗಳು |
|---|---|---|---|---|---|---|
| ೧೯೯೫ | ೧೧೯೩ | ೪೫೨ | ೬೩೫ | ೧೦೬ | ೩೭.೮೮ | ೧೯೫೩ |
| ೧೯೯೬ | ೧೪೭೧ | ೫೩೬ | ೭೮೪ | ೧೫೧ | ೩೬.೪೩ | ೧೮೭೧ |
| ೧೯೯೭ | ೧೨೧೧ | ೫೪೪ | ೫೩೬ | ೧೩೧ | ೪೪.೯೨ | ೧೮೩೩ |
| ೧೯೯೮ | ೧೨೯೦ | ೫೭೦ | ೫೯೨ | ೧೨೮ | ೪೪.೧೮ | ೧೮೨೫ |
| ೧೯೯೯ | ೧೩೭೪ | ೬೨೮ | ೬೧೪ | ೧೩೨ | ೪೫.೭೦ | ೧೮೨೧ |
| ೨೦೦೦ | ೧೪೩೯ | ೭೦೮ | ೬೧೧ | ೧೨೦ | ೪೯.೨೦ | ೨೨೩೪ |
| ೨೦೦೧ | ೧೫೪೩ | ೮೧೯ | ೬೧೫ | ೧೦೯ | ೫೩.೦೭ | ೨೫೬೨ |
| ೨೦೦೨ | ೧೭೭೬ | ೯೪೮ | ೬೬೧ | ೧೬೭ | ೫೩.೩೭ | ೨೬೮೧ |
| ೨೦೦೩ | ೧೪೩೪ | ೮೯೪ | ೪೭೦ | ೭೦ | ೬೨.೩೪ | ೨೪೩೫ |
| ೨೦೦೪ | ೧೩೭೩ | ೯೧೭ | ೩೭೪ | ೮೨ | ೬೬.೭೮ | ೨೫೨೪ |
| ೨೦೦೫ | ೧೩೯೦ | ೮೩೭ | ೪೮೫ | ೬೮ | ೬೦.೨೧ | ೨೫೩೩ |

## ಕೋಷ್ಟಕ ೧೦.೮ : ಜಿಲ್ಲೆಯ ಬೆರಳು ಮುದ್ರೆ ಘಟಕದಲ್ಲಿ ಪತ್ತೆಯಾದ ಪ್ರಕರಣಗಳ ವಿವರ

| ವರ್ಷಗಳು | ವರದಿಯಾದ ಪ್ರಕರಣಗಳು | ಬೆರಳು ಮುದ್ರೆ ಪರಿಶೀಲನೆ ಸಂಖ್ಯೆ | ಪತ್ತೆಯಾದ ಪ್ರಕರಣಗಳ ಸಂಖ್ಯೆ |
|---|---|---|---|
| ೧೯೯೮ | ೯೮ | ೯೮ | ೧ |
| ೧೯೯೯ | ೧೧೯ | ೧೧೯ | ೨ |
| ೨೦೦೦ | ೭೨ | ೭೨ | ೧ |
| ೨೦೦೧ | ೧೨೬ | ೧೨೬ | ೨ |
| ೨೦೦೨ | ೧೦೧ | ೧೦೧ | – |
| ೨೦೦೩ | ೬೩ | ೬೩ | – |
| ೨೦೦೪ | ೧೨೯ | ೧೨೯ | ೩ |
| ೨೦೦೫ | ೧೭೯ | ೧೭೯ | ೩ |

## ಕೋಷ್ಟಕ ೧೦.೯ : ವೇಶ್ಯಾವೃತ್ತಿ ನಿರ್ಮೂಲನ ಅಧಿನಿಯಮದಡಿ ದಾಖಲಾದ ಪ್ರಕರಣಗಳು

| ವರ್ಷಗಳು | ದಾಖಲಾದ ಪ್ರಕರಣಗಳ ಸಂಖ್ಯೆ | ಅಪರಾಧ ಸಾಬೀತಾದ ಸಂಖ್ಯೆ | ಖುಲಾಸೆಗೊಂಡವರ ಸಂಖ್ಯೆ | ವಿಚಾರಣೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|
| ೧೯೯೫ | ೦೪ | ೨ | ೧ | ೧ |
| ೧೯೯೬ | ೦೨ | ೧ | ೧ | – |
| ೧೯೯೭ | ೧೦ | ೪ | ೪ | ೨ |
| ೧೯೯೮ | ೧೦ | ೫ | – | ೫ |
| ೧೯೯೯ | ೪ | ೨ | ೧ | ೧ |
| ೨೦೦೦ | ೨ | ೨ | – | – |
| ೨೦೦೧ | ೧೦ | ೭ | ೩ | – |
| ೨೦೦೨ | ೭ | ೫ | – | ೨ |
| ೨೦೦೩ | ೧೮ | ೧೦ | ೪ | ೪ |
| ೨೦೦೪ | ೨ | ೧ | ೧ | – |
| ೨೦೦೫ | ೮ | ೧ | – | ೭ |

*ಮೂಲ: ಜಿಲ್ಲಾ ಪೋಲಿಸ್ ಇಲಾಖೆ, ಉಡುಪಿ*

**ಲೋಕಾಯುಕ್ತ ಪೋಲೀಸ್‌ದಳ**

ಜಿಲ್ಲೆಯಲ್ಲಿ ಲೋಕಾಯುಕ್ತ ಪೋಲೀಸ್ ವಿಭಾಗವು ೨೦೦೩ರಲ್ಲಿ ಪ್ರಾರಂಭವಾಗಿ ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ವಿಭಾಗದಲ್ಲಿ ಒಟ್ಟು ೧೧ ಮಂದಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ಸ್‌ಪೆಕ್ಟರ್–೧, ಮುಖ್ಯಪೇದೆ–೪, ಪೇದೆಗಳು–೪, ಟೈಪಿಸ್ಟ್–೧ ಮತ್ತು ದಲಾಯತ್–೧ ಇಲ್ಲಿರುವ ಸಿಬ್ಬಂದಿಯವರಾಗಿದ್ದಾರೆ. ೨೦೦೩ರಿಂದ ಈವರೆಗೆ ಒಟ್ಟು ಎರಡು ಮೊಕದ್ದಮೆಗಳನ್ನು ಹೂಡಲಾಗಿದ್ದು ಅವಿನ್ನೂ ತನಿಖೆಯ ಹಂತದಲ್ಲಿದೆ. ಪ್ರಕರಣಗಳ ವಿವರಗಳನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ.

ಮೊಕದ್ದಮೆ–೧ ವರದಿ ವರ್ಷ–೨೦೦೫, ದಿನಾಂಕ ೧೨–೭–೨೦೦೫ ಸಮಯ ೧೨.೩೦ ಗಂಟೆ ಕುಂದಾಪುರ ತಾ. ಮುದೂರು ಗ್ರಾಮದ ರಂಜಿತ ಎಂಬುವವರ ಜಮೀನಿನ ಒಂದು ಎಕ್ರೆ ಭಾಗದ ನಕ್ಷೆ ತಯಾರಿಸಲು ಮತ್ತು ಅಳತೆ ಮಾಡಲು ಭೂಮಾಪನ ಕಛೇರಿಯ ಸರ್ವೆ ಸೂಪರ್‌ವೈಸರ್ ಆದ ಧನಂಜಯ ಎಂಬುವವರು ೫೦೦ ರೂಪಾಯಿ ಲಂಚಕ್ಕಾಗಿ ಒತ್ತಾಯಿಸಿದ ಆರೋಪ ಹೊಂದಿದ್ದು, ತನಿಖೆ ಪ್ರಗತಿಯಲ್ಲಿದೆ. ಮೊಕ್ಕದ್ದಮೆ–೨, ವರದಿ ವರ್ಷ ೨೦೦೬ ದಿನಾಂಕ ೨೮–೩–೨೦೦೬ ಸಮಯ ಒಂಬತ್ತು ಗಂಟೆ.

ಕುಂದಾಪುರ ತಾ. ಬಳ್ಳೂರು ಗ್ರಾಮದ ನಾಗರಾಜಯ್ಯ ಎಂಬುವರ ಜಮೀನಿನ ದಾಖಲೆಯಲ್ಲಿ ಉಂಟಾಗಿರುವ ಲೋಪವನ್ನು ಸರಿಪಡಿಸಲು ಗ್ರಾಮಕರಣಿಕರಾದ ಮನಮೋಹನ್ ಎಂಬುವವರು ರೂ.೧೦೦೦–೦೦ ಲಂಚ ನೀಡಬೇಕೆಂದು ಒತ್ತಾಯಿಸಿ ಕೆಲಸವನ್ನು ಮಾಡದೆ ವಿಳಂಬ ಮಾಡಿ ತೊಂದರೆ ಕೊಡುತ್ತಿರುವ ಬಗ್ಗೆ ಮೊಕದ್ದಮೆ ದಾಖಲಾಗಿದ್ದು ತನಿಖೆ ನಡೆಯುತ್ತಿದೆ.

**ಮೋಟಾರು ವಾಹನ ತಪಾಸಣೆ**

ಜಿಲ್ಲಾ ಪೋಲೀಸ್ ಇಲಾಖೆಯ ಸಂಚಾರಿ ಪೋಲೀಸ್ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿಗಳು ಜಿಲ್ಲೆಯಲ್ಲಿ ವಾಹನ ದಟ್ಟಣೆ ಇರುವ ಪ್ರದೇಶ ಹಾಗೂ ಸಮಯದಲ್ಲಿ ಆಯಕಟ್ಟಿನ ಜಾಗಗಳಲ್ಲಿ ಮೋಟಾರು ವಾಹನಗಳ ಸಕಾಲಿಕ ತನಿಖೆ ಹಾಗೂ ತಪಾಸಣೆ ಕೈಗೊಳ್ಳುವ ಮೂಲಕ ಸಂಚಾರಿ ಸುವ್ಯವಸ್ಥೆ ಕಾಪಾಡಲಾಗಿದೆ. ಸಂಚಾರಿ ನಿಯಮಗಳ ಪಾಲನೆ, ವಾಹನಗಳನ್ನು ಸುಸ್ಥಿತಿಯಲ್ಲಿಡುವುದು, ರಸ್ತೆ ಬಳಕೆ, ಸಂಚಾರ ಸುರಕ್ಷತೆ ಮುಂತಾದ ಬಗ್ಗೆ ಸಾರ್ವಜನಿಕ ಅರಿವು ಮೂಡಿಸಲು ಜಿಲ್ಲೆಯ ಎಲ್ಲಾ ಠಾಣೆಗಳಲ್ಲೂ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಸಂಚಾರಿ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.ರಸ್ತೆ ಅಪಘಾತಗಳನ್ನು ತಪ್ಪಿಸಲು ವೇಗ ನಿಯಂತ್ರಣಕ್ಕಾಗಿ ರಸ್ತೆಗಳಲ್ಲಿ ಉಬ್ಬುಗಳನ್ನು ರಚಿಸಲಾಗುತ್ತದೆ. ಚಾಲಕರಿಗೆ ಪ್ರಥಮ ಚಿಕಿತ್ಸೆ ಬಗ್ಗೆ ತಿಳಿವಳಿಕೆ ಮೂಡಿಸುವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಬಳಕೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**ಬೆರಳೊತ್ತು ಘಟಕ**

ಜಿಲ್ಲೆಯ ಬೆರಳೊತ್ತು ಘಟಕವು ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಘಟಕವು ಜಿಲ್ಲಾ ಪೋಲೀಸ್ ಅಧೀಕ್ಷಕರ ಉಸ್ತುವಾರಿಯಲ್ಲಿದ್ದು ಕಳವು ಹಾಗೂ ಇನ್ನಿತರ ಅಪರಾಧ ಪ್ರಕರಣಗಳಲ್ಲಿ ಆರೋಪ ಪತ್ತೆಗಾಗಿ ಬೆರಳು ಮುದ್ರೆಗಳನ್ನು ಪಡೆದು ಸದ್ರಿ ಮುದ್ರೆಗಳನ್ನು ಸಂಗ್ರಹದಲ್ಲಿರುವ ಮುದ್ರೆಗಳೊಂದಿಗೆ ತಾಳೆ ಮಾಡುವ ಮೂಲಕ ಅಪರಾಧ ಪತ್ತೆ ಮಾಡಲಾಗುತ್ತದೆ.

**ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ**

ನಾಗರೀಕ ಹಕ್ಕು ರಕ್ಷಣಾ ಕಾಯ್ದೆ ೧೯೫೫ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಹಿತರಕ್ಷಣಾ ಕಾಯ್ದೆ ೧೯೮೯ ರಂತೆ ನಾಗರೀಕರ ಹಕ್ಕು ರಕ್ಷಣೆ ಹಾಗೂ ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ಕಾನೂನು ಕ್ರಮ ಜರುಗಿಸುವ ಅಧಿಕಾರ ಪಡೆದ ಈ ಸಂಸ್ಥೆಯು ೧೯೭೪ರಲ್ಲಿ ಕಾರ್ಯಾರಂಭ

ಮಾಡಿತು. ಪ್ರಾರಂಭದಲ್ಲಿ "ನಾಗರೀಕ ಹಕ್ಕು ರಕ್ಷಣಾ ಕೋಶ"ವಾಗಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯು ಪೋಲೀಸು ಉಪ ಮಹಾ ನಿರೀಕ್ಷಕ (DIG) ದರ್ಜೆ ಅಧಿಕಾರಿಯ ಉಸ್ತುವಾರಿಯಲ್ಲಿತ್ತು. ೧೯೮೦ರಲ್ಲಿ ಕೋಶವನ್ನು ಪುನಾರಚಿಸಲಾಯಿತು. ಬೆಂಗಳೂರು, ಬೆಳಗಾವಿ, ಮೈಸೂರು ಮತ್ತು ಗುಲ್ಬರ್ಗಾಗಳಲ್ಲಿ ಪ್ರಾಂತೀಯ ಕೋಶಗಳನ್ನು ರಚಿಸಲಾಯಿತು. ೧೯೮೮ ರಿಂದ ಪ್ರತಿ ಪ್ರಾಂತೀಯ ಕೋಶದ ಉಸ್ತುವಾರಿಯನ್ನು ನೋಡಲು ಪ್ರತ್ಯೇಕವಾಗಿ ಒಬ್ಬ ಐ.ಜಿ.ಪಿ. ದರ್ಜೆ ಅಧಿಕಾರಿಯನ್ನು ನೇಮಿಸಲಾಯಿತು. ಕೋಶವನ್ನು 'ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ' ಎಂದು ಪುನರ್ ನಾಮಕರಣಗೊಳಿಸಿ ಹೆಚ್ಚುವರಿ ಪೋಲೀಸು ಮಹಾನಿರ್ದೇಶಕ (ADGP) ದರ್ಜೆ ಅಧಿಕಾರಿಯನ್ನು ಇದರ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಮುಖ್ಯವಾಗಿ ದಲಿತರು ಹಾಗೂ ದುರ್ಬಲ ವರ್ಗದವರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ದೂರುಗಳನ್ನು ಸ್ವೀಕರಿಸಿ, ಪರಿಶೀಲಿಸಿ ಕಾನೂನಿನ ಪ್ರಕಾರ ಅವರಿಗೆ ಪರಿಹಾರ ಒದಗಿಸಲಾಗುತ್ತದೆ. ೨೦೦೧ ರಿಂದ ಈವರೆಗೆ ಉಡುಪಿ ಜಿಲ್ಲೆಯಲ್ಲಿ ದೌರ್ಜನ್ಯ ನಿರ್ಬಂಧ ಕಾಯಿದೆ ಅಡಿಯಲ್ಲಿ ದಾಖಲಾದ ಪ್ರಕರಣಗಳ ವಿವರ ಕೆಳಕಂಡಂತಿದೆ.

| ವರ್ಷಗಳು | ವರದಿ | ಪಿ.ಟಿ. | ಬಿ | ಇತರೆ ವಿಲೇವಾರಿ | ತನಿಖೆ | ಖುಲಾಸೆ | ಶಿಕ್ಷೆ |
|---|---|---|---|---|---|---|---|
| ೨೦೦೧ | ೧೫ | ೦೩ | ೦೩ | – | – | ೦೯ | – |
| ೨೦೦೨ | ೧೬ | ೦೫ | ೦೧ | ೦೧ | – | ೦೯ | – |
| ೨೦೦೩ | ೩೦ | ೦೦ | ೧೦ | – | – | ೧೦ | ೦೧ |
| ೨೦೦೪ | ೩೨ | ೨೩ | ೦೩ | – | – | ೦೫ | ೦೧ |
| ೨೦೦೫ | ೩೪ | ೨೭ | ೦೬ | – | – | ೦೧ | – |
| ೨೦೦೬ ಜೂನ್ ವರೆಗೆ | ೧೫ | ೦೮ | ೦೪ | – | ೦೩ | – | – |

*ಆಧಾರ: ನಾ.ಹ.ಜಾ.ನಿ., ಬೆಂಗಳೂರು*

## ಅಗ್ನಿಶಾಮಕ ಸೇವಾ ವಿಭಾಗ

ಸಾರ್ವಜನಿಕ ಆಸ್ತಿಪಾಸ್ತಿಗಳು ಹಾಗೂ ಜನರ ಪ್ರಾಣಗಳನ್ನು ಅಗ್ನಿ ಆಕಸ್ಮಿಕದಲ್ಲಿ ಕಾಪಾಡುವ ಗುರುತರ ಜವಾಬ್ದಾರಿಯನ್ನು ಅಗ್ನಿಶಾಮಕ ದಳ ಹೊಂದಿದೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ನಿಯಂತ್ರಣದಲ್ಲಿ ಎಲ್ಲಾ ಜಿಲ್ಲಾ ಘಟಕಗಳು ಕೆಲಸ ಮಾಡುತ್ತವೆ. ಉಡುಪಿ ಜಿಲ್ಲೆಯಲ್ಲಿ ಒಟ್ಟು ಮೂರು ಅಗ್ನಿ ಶಾಮಕ ಠಾಣೆಗಳು ಮತ್ತು ಅವುಗಳ ವಿವರ ಕೆಳಕಂಡಂತಿವೆ.

| ಕ್ರ.ಸಂ. | ಠಾಣೆ | ಸ್ಥಾಪನೆ ವರ್ಷ |
|---|---|---|
| ೧) | **ಅಗ್ನಿಶಾಮಕ ಠಾಣೆ ಅಜ್ಜರಕಾಡು, ಉಡುಪಿ** | ೧-೧-೧೯೪೬ |
| ೨) | **ಅಗ್ನಿಶಾಮಕ ಠಾಣೆಕೋಣೆ ಗ್ರಾಮ ಕುಂದಾಪುರ ತಾ.** | ೧-೧-೧೯೯೨ |
| ೩) | **ಅಗ್ನಿಶಾಮಕ ಠಾಣೆಕುಂಟಲ್ಪಾಡಿ ಕಾರ್ಕಳ ತಾ.** | ೧-೧-೧೯೯೪ |

## ಸಿಬ್ಬಂದಿ ವಿವರ (೩೧-೩-೨೦೦೬ ರಲ್ಲಿದ್ದಂತೆ)

ಜಿಲ್ಲೆಯ ಅಗ್ನಿಶಾಮಕ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿವರ್ಗದ ವಿವರ ಈ ರೀತಿ ಇದೆ. ಈ ಮೊದಲು ಪೊಲೀಸ್ ಇಲಾಖೆಯ ಅಗ್ನಿಶಾಮಕ ದಳದ ಉಸ್ತುವಾರಿ ನೋಡುತ್ತಿತ್ತು. ಪ್ರಸ್ತುತ ಇಲಾಖೆಯು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪೋಲೀಸು ಇಲಾಖೆಗೆ ಅಗ್ನಿಶಾಮಕ ದಳವು ಹಲವು ರೀತಿಯಲ್ಲಿ ನೆರವು ನೀಡುತ್ತಿರುವುದು. ಕೋಮುಗಲಭೆ, ಗಣ್ಯ ವ್ಯಕ್ತಿಗಳ ಆಗಮನ, ಸಭೆ ಸಮಾರಂಭಗಳು ಮುಂತಾದ ಸಂದರ್ಭದಲ್ಲಿ ಸಾರ್ವಜನಿಕ, ಹಾಗೂ ಖಾಸಗಿ ಆಸ್ತಿ ರಕ್ಷಿಸುವ ಮತ್ತು ಆಕಸ್ಮಿಕಗಳ ವಿರುದ್ಧ ಮುಂಜಾಗ್ರತೆ ವಹಿಸುವುದು, ನಿಲುಗಡೆ ಕರ್ತವ್ಯವನ್ನು ನಿರ್ವಹಿಸುವುದು ಮುಂತಾದ ಕಾರ್ಯನಿರ್ವಹಿಸುತ್ತದೆ.

| ಕ್ರ.ಸಂ. | ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| ೧ | ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು | ೧ | ೧ | – |
| ೨ | ಅಗ್ನಿಶಾಮಕ ಠಾಣಾಧಿಕಾರಿ | ೩ | – | ೦೩ |
| ೩ | ಸಹಾಯಕ ಅಗ್ನಿ ಶಾಮಕ ಅಧಿಕಾರಿ | ೩ | ೨ | ೦೧ |
| ೪ | ಪ್ರಮುಖ ಅಗ್ನಿಶಾಮಕರು | ೧೨ | ೧೨ | – |
| ೫ | ವಾಹನ ಚಾಲಕರು | ೧೫ | ೧೦ | ೦೫ |
| ೬ | ಅಗ್ನಿಶಾಮಕ ತಂತ್ರಜ್ಞರು | ೦೨ | – | ೦೨ |
| ೭ | ಅಗ್ನಿಶಾಮಕರು | ೫೮ | ೨೬ | ೩೨ |
| | ಒಟ್ಟು | ೯೪ | ೫೧ | ೪೩ |

ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ೧೯೯೯ರ ಜುಲೈನಲ್ಲಿ ಘಟಿಸಿದ ಆಕಸ್ಮಿಕದಲ್ಲಿ ಮೀನುಗಾರಿಕೆ ಬೋಟ್‌ಗಳಿಗೆ ಹೆಚ್ಚು ಹಾನಿಯಾಗದಂತೆ ತಡೆಯುವಲ್ಲಿ ಉಡುಪಿ ಅಗ್ನಿಶಾಮಕ ಠಾಣೆಯ ಸಿಬ್ಬಂದಿಗಳು ಮಹತ್ತರ ಪಾತ್ರವಹಿಸಿದ್ದರು. ಈ ಆಕಸ್ಮಿಕದ ವಿರುದ್ಧ ಕಾರ್ಯಾಚರಣೆಯಲ್ಲಿ ೧೨ ಆಧಿಕಾರಿಗಳು, ೬೮ ಮಂದಿ ಸಿಬ್ಬಂದಿಯೊಡನೆ ೧೭ ಅಗ್ನಿಶಾಮಕ ವಾಹನಗಳು ಹಾಗೂ ೧೦ ರೇಚಕ ಯಂತ್ರಗಳ ಸಹಾಯದಿಂದ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು. ಕಾರ್ಯಾಚರಣೆಯಲ್ಲಿ ಎಂಟು ಮಂದಿ ಸಿಬ್ಬಂದಿಗಳು ಗಾಯಗೊಂಡಿದ್ದರು. ಸತತ ೧೪ ಗಂಟೆಗಳ ಕಾರ್ಯಾಚರಣೆಯಿಂದ ಅಗ್ನಿಯನ್ನು ಶಮನಗೊಳಿಸಲಾಯಿತು ಹಾಗೂ ಸುಮಾರು ಏಳು ಕೋಟಿ ರೂ. ಮೌಲ್ಯದ ಆಸ್ತಿಯನ್ನು ರಕ್ಷಿಸಲಾಯಿತು. ಜಿಲ್ಲೆಯಲ್ಲಿ ೧೯೯೫ ರಿಂದ ೨೦೦೫ರವರೆಗಿನ ಅವಧಿಯಲ್ಲಿ ಅಗ್ನಿ ಆಕಸ್ಮಿಕದಲ್ಲಿ ಅಥವಾ ಇತರ ರೀತಿಯ ರಕ್ಷಣೆಗಾಗಿ ೧೪೩೪ ಕರೆಗಳನ್ನು ಸ್ವೀಕರಿಸಲಾಗಿದ್ದು ಆಕಸ್ಮಿಕಗಳಲ್ಲಿ ಸಿಲುಕಿದ್ದ ೯೮೧ ಜನರನ್ನು ಹಾಗೂ ೧೭೧ ಪ್ರಾಣಿಗಳನ್ನು ರಕ್ಷಿಸಲಾಗಿದೆ ಹಾಗೂ ಆಂಬ್ಯುಲೆನ್ಸ್‌ಗಾಗಿ ೫೮೪ ಕರೆಗಳು ಬಂದಿದ್ದು ಅದರಂತೆ ವಾಹನ ಸೌಲಭ್ಯ ಒದಗಿಸಲಾಗಿದೆ. ೨೦೫೦ ಅಗ್ನಿ ಆಕಸ್ಮಿಕ ಕರೆಗಳನ್ನು ಸ್ವೀಕರಿಸಿ ಸುಮಾರು ೭೪ ಕೋಟಿ ರೂ. ಮೌಲ್ಯದ ಆಸ್ತಿಪಾಸ್ತಿ ರಕ್ಷಿಸಲಾಗಿದೆ. ಅಗ್ನಿಶಾಮಕ ಮತ್ತು ತುರ್ತುಸೇವೆ ಇಲಾಖಾ ಸಿಬ್ಬಂದಿಯ ಕ್ಷೇಮ ನಿಧಿ ಇದ್ದು ಎಲ್ಲಾ ಸಿಬ್ಬಂದಿ ವರ್ಗದವರು ಸದ್ರಿ ನಿಧಿಗೆ ಮಾಸಿಕ ವಂತಿಗೆ ಪಾವತಿಸುತ್ತಾರೆ. ಈ ನಿಧಿಯಿಂದ ಸಿಬ್ಬಂದಿವರ್ಗದವರ ಮಕ್ಕಳ ವಿದ್ಯಾಭ್ಯಾಸ, ಮೃತಪಟ್ಟ ಸಂಬಂಧಿಕರ ಅಂತ್ಯ ಸಂಸ್ಕಾರ, ವೈದ್ಯಕೀಯ ವೆಚ್ಚ ಮುಂತಾದ ಬಾಬ್ತುಗಳಿಗೆ ಸಹಾಯಧನ ಮಂಜೂರು ಮಾಡಲಾಗುತ್ತದೆ. ೨೦೦೫ರವರೆಗೆ ಜಿಲ್ಲೆಯಲ್ಲಿ ೨೮ ಅಗ್ನಿಶಾಮಕ ಸಿಬ್ಬಂದಿಗಳಿಗೆ ೩೦,೭೫೦ ರೂ.ಗಳ ಸಹಾಯಧನ ನೀಡಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಅಗ್ನಿ ಆಕಸ್ಮಿಕಗಳ ಬಗ್ಗೆ ಮುಂಜಾಗ್ರತೆ ವಹಿಸುವಂತೆ ತಿಳಿವಳಿಕೆ ನೀಡುವುದಕ್ಕಾಗಿ ಸಾರ್ವಜನಿಕರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ೧೩೨ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನಡೆಸಲಾಗಿದ್ದು ಪ್ರತಿ ವರ್ಷ ಅಗ್ನಿಶಾಮಕ ದಿನಾಚರಣೆ ಅಂಗವಾಗಿ ಏಪ್ರಿಲ್ ೧೪ ರಿಂದ ೨೦ರವರೆಗೆ ರಕ್ಷಣಾ ಸಪ್ತಾಹವನ್ನು ಆಚರಿಸಲಾಗುತ್ತದೆ. ಅಗ್ನಿಶಾಮಕ ಸಿಬ್ಬಂದಿ ವರ್ಗಕ್ಕೆ ಉತ್ತೇಜನ ನೀಡುವುದಕ್ಕಾಗಿ ಉತ್ತಮ ಸೇವೆಗಾಗಿ ರಾಷ್ಟ್ರಪತಿಯವರ ಮತ್ತು ಮುಖ್ಯಮಂತ್ರಿಯವರ ಪದಕಗಳನ್ನು ಪ್ರದಾನ ಮಾಡಲಾಗುತ್ತದೆ. ಕಳೆದ ಒಂದು ದಶಕದಲ್ಲಿ ಜಿಲ್ಲೆಯ ೧೦ ಮಂದಿ ಅಗ್ನಿಶಾಮಕ ಅಧಿಕಾರಿ ಹಾಗೂ ಇತರ ಸಿಬ್ಬಂದಿಗಳು ಮಾನ್ಯಮುಖ್ಯಮಂತ್ರಿಗಳ ಪದಕ ಪಡೆದಿರುತ್ತಾರೆ. ಜಿಲ್ಲೆಯ ೩೦೪ ಮಂದಿ ಅಧಿಕಾರಿ/ಸಿಬ್ಬಂದಿ ವರ್ಗದವರು ಪ್ರೋತ್ಸಾಹ ಧನ/ನಗದು ಬಹುಮಾನ ಪಡೆದಿದ್ದು ಒಟ್ಟು ಬಹುಮಾನದ ಮೊತ್ತ ೨೭,೨೧೫.೦೦ ರೂಪಾಯಿಗಳು.

## ಗೃಹರಕ್ಷಕ ದಳ

ಕರ್ನಾಟಕ ಗೃಹರಕ್ಷಕ ಕಾಯಿದೆ ೧೯೬೨ರ ಪ್ರಕಾರ ರಚಿತವಾದ ಗೃಹರಕ್ಷಕ ದಳವು ಮೂಲತ: ಸ್ವಯಂಸೇವಾಸಂಸ್ಥೆಯಾಗಿದೆ. ೧೯೪೬ರ ಡಿಸೆಂಬರ್‌ನಲ್ಲಿ ಮೊತ್ತಮೊದಲಿಗೆ ಮುಂಬಯಿಯಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಉಡುಪಿಯಲ್ಲಿ ೨೦೦೦ನೇ ಇಸವಿಯಲ್ಲಿ ಕಾರ್ಯಾರಂಭ ಮಾಡಿತು. ಸದರಿ ದಳದ ಸದಸ್ಯರಾಗಲು ಕನಿಷ್ಠ ವಿದ್ಯಾರ್ಹತೆ ಏಳನೇ ತರಗತಿಯಲ್ಲಿ ಉತ್ತೀರ್ಣತೆ, ವಯೋಮಿತಿ ೨೦ ರಿಂದ ೪೫ ವರ್ಷಗಳು ಯಾವುದೇ ಶಿಕ್ಷೆ ಅನುಭವಿಸಿರದ ಹಾಗೂ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರದ ಸ್ತ್ರೀ ಪುರುಷರು ಇದರಲ್ಲಿ ಸದಸ್ಯತ್ವ ಪಡೆಯಬಹುದು. ಸದಸ್ಯರ ಸೇವಾವಧಿ ಮೂರು ವರ್ಷಗಳು. ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಪೋಲೀಸ್ ವರಿಷ್ಠಾಧಿಕಾರಿಯವರ ಕೋರಿಕೆ ಮೇರೆಗೆ ವಿವಿಧ ರೀತಿಯ ಬಂದೋಬಸ್ತ್ ಕಾರ್ಯನಿರ್ವಹಿಸಲು ಗೃಹರಕ್ಷಕರನ್ನು ನಿಯೋಜಿಸಲಾಗುತ್ತದೆ. ಚುನಾವಣಾ ಬಂದೋಬಸ್ತ್, ಸಭೆ ಸಮಾರಂಭಗಳು, ಗಣ್ಯವ್ಯಕ್ತಿಗಳ ಕಾರ್ಯಕ್ರಮ, ಸಂಚಾರ ನಿಯಂತ್ರಣ ಮುಂತಾದ ಕಾರ್ಯಗಳನ್ನು ಪೋಲೀಸರೊಂದಿಗೆ ಸೇರಿ ನಿರ್ವಹಿಸುವುದು ಹಾಗೂ ಸಾರ್ವಜನಿಕರಿಗೆ ಸೂಕ್ತ ತಿಳಿವಳಿಕೆ ನೀಡುವುದರ ಮೂಲಕ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಗೃಹರಕ್ಷಕರು ಮಹತ್ವದ ಪಾತ್ರ ನಿರ್ವಹಿಸುತ್ತಾರೆ.

ಗೃಹರಕ್ಷಕ ದಳದ ಸದಸ್ಯರಿಗೆ ರಕ್ಷಣಾ ತರಬೇತಿ, ಅಗ್ನಿಶಾಮಕ ತರಬೇತಿ, ಆಯುಧಗಳ ಬಳಕೆ ತರಬೇತಿ, ಪ್ರಥಮ ಚಿಕಿತ್ಸೆ ತರಬೇತಿ, ನಿಸ್ತಂತು ಸಂಪರ್ಕ ವ್ಯವಸ್ಥೆ ತರಬೇತಿ ಮುಂತಾದ ತರಬೇತಿಗಳನ್ನು ನೀಡಲಾಗುತ್ತದೆ.ಸದಸ್ಯರಿಗೆ ಕರ್ತವ್ಯ ನಿರ್ವಹಣೆಯಲ್ಲಿದ್ದಾಗ ದಿನವಹಿ ೯೦ ರೂಪಾಯಿ ಕರ್ತವ್ಯ ಭತ್ಯೆ, ೭೦ ರೂಪಾಯಿ ತರಬೇತಿ ಭತ್ಯೆ, ೨೨.೫೦ ರೂಪಾಯಿ ಕವಾಯತು ಭತ್ಯೆ, ಹಾಗೂ ಏಳು ದಿನಗಳ ಅವಧಿಗೆ ಐದು ರೂ. ಉಡುಪು ಶುಭ್ರತಾ ಭತ್ಯೆಗಳನ್ನು ನೀಡಲಾಗುತ್ತದೆ.

ಜಿಲ್ಲೆಯಲ್ಲಿ ಒಟ್ಟು ೪೮೪ ಗೃಹರಕ್ಷಕರಿದ್ದು ಸ್ತ್ರೀ ಸದಸ್ಯರ ಸಂಖ್ಯೆ ೭೨. ಜಿಲ್ಲೆಯಲ್ಲಿ ಗೃಹರಕ್ಷಕ ಸಂಘಟನೆಯ ಮುಖ್ಯಸ್ಥರಾದ ಜಿಲ್ಲಾ ಸಮಾದೇಷ್ಟರು ಡಿ.ಐ.ಜಿ.ಯವರ ಸಲಹೆಯಂತೆ ಸರ್ಕಾರದಿಂದ ನಾಮಕರಣಗೊಂಡ ಅಧಿಕಾರಿಯಾಗಿದ್ದು ಯಾವುದೇ ವೇತನ ಪಡೆಯದೇ ಸೇವೆ ಸಲ್ಲಿಸುತ್ತಾರೆ. ಗೃಹರಕ್ಷಕ ದಳವು ಮುಂದಿನ ಕಾಯಿದೆಗಳನ್ವಯ ಕಾರ್ಯನಿರ್ವಹಿಸುತ್ತದೆ. ೧. ೧೯೬೨ರ ಕರ್ನಾಟಕ ಗೃಹರಕ್ಷಕ ದಳ ನಿಮಯಗಳು ೨. ೧೯೬೩ರ ಕರ್ನಾಟಕ ಗೃಹರಕ್ಷಕ ದಳ ನಿಯಮಗಳು ೩. ಗೃಹರಕ್ಷಕ ದಳ ಕೈಪಿಡಿ. ಜಿಲ್ಲಾ ಗೃಹರಕ್ಷಕ ದಳವು ಜಿಲ್ಲಾದ್ಯಂತ ತನ್ನ ಶಾಖಾ ಕಛೇರಿಗಳನ್ನು ಹೊಂದಿದ್ದು ಅಲ್ಲಿಯ ಸಿಬ್ಬಂದಿ ವರ್ಗದ ಸಂಖ್ಯಾಬಲ ಕೆಳಕಂಡಂತಿದೆ.

**ಜಿಲ್ಲೆಯ ಗೃಹರಕ್ಷಕದಳ ಪ್ರಾರಂಭದಿಂದ ೨೦೦೫ರವರೆಗೆ ಆಗಿರುವ ವಾರ್ಷಿಕ ಖರ್ಚಿನ ವಿವರ**

| ವರ್ಷ | ವೆಚ್ಚ |
|---|---|
| ೨೦೦೦ | ೧,೨೫,೩೬೦ |
| ೨೦೦೧ | ೩,೭೫,೨೪೦ |
| ೨೦೦೨ | ೪,೫೮,೩೨೦ |
| ೨೦೦೩ | ೭,೨೨,೮೫೩ |
| ೨೦೦೪ | ೭,೫೦,೯೫೦ |
| ೨೦೦೫ | ೮,೬೮,೫೪೭ |

| **ಘಟಕವಿರುವ ಸ್ಥಳ** | **ಸಿಬ್ಬಂದಿ ಸಂಖ್ಯೆ** |
|---|---|
| ಉಡುಪಿ | ೭೪ |
| ಮಣಿಪಾಲ | ೬೦ |
| ಕಾಪು | ೪೦ |
| ಪಡುಬಿದ್ರಿ | ೫೦ |
| ಕಾರ್ಕಳ | ೬೦ |
| ಬ್ರಹ್ಮಾವರ | ೯೦ |
| ಕುಂದಾಪುರ | ೮೦ |
| ಬೈಂದೂರು | ೩೦ |
| **ಒಟ್ಟು** | **೪೮೪** |

ಜಿಲ್ಲೆಯಲ್ಲಿ ಪ್ರತೀ ವರ್ಷ ಡಿಸೆಂಬರ್ ೬ ರಿಂದ ೧೨ರವರೆಗೆ ಗೃಹರಕ್ಷಕದಳ ದಿನಾಚರಣೆ ಹಾಗೂ ಸಾರ್ವಜನಿಕರಿಗೆ ಅರಿವಿನ ಸಪ್ತಾಹವನ್ನು ಏರ್ಪಡಿಸಲಾಗುತ್ತದೆ. ಇದರ ಅಂಗವಾಗಿ ಕವಾಯತು ಪ್ರದರ್ಶನ, ಹೊರಾಂಗಣ ಕ್ರೀಡೆಗಳು, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಡಲಾಗುತ್ತದೆ. ಅಲ್ಲದೆ, ಗೃಹರಕ್ಷಕ ದಳದ ಚಟುವಟಿಕೆಗಳ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಗುತ್ತದೆ.

* * * * *